(ಸದನವು 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು, ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು:– ಒಂದು ಹುಟ್ಟು ಹಬ್ಬದ ಶುಭಾಶಯ ಇದೆ.

ಈ ದಿನ ದಿನಾಂಕ 15.07.2014ರಂದು ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರಾಗಿರುವ ಶ್ರೀ ಆರ್. ರೋಷನ್ ಬೇಗ್ ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ವಾರ್ತಾ, ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಮಿತಿಯ ಸಚಿವರು ಇವರಿಗೆ ಜನ್ಮದಿನದ ಶುಭಾಶಯಗಳು. ಈ ಸಂದರ್ಭದಲ್ಲಿ ಭಗವಂತನು ತಮಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

1. ವರದಿಗಳನ್ನೊಪ್ಪಿಸುವುದು

ಶ್ರೀ ಕೆ.ಬಿ. ಕೋಳೀವಾಡ್ (ರಾಣೆಬೆನ್ನೂರು):– ಮಾನ್ಯ ಅಧ್ಯಕ್ಷರೆ, 2013–14ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು:– ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರು:– ಈಗ ವಿತ್ತೀಯ ಕಾರ್ಯಕಲಾಪಗಳು. 2014–15ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಯ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ ಮತ್ತು ಮತಕ್ಕೆ ಹಾಕುವುದು.

2. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಇಂಧನ ಇಲಾಖೆಯ ಅನುದಾನ ಬೇಡಿಕೆಯ ಮೇಲೆ ಸರ್ಕಾರದ ಉತ್ತರ

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಅಧ್ಯಕ್ಷರೆ, ಬಹಳ ನಗು ಮುಖದಿಂದ ಒಳಗಡೆ ಬಂದಿರಿ.

ಶ್ರೀ ಎಸ್. ಮುನಿರಾಜು:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬಂದರು. ಆದ್ದರಿಂದ ಎಲ್ಲಾ ಕಡೆ ಮಳೆ ಬರುತ್ತಿದೆ. ಅದಕ್ಕೋಸ್ಕರ ಮಾನ್ಯ ಸಚಿವರಿಗೆ ಧನ್ಯವಾದಗಳು.

ಶ್ರೀ ಸಿ.ಟಿ. ರವಿ:– ಎಲ್ಲಾ ಕಡೆ ಮಳೆ ಮತ್ತೆ ಮುಂದುವರೆಯಬೇಕೆಂದರೆ, ಮಾನ್ಯ ಡಿ.ಕೆ. ಶಿವಕುಮಾರ್ ಅವರನ್ನು ದೇವಸ್ಥಾನದಲ್ಲಿಯೇ ಬಿಡುವುದು ಒಳ್ಳೆಯದು ಅಂತ.

ಅಧ್ಯಕ್ಷರು:– ಉತ್ತರ ಹೇಳಿದ ಮೇಲೆ

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:– ನಮ್ಮಲ್ಲಿ ಮಳೆ ಜಾಸ್ತಿಯಾಗಿ ಕೊಚ್ಚಿ ಹೋಗಿದೆ. ಸರ್ಕಾರ ಹಣ ಆದರೂ ಬಿಡುಗಡೆ ಮಾಡಲಿ. ರಸ್ತೆಗಳಿಗೆ ಹಣ ಬಿಡುಗಡೆ ಮಾಡುವಂತಹ ವ್ಯವಸ್ಥೆ ಮಾಡಲಿ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಅಧ್ಯಕ್ಷರೆ, ಇಂಧನ ಇಲಾಖೆಯ ಬೇಡಿಕೆಗೆ ಉತ್ತರ ಕೊಡಲು ಈಗ ಬಂದೆ. ಬರುವಾಗ entrance ನಲ್ಲಿ ಯಾರೋ ಒಬ್ಬರು ಬಂದು ನನಗೆ ಒಂದು ನಿಂಬೆ ಹಣ್ಣು ಕೊಟ್ಟರು. ನನಗೆ ಅಲರ್ಜಿ ಆಗುತ್ತದೆ ಎಂದು ನಾನು ಸುಗಂದರಾಜ ಹೂವಿನ ಹಾರ ಹಾಕಿಸಿಕೊಳ್ಳುವುದಿಲ್ಲ. ನಮ್ಮ ಹಳ್ಳಿಯವರು ರೂಡಿ ಮಾಡಿಕೊಂಡಿದ್ದಾರೆ. ಬೇರೆ ಯಾವುದಾದರೂ ಹೂವಿನ ಹಾರ ಹಾಕುತ್ತಾರೆ ಇಲ್ಲವಾದರೆ ನಿಂಬೆ ಹಣ್ಣು ಕೊಡುವುದು ಮಾಡುತ್ತಾರೆ. ಹಾಗೆಯೇ ನಾನು entrance ನಲ್ಲಿ ಬರುವಾಗ ಅವರು ಬಂದು ನೀವು ಇವತ್ತು reply ಕೊಡುತ್ತಿದ್ದೀರಿ ಒಳ್ಳೆಯದಾಗಲಿ ಎಂದು ಒಂದು ನಿಂಬೆ ಹಣ್ಣು ಕೊಟ್ಟರು. ನನ್ನ ಸ್ನೇಹಿತ ಎದುರಿಗೆ ಇರುವವರಿಗೆ ಕಾಣದ ಹಾಗೆ ನಿಂಬೆ ಹಣ್ಣು ಇಡುತ್ತಿದ್ದೀಯಾ ಎಂದು ರೇಗಿಸಿದರು. ಆಗ ನನಗೆ ಒಂದು ಮಾತು ಜ್ಞಾಪಕ ಬಂತು. ಸರ್ವಜ್ಞ ಒಂದು ಕಡೆ ಒಂದು ಮಾತು ಹೇಳುತ್ತಾನೆ. "ನಿಂಬೆಗಿಂ ಹುಳಿಯಿಲ್ಲ, ದುಂಬಿಗಿಂ ಕರಿಯಿಲ್ಲ, ಶಂಭುಕಿನ ಅಧಿಕ ದೇವರಿಲ್ಲ." ಎಲ್ಲಾ ಹುಳಿಗಳು ಇವೆ, ದ್ರಾಕ್ಷಿ ಹುಳಿ, ಹುಣಸೆ ಹುಳಿ, ಮಾವಿನ ಹುಳಿ ಇದೆ. ನಿಂಬೆ ಹುಳಿ ಎನ್ನುವುದು ಬಹಳ ಶ್ರೇಷ್ಠವಾದ ಹುಳಿ ಅದು. ಎಲ್ಲಕ್ಕಿಂತ ಅತಿ ಜಾಸ್ತಿ acid content ಇರುವಂಥದ್ದು. ದುಂಬಿಗಿಂ

ಕರಿಯಿಲ್ಲ ಎಂದರೆ, ನಮ್ಮ ಹಳ್ಳಿಗಳಲ್ಲಿ ದುಂಬಿ ಇದೆಯಲ್ಲ ಕಪ್ಪು ಅದು ಮುಖಕ್ಕೆ glass ಹೊಡೆದ ಹಾಗೆ ಹೊಡೆಯುತ್ತಿರುತ್ತದೆ. ಇಲ್ಲಿರುವ ಕಪ್ಪು. ನನ್ನ ಕೂದಲಿನಲ್ಲಿರುವ ಕಪ್ಪು, ನಿಮ್ಮ ಬಟ್ಟೆಯಲ್ಲಿರುವ ಕಪ್ಪು, ಎಲ್ಲಾ ಕಪ್ಪಿಗಿಂತ ಆ ದುಂಬಿ ಇರುವ ಕಪ್ಪು ಬಹಳ ಶ್ರೇಷ್ಟವಾದುದು. ಶಂಬುಕಿನ ಅಧಿಕ ದೇವನಿಲ್ಲ. ಶಿವ ಈಶ್ವರ ಎಲ್ಲಾ ದೇವರಿಗಿಂತ ದೊಡ್ಡವನು ಪರಮೇಶ್ವರ ಎಂದು ನಮ್ಮ ಹಿಂದು ಧರ್ಮದಲ್ಲಿ ಹೇಳುತ್ತೇವೆ. ಅದಾದ ಮೇಲೆ ಏನು ಹೇಳುತ್ತಾರೆಂದರೆ, "ನಿಂಬೆಗಿಂ ಹುಳಿಯಿಲ್ಲ, ದುಂಬಿಗಿಂ ಕರಿಯಿಲ್ಲ, ಶಂಬುಕಿನ ಅಧಿಕ ದೇವನಿಲ್ಲ, ನಂಬಿಕೆಗಿನ ದೊಡ್ಡ ಗುಣ ಇಲ್ಲ ಎಂದು ಹೇಳುತ್ತಾರೆ. So ಆ trust ಇದೆಯಲ್ಲ ನಂಬಿಕೆ ಅದಕ್ಕಿಂತ ದೊಡ್ಡ ಗುಣ ಇಲ್ಲ. ನನಗ ಈ ರಾಜ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ನನ್ನ ಮೇಲೆ ಅಪಾರವಾದ ನಂಬಿಕೆ ಇಟ್ಟು ಈ ರಾಜ್ಯದ ಜನತೆಯ ವಿದ್ಯುತ್ ಸಮಸ್ಯೆ ಬಗೆಹರಿಸುವುದಕ್ಕೆ ಶಿವಕುಮಾರ್ ಏನಾದರೂ ಮಾಡಬಹುದು ಎಂಬ ನಂಬಿಕೆಯಿಂದ ನನಗೆ ಈ ಇಲಾಖೆಯನ್ನು ಕೊಟ್ಟಿದ್ದಾರೆ. ಅವರಿಗೆ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಡ ಇರಲಿ ಅದರ ಜೊತೆಗೆ ಅವರಿಗಿಂತ ನೀವು ವಿರೋಧ ಪಕ್ಷದ ಎಲ್ಲಾ ನನ್ನ ಸ್ನೇಹಿತರು ಬಸವರಾಜ ಬೊಮ್ಮಾಯಿಯವರಿಂದ ಹಿಡಿದು ಯಾರ್‍ಯಾರು ಮಾತನಾಡಿದ್ದಾರೆ ಎಲ್ಲರೂ ಕೂಡ ಮಾತನಾಡಿದವರು ಶಿವಕುಮಾರ್ ಏನೋ ಒಂದು ಮಾಡುತ್ತಾರೆ. ಎನ್ನುವ ಒಂದು ನಂಬಿಕೆ ಇಟ್ಟುಕೊಂಡಿದ್ದಾರೆ. ಮಾಧ್ಯಮ ಇರಬಹುದು, ವಿರೋಧ ಪಕ್ಷದವರಿರಬಹುದು, ನಮ್ಮ ಪಕ್ಷದ ಸ್ನೇಹಿತರು ಇರಬಹುದು, ಅವರೂ ಕೂಡ ಬಹಳ ನಂಬಿಕೆ ಇಟ್ಟುಕೊಂಡು ಶಿವಕುಮಾರ್ ಏನೋ ಮಾಡುತ್ತಾರೆಂದು ನಂಬಿಕೆಯಿಂದ ಆಶಾದಾಯಕವಾಗಿದ್ದಾರೆ. ಈ ಇಲಾಖೆ ಎಂತಹ ಇಲಾಖೆ ಎಂದರೆ, ಸರ್ಕಾರದಲ್ಲಿ ನಾನು ಮಂತ್ರಿ, ನನಗೆ Energy Department Principal Secretarty, Secretary ಈ ಇಲಾಖೆಯಲ್ಲಿ ಇಬ್ಬರೂ ಬಹಳ ಮುಖ್ಯಸ್ಥರು. ನಾವು ಏನೇ ಈ ಇಲಾಖೆಯ ಜವಾಬ್ದಾರಿ ತೆಗೆದುಕೊಂಡಿದ್ದರೂ ಕೂಡ ultimately, ನಾವು ಸುಮ್ಮನೆ ಒಂದು figure heads ಅಷ್ಟೆ. ಈ ಇಲಾಖೆಯಲ್ಲಿ ನಾವು ವರುಣ ದೇವನನ್ನು depend

ಆಗಬೇಕು. ಒಂದು ಕಡೆ power producer ಮೇಲೆ depend ಆಗಬೇಕು, ಇನ್ನೊಂದು ಕಡೆ power distributor ಗೆ depend ಆಗಿರಬೇಕು. ಒಂದು ಕಡೆ consumer ಮೇಲೆ depend ಆಗಬೇಕು. ಇಲ್ಲಿ ಒಂದು section ಅಲ್ಲ, ಎಲ್ಲಾ section ಮೇಲೂ ಕೂಡ ಒಬ್ಬರನ್ನೊಬ್ಬರ ಮೇಲೆ ನಂಬಿಕೆ ಇಟ್ಟುಕೊಂಡು ಹೋಗಬೇಕಾಗುತ್ತದೆ. ಒಬ್ಬ Linemanಗೆ ಎಷ್ಟು important ಇದೆ ಒಬ್ಬ ಮಂತ್ರಿಗೂ ಅಷ್ಟೆ important ಇದೆ. ಒಬ್ಬರಿಗೊಬ್ಬರು ಬಹಳ ನಂಬಿಕೆ ಮೇಲೆ ಕೆಲಸ ಮಾಡಬೇಕಾಗುತ್ತದೆ. ನಾನು ಒಬ್ಬ ಮಂತ್ರಿಯಾಗಿದ್ದೇನೆಂದು ನಿಮಗೆ ಬೇಕಾದ ಹಾಗೆ connection ಕೊಡುವುದಕಾಗುವುದಿಲ್ಲ. ನಿಮಗೆ ಬೇಕಾದ ಹಾಗೆ ಒಂದು ದರ ಕೊಡುವುದಕ್ಕಾಗುವುದಿಲ್ಲ. ಇಲ್ಲಿ power purchase ಮಾಡುವಾಗ ನನಗೆ ಬೇಕಾದ ಹಾಗೆ ನಾವು purchase ಮಾಡುವುದಕ್ಕಾಗುವುದಿಲ್ಲ. ಬೇಕಾದ ದರವೂ ಕೊಡುವುದಕ್ಕೆ ಸಾಧ್ಯವಿಲ್ಲ. ಅವನು ಯಾರೋ ಒಬ್ಬ power producer ಮಾಡುತ್ತಿರುತ್ತಾನೆ, ಸರ್ಕಾರ produce ಮಾಡುತ್ತಿರುತ್ತದೆ. ಸರ್ಕಾರ produce ಮಾಡಲಿ, ಅಥವಾ ಖಾಸಗಿ ಕಂಪನಿಯವರು produce ಮಾಡಲಿ, ಒಬ್ಬ consumer ಗೆ ತನ್ನದೇ ಆದ ವಿಚಾರದಲ್ಲಿ ಆತ ಮಾರುವುದಕ್ಕೆ ಸಾಧ್ಯವಿಲ್ಲ. ತನ್ನದೇ ಆದ rate fix ಮಾಡುವುದಕ್ಕೂ ಸಾಧ್ಯವಿಲ್ಲ. Ultimately KERC ಎಂದು ಒಂದು ತಕ್ಕಡಿ ಹಿಡಿದುಕೊಂಡು ಮೇಲೆ ಕೂತಿರುತ್ತಾರೆ. How he has to decide? ನಿಮ್ಮ product ನ ಬೆಲೆ ಏನಿದೆ ಅದರ ಮೇಲೆ ನಿಮಗೆ ಎಷ್ಟು percentage ಇರಬೇಕೆಂದು ಅವರೇ ತೀರ್ಮಾನ ಮಾಡಬೇಕು. ಒಬ್ಬ consumer ಗೆ, ಪುಟ್ಟಣ್ಣಯ್ಯರವರಿಗೆ, ರೈತರಿಗೆ connection ಕೊಡಬೇಕೆಂದರೆ ಅವರೇ ಈ rate fix ಮಾಡಬೇಕು. ಯಾವುದಾದರೂ Industries ಗೆ ಕೊಡಬೇಕೆಂದರೆ ಅದಕ್ಕೂ ಅವರೇ ಈ rate fix ಮಾಡಬೇಕು. So, ultimately ಒಂದು ನ್ಯಾಯ, ಒಬ್ಬರಿಗೊಬ್ಬರಿಗೆ ಸೌಹಾರ್ದತೆ ಇದೆಲ್ಲಾ ಕೂಡ ಈ ಐದು ಕಂಪನಿಗಳೂ ಕೂಡ, they are the independent companies. ಒಂದು ಕಡೆ transmission ಇರಬಹುದು, ಒಂದು ಕಡೆ power generate ಮಾಡುವವರು ಇರಬಹುದು, ಒಂದು ಕಡೆ distribution ಇರಬಹುದು, ಎಲ್ಲರೂ ಕೂಡ ಅವರವರದ್ದೇ ಆದ independent, ಅವರದ್ದೇ ಆದ ಎಲ್ಲಾ

ವಿಚಾರಗಳಲ್ಲಿಯೂ ತೀರ್ಮಾನ ಮಾಡುವಂತಹ ಇಲಾಖೆ. ಅದರಿಂದ ನಾನು ಒಬ್ಬರೊಬ್ಬರ ಮೇಲೆ ಜವಾಬ್ದಾರಿ fix ಮಾಡಿ ನಾನು ಏಕಾಏಕಿ ಮಾನ್ಯ ಶೆಟ್ಟರ್ ಇದ್ದರು, ಶೆಟ್ಟರ್ ಕಾಲದಲ್ಲಿ ಏನು ಹೀಗಾಗಿ ಹೋಯಿತು, 12 ರೂ.ಗೆ ವಿದ್ಯುತ್ ಖರೀದಿ ಮಾಡಿ ಬಿಟ್ಟರು ಎಂದು I cannot accuse any Government. ಕೃಷ್ಣರವರ ಕಾಲದ್ದು ಯಾವುದಾದರೂ ಹೇಳುವುದು, ರೇವಣ್ಣ ರವರ ಕಾಲದ್ದು ಹೇಳುವುದು, automatic ಆಗಿ ನಾನು ಅವರ ಮೇಲೆ accuse ಮಾಡುವುದಕ್ಕೆ ಸಾಧ್ಯವಿಲ್ಲ. ಅವರೇ ಸರ್ಕಾರ ಏನೇ ತೀರ್ಮಾನಗಳು ಆ ಸಂದರ್ಭದಲ್ಲಿ ನಡೆದಿದ್ದರೂ ಕೂಡ ultimately ಬೇಕಾದಷ್ಟು chain ಮೇಲೆ ಇಲ್ಲಿ ತೀರ್ಮಾನಗಳು ಆಗಿರುತ್ತವೆ. ನಾನು ಹಿಂದೆ ಆದಂತಹ ವಿಚಾರಗಳಿಗೆ, ಚರ್ಚೆಗಳಿಗೆ ಘೋಷಣೆ ಮಾಡಿಕೊಂಡು, ತೋಡಿಕೊಂಡು, ಇದಕ್ಕೆ ನ್ಯಾಯ ಹುಡುಕಿಕೊಂಡು.. this is not the time for me. ಏಕೆಂದರೆ ನನ್ನ ಮೇಲೆ ಒಂದು ನಂಬಿಕೆ ಇಟ್ಟಿದ್ದೀರಿ ಏನೆಂದರೆ, something he should do it. ಈ ವರ್ಷ ಒಂದು ತೀರ್ಮಾನ ಮಾಡಿದ ತಕ್ಷಣ ನಾಳೆ ನಾಡಿದ್ದು ನನಗೆ power ಜಾಸ್ತಿ ಬಂದು ಬಿಡುತ್ತದೆ, ನಾನು problem sort out ಮಾಡುತ್ತೇನೆ, ಎನ್ನುವುದು ಅಲ್ಲ. ಬಂದ ತಕ್ಷಣ ಅವರು ದೇವಸ್ಥಾನಕ್ಕೆ ಹೋಗಿದ್ದಿರಿ ಮಳೆ ಬಂತು ದೇವರ ಮೇಲೆ ಭಾರ ಹಾಕಿದಿರಿ ಎಂದು. Yes, ಅದೂ ಒಂದು ನಂಬಿಕೆ, ನಾವು ದೇವಸ್ಥಾನಗಳನ್ನು ಕಟ್ಟಿದ್ದೇವೆ, ಪೂಜಾರಿಗಳನ್ನು ಇಟ್ಟಿದ್ದೇವೆ. "ಅರ್ಚಕಸ್ಯ ಪ್ರಭಾವೇನ ಶಿಲಾದ್ಯೀತಿ ಶಂಕರಂ," ಅರ್ಚಕನ ಪ್ರಭಾವದಿಂದ ಶಿಲೆಯಲ್ಲಿಯೂ ಶಂಕರ ಕಾಣುವಂತೆ, ನಾನು ದೇವರಿಗೆ ನೇರವಾಗಿ ಕೇಳುವುದಕ್ಕಾಗುವುದಿಲ್ಲ. ದೇವಸ್ಥಾನಕ್ಕೆ ಹೋದರೆ ಭಕ್ತನಿಗೂ ಭಗವಂತನಿಗೂ ವ್ಯವಹಾರ ನಡೆಯುವಂಥ ಸ್ಥಳ ದೇವಾಲಯ. ಆ ದೇವಾಲಯಕ್ಕೆ ಹೋದರೆ ಮದ್ಯ ಪೂಜಾರಿಯನ್ನು ಇಟ್ಟುಕೊಂಡೇ ನಾವು ಕೇಳುವಂಥ ಸಂದರ್ಭ ಅಥವಾ ನಾವಿಬ್ಬರೇ ಹೋಗಿ ದೇವರನ್ನು ನನ್ನ ಕಷ್ಟ ನಿವಾರಣೆ ಮಾಡಪ್ಪಾ ಎನ್ನುವಂಥ ಸಂದರ್ಭ. ಹೀಗೆ ನಾವು ಮಳೆರಾಯನ ಮೊರೆ ಹೋಗಿದ್ದು, ನಾನು statement ಮಾಡಿದೆ, ಇಲ್ಲವೆಂದು ಹೇಳುವುದಿಲ್ಲ. ಹಾಗಂತ ನಾನು ಸಮರ್ಥನಲ್ಲ, ನನ್ನ ಕೈಯಲ್ಲಿ ಆಗುವುದಿಲ್ಲವೆಂದರ್ಥವಲ್ಲ. Yes, we believe.

ಈಗ ನಾವು ನೀವೆಲ್ಲರೂ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದೆವು. ನೀವು ಪ್ರಮಾಣ ವಚನ ತೆಗೆದುಕೊಂಡಿರಿ. ಮುಖ್ಯಮಂತ್ರಿಗಳು ಪ್ರಮಾಣ ವಚನ ತೆಗೆದುಕೊಂಡರು. ಎಲ್ಲ ಶಾಸಕರುಗಳು ಪ್ರಮಾಣ ವಚನವನ್ನು ತೆಗೆದುಕೊಂಡರು. ನಾವು ಏನೆಂದು ಪ್ರಮಾಣ ವಚನವನ್ನು ತೆಗೆದುಕೊಂಡೆವು. ಸಂವಿಧಾನದಲ್ಲಿ ಹೇಳಿರುವುದೆಲ್ಲವನ್ನು ಹೇಳಿ ತದನಂತರ ಕೊನೆಗೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ, ನಿಜ ಸ್ವಾಮಿ, ದೇವರ ಹೆಸರಿನಲ್ಲಿ ಅಥವಾ ಸತ್ಯ ನಿಷ್ಠೆ ಹೆಸರಿನಲ್ಲಿ ಪ್ರಮಾಣ ಮಾಡುತ್ತೇವೆ. So ultimately we are depending upon others. That is the trust.

ಶ್ರೀ ಡಿ.ಎನ್. ಜೀವರಾಜ್:- ಆ ನಂಬಿಕೆಗೆ ಮಳೆ ಬಂತಲ್ಲ.

ಶ್ರೀ ಡಿ.ಕೆ. ಶಿವಕುಮಾರ್:- ಅದನ್ನೇ ನಾನು ಹೇಳುತ್ತಿರುವುದು. ಇದು ನಮ್ಮ ನಂಬಿಕೆ. ಎಲ್ಲಿ ಮನಸ್ಸಿದೆಯೋ ಅಲ್ಲಿ ಮಾರ್ಗವಿದೆ. ಎಲ್ಲಿ ಭಕ್ತಿಯಿದೆಯೋ ಅಲ್ಲಿ ಭಗವಂತನಿದ್ದಾನೆ. ಎಲ್ಲಿ ಶ್ರಮವಿದೆಯೋ ಅಲ್ಲಿ ಫಲವಿದೆ. ಆದುದರಿಂದ ಫಲಕ್ಕೋಸ್ಕರ ನಾವು ಶ್ರಮ ಪಡಲೇಬೇಕಲ್ಲ. ನಾವು ನೀವೆಲ್ಲರೂ ಸೇರಿ ಶ್ರಮ ಪಟ್ಟರೆ ಮಾತ್ರ ಸಾಧ್ಯ. ಇದು ಒಬ್ಬರ ಕೈಯಿಂದ ಆಗುವಂಥ ವಿಚಾರವಲ್ಲ. ಎಲ್ಲರೂ ಸೇರಿ ಇಲ್ಲಿ Team ಆಗಿ ಕೆಲಸ ಮಾಡಬೇಕಾಗುತ್ತದೆ. Team ಆಗಿ ಕೆಲಸ ಮಾಡಬೇಕಾಗುತ್ತದೆ. Team ಆಗಿ ಸಲಹೆಗಳನ್ನು ಕೊಡಬೇಕಾಗುತ್ತದೆ. ಏಕೆಂದರೆ ನಮ್ಮ ರಾಜ್ಯಕ್ಕೆ ವಿದ್ಯುತ್ ವಿಚಾರದಲ್ಲಿ ನಮ್ಮ ರಾಜ್ಯದ್ದೇ ಆದಂಥ ಇತಿಹಾಸವಿದೆ. ಏನು, ಇಡೀ ದೇಶದಲ್ಲಿಯೇ ವಿದ್ಯುತ್ ಉತ್ಪಾದನೆಯನ್ನು ಮೊದಲು ಕರ್ನಾಟಕ ರಾಜ್ಯದಲ್ಲಿ ಮಾಡಿದಗದು ಎನ್ನುವ ಇತಿಹಾಸವಿದೆ. 1902 ರಲ್ಲಿ ನಾವು ಪ್ರಥಮವಾಗಿ ಶಿವನಸಮುದ್ರದಲ್ಲಿ ಕೆ.ಜಿ.ಎಫ್. ಗೆ ನಾವು ವಿದ್ಯುತ್ ಉತ್ಪಾದನೆ ಮಾಡುವಂಥದ್ದಾಯಿತು ಎನ್ನುವ ಇತಿಹಾಸವಿದೆ. ಬೆಂಗಳೂರು ನಗರಕ್ಕೆ, ಹೀಗೆ ಪ್ಯಾರಿಸ್ ದೇಶಕ್ಕೆ ಲೆಕ್ಕ ಹಾಕಿಕೊಂಡರೆ ನಾವು ಹೊರಗಡೆಯ ರಾಷ್ಟ್ರಗಳಿಗೆ ಲೆಕ್ಕ ಹಾಕಿದರೆ ನಾವು ಇನ್ನೂ ಬಹಳ ಮುಂದೆ ಇದ್ದೇವೆ. Progressive ನಲ್ಲಿ ಸ್ವಲ್ಪ ಹಿಂದೆ ಮುಂದೆ ಆಗಿರಬಹುದು. ಬೆಂಗಳೂರು ಸಿಟಿಗೆ 110 ರಿಂದ 115 ವರ್ಷದ ಹಿಂದೆ ವಿದ್ಯುತ್‌ನ್ನು ಕೊಟ್ಟಂಥ ಇತಿಹಾಸ ನಮ್ಮದು. ನಾವು ನಮ್ಮದೇ

ಆದಂಥ ವೇಗದಲ್ಲಿ ಸಾಧನೆಯನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ನಮಗಿಂತಲೂ ಕೆಲವು ಬೇಕಾದಷ್ಟು ಜನರು ಬಂದಿದ್ದಾರೆ. But ultimately ನಾವು ಯಾರನ್ನೋ ಒಬ್ಬರನ್ನು ನಂಬಿ ಈ ಕೆಲಸವನ್ನು ಈ ಸಂದರ್ಭದಲ್ಲಿ ನಾವು ಮಾಡಬೇಕಾಗಿದೆ. ಇವತ್ತು ಈ ವಿದ್ಯುತ್ ಇಲಾಖೆಯ ಬೇಡಿಕೆಯೇನಿದೆ, ಈ ಇಲಾಖೆಯಲ್ಲಿ ಅನೇಕ ಸಮಸ್ಯೆಗಳನ್ನು ನಾವೆಲ್ಲಾ ಹೊತ್ತುಕೊಂಡಿದ್ದೇವೆ. ಇವತ್ತು ಹಲವಾರು ಸದಸ್ಯರುಗಳು ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಸದಸ್ಯರುಗಳು ಮಾತನಾಡಿದ್ದಾರೆ. ನಮ್ಮಲ್ಲಿ ದೊಡ್ಡ transmission ಗಳ ಬಗ್ಗೆ ಹೇಳಿದ್ದಾರೆ. Solar Energy ಬಗ್ಗೆ ಹೇಳಿದ್ದಾರೆ. ಈಗ ಇಡೀ ಪ್ರಪಂಚದಲ್ಲಿ ಈ ಸೂರ್ಯನ ಬೆಳಕಿನಿಂದ ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಚರ್ಚೆಯಾಗುತ್ತಿದೆ. ಭಾರತದಲ್ಲಿಯೂ ಕೂಡ ಬೇರೆ ಬೇರೆ ರಾಜ್ಯಗಳಲ್ಲಿ solar energy ಬಗ್ಗೆ ಚರ್ಚೆಯಾಗುತ್ತಿದೆ. Ultimately, ಈ solar machine ಅನ್ನು ಪ್ರಾರಂಭ ಮಾಡಿದಾಗ ನಮ್ಮಲ್ಲಿರುವ ಬೆಳಗಾಂನಲ್ಲಿ ಮತ್ತು ಕೋಲಾರದಲ್ಲಿ ಪ್ರಯೋಗವಾಯಿತು. ಬೆಳಗಾವಿಯಲ್ಲಿ, ಕೋಲಾರದಲ್ಲಿ 3 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯ ಯುನಿಟ್ ಹಾಕಿ ಪ್ರಯೋಗ ಮಾಡಿದೆವು. ಹೀಗಾಗಿ ಈ ವಿದ್ಯುತ್ ವಿಚಾರದಲ್ಲಿ ಒಂದು ದೊಡ್ಡ ಇತಿಹಾಸವಿದೆ. ಆಮೇಲೆ ನಾವು ಕೂಡ ಉದಾರಿಗಳು ಈ ರೈತರ ಬಗ್ಗೆ. ಈಗಿರುವ ನಮ್ಮ ಸರ್ಕಾರ, ಹಿಂದೆ ಇದ್ದಂಥ ಸರ್ಕಾರಗಳು, ಬೇರೆ ರಾಜ್ಯಕ್ಕೆ compare ಮಾಡಿದರೆ ನಾವು ರೈತರ ಬಗ್ಗೆ ಒಳ್ಳೊಳ್ಳೆಯ ತೀರ್ಮಾನಗಳನ್ನು ಸರ್ಕಾರಕ್ಕೆ ಭಾರವಾದರೂ ಚಿಂತೆಯಿಲ್ಲ, ರೈತನನ್ನು ಉಳಿಸಬೇಕು. ಏಕೆಂದರೆ ರೈತನಿಗೆ ಸಂಬಳವಿಲ್ಲ. ರೈತನಿಗೆ pension ಇಲ್ಲ, ರೈತನಿಗೆ promotion ಇಲ್ಲ, ರೈತನಿಗೆ ಲಂಚ ಬರುವುದಿಲ್ಲ. ಆದುದರಿಂದ ಏನಾದರೂ ಮಾಡಿ ಅವನನ್ನು ಉಳಿಸಬೇಕು. ಬೇರೆಯವರಿಗೆಲ್ಲರಿಗೂ promotion ಇದೆ. ಬೇರೆಯವರಿಗೆಲ್ಲಾ ಅವಕಾಶ ಇದೆ. ಈ ರೈತನಿಗೆ ಏನೂ ಇಲ್ಲ. ಅವನು ಬೆಳಿಗ್ಗೆಯಿಂದ ಸಂಜೆಯವರೆಗೂ ಬಡಿದಾಡುವುದೇ ಆಗುತ್ತದೆ. ಸೂರ್ಯನನ್ನು ನೋಡಬೇಕು, ಮಳೆ ನೋಡಬೇಕು, current ನೋಡಬೇಕು, ಯಾರೋ ತೀರ್ಮಾನ ಮಾಡಿದ ಬೆಲೆಗೆ ಅವನು ಬೆಳೆದ ಬೆಳೆಯನ್ನು ಮಾರಬೇಕು. ಆದುದರಿಂದ ರೈತರನ್ನು ರಕ್ಷಣೆ ಮಾಡುವ ಸಲುವಾಗಿ ನಾವು

ಬೇಕಾದಷ್ಟು ತೀರ್ಮಾನಗಳನ್ನು ಮಾಡಿದ್ದೇವೆ. ತೀರ್ಮಾನ ಮಾಡಿ ಇವತ್ತು ಎಂಥ ಪರಿಸ್ಥಿತಿಯಲ್ಲಿದ್ದೇವೆಂದರೆ, ಒಂದು ಕಡೆ ಸಂತೋಷವು ಆಗುತ್ತದೆ. ಒಂದು ಕಡೆ ರೈತನಿಗೆ ವಿಚಾರವನ್ನು ತಿಳಿಸಲೇಬೇಕೆಂದು, ಇವತ್ತೇನು ನಾವು ನಮ್ಮ ರಾಜ್ಯದಲ್ಲಿ ಏನು power ಅನ್ನು produce ಮಾಡುತ್ತಿದ್ದೇವೆ, ಏನು ಮಾರುತ್ತಿದ್ದೇವೆ, 37% of the power ನಾವು ರೈತರಿಗೋಸ್ಕರ ಕೊಡುತ್ತಿದ್ದೇವೆ. 6200 ಕೋಟಿ ರೂ.ಗಳನ್ನು subsidy ಗಾಗಿ ಇಟ್ಟಿದ್ದೇವೆ. ಬಹುಶಃ ಇದು 8 ಸಾವಿರ ಕೋಟಿ ರೂ.ಗಳವರೆಗೂ ಹೋಗಬಹುದು. So, almost ಇದನ್ನು ಸರ್ಕಾರ bear ಮಾಡುತ್ತದೆ. ಈ ಸರ್ಕಾರ ಬಂದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು, ಏನಾದರೂ ಮಾಡಿ ಒಂದು ಬದಲಾವಣೆ ಮಾಡಬೇಕು, ರೈತರಿಗೆ ಸಹಾಯ ಮಾಡಬೇಕು ಎಂದು ಹೇಳಿ various schemes ತಂದರು ಮತ್ತು ಏನಾದರೂ ಮಾಡಿ one hour rise ಮಾಡಬೇಕು ಎಂದರು. ಆಯಿತು ಮಾಡೋಣ rise, ಆದರೆ ಅದಕ್ಕೆ ದುಡ್ಡು ಕೊಡುವವರು ಯಾರು ಎಂದಾಗ ಅವರು ನಾನು ಕೊಡುತ್ತೇನೆಂದರು. So, ಆರು ಗಂಟೆಗೆ 6 ಸಾವಿರ ಕೋಟಿ ಆದರೆ, ಏಳು ಗಂಟೆಗೆ 7 ಸಾವಿರ ಕೋಟಿ ರೂ.ಗಳಾಗುತ್ತದೆ. ಕೇವಲ ಒಂದು ಗಂಟೆ ಹೆಚ್ಚಾದರೆ 1 ಸಾವಿರ ಕೋಟಿ ರೂ.ಗಳು ಹೆಚ್ಚಾಗಿಬೇಕಾಗುತ್ತದೆ. So, 7 ಸಾವಿರ ಕೋಟಿ ರೂ.ಗಳ ವಿದ್ಯುತ್‌ನ್ನು ನಾವು ರೈತರಿಗೆ ಸರ್ಕಾರದ ಬೊಕ್ಕಸದಿಂದ ತುಂಬಬೇಕಾಗುತ್ತದೆ. ಸರ್ಕಾರದ ಬೊಕ್ಕಸಕ್ಕೆ ಎಲ್ಲಿಂದ ಬರಬೇಕು? ನಾವು tax payers ರಿಂದಲೇ ತೆಗೆದುಕೊಳ್ಳಬೇಕು, ಬೇರೆ ವರ್ಗದವರಿಂದ ತೆಗೆದುಕೊಳ್ಳಬೇಕು. 7 ಸಾವಿರ ಕೋಟಿ ರೂ.ಗಳನ್ನು ಸರ್ಕಾರದ ಬೊಕ್ಕಸದಿಂದ ತೆಗೆದು ಆ ವಿದ್ಯುತ್ ಕಂಪನಿಗಳಿಗೆ ಕೊಡಬೇಕು. ಏಕೆಂದರೆ ನಾವೆಲ್ಲಾ purchase ಮಾಡುವವರು. ನಮ್ಮದೇ ಕಂಪನಿಗಳು ವಿದ್ಯುತ್‌ನ್ನು produce ಮಾಡಿದರೂ ಕೂಡ ultimately 3 ರೂಪಾಯಿ, 4 ರೂಪಾಯಿ, 5 ರೂಪಾಯಿ, 6 ರೂಪಾಯಿ, 7 ರೂಪಾಯಿಗಳಿಗೆ ನಮ್ಮ ಕಂಪನಿಗಳಿಂದಲೇ ನಾವೇ purchase ಮಾಡಿದರೂ ಕೂಡ ultimately ದುಡ್ಡನ್ನು ಕೊಡಬೇಕಲ್ಲ. So ಈ 37% ವಿದ್ಯುತ್‌ನ್ನು ರೈತರೀಗೇನು ನಾವು ಕೊಡುತ್ತಿದ್ದೇವೆ ಇದನ್ನು ಒಂದು ಕಡೆ ಗಮನದಲ್ಲಿಟ್ಟುಕೊಂಡು ಈಗಿರುವಂಥ

2 ಲಕ್ಷಕ್ಕಿಂತಲೂ ಹೆಚ್ಚು domestic consumers ಇದ್ದಾರೆ. ರೈತರನ್ನು ಬಿಟ್ಟು ಇತರ consumers ಗಳಿಂದ ದುಡ್ಡನ್ನು ತೆಗೆದುಕೊಂಡು ಈ ಇಲಾಖೆಯನ್ನು ನಡೆಸುತ್ತಿದ್ದೇವೆ. ಇಲಾಖೆಯನ್ನು ಹೇಗೆ ನಡೆಸಬೇಕು, ನಾನು ಆಗಲೇ ಹೇಳಿದ ಹಾಗೆ ಮಾನ್ಯ ಕಾರಜೋಳ್‌ರವರು ಬಹಳ ಚೆನ್ನಾಗಿ ಹೇಳಿದರು, ಇಲ್ಲೆಲ್ಲಾ ಹೇಗಿದೆ ಪರಿಸ್ಥಿತಿಯೆಂದರೆ, ಈ management ವಿಚಾರದಲ್ಲಿ ಒಬ್ಬ employee, ಅವನು he is on the Board, ಒಬ್ಬ Engineer, he is on the Board, ಅವನು ಮಂತ್ರಿ ಜೊತೆ ಕುಳಿತುಕೊಳ್ಳುತ್ತಾನೆ ತೀರ್ಮಾನ ಮಾಡುವುದಕ್ಕೆ, Secretary ಜೊತೆ ಕುಳಿತುಕೊಳ್ಳುತ್ತಾನೆ ತೀರ್ಮಾನ ಮಾಡುವುದಕ್ಕೆ, M.D. ಜೊತೆ ಕುಳಿತುಕೊಳ್ಳುತ್ತಾನೆ ತೀರ್ಮಾನ ಮಾಡುವುದಕ್ಕೆ, he decides. ನನಗಿಂತಲೂ ಜಾಸ್ತಿ ಸಂಬಳ ಲೈನ್‌ಮನ್‌ಗಿದೆ, ಇಂಜಿನಿಯರ್‌ಗಿದೆ. A.C.S. ಗಿಂತ ಜಾಸ್ತಿ ಸಂಬಳ ಅವರಿಗಿದೆ. ಹೀಗೆ ಬಹಳ ವಿಚಿತ್ರವಾದಂಥ ಸನ್ನಿವೇಶದಲ್ಲಿ ಈ ಇಲಾಖೆಯನ್ನು ನಾವು ನಡೆಸುತ್ತಿದ್ದೇವೆ. So, ultimately ಒಬ್ಬರನ್ನೊಬ್ಬರು ನಂಬಿಕೊಂಡೇ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಒಬ್ಬರ ಮೇಲೆ ನಾವು depend ಮಾಡಿಕೊಂಡೇ ಈ ಸಂದರ್ಭದಲ್ಲಿ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಅನೇಕ ಸದಸ್ಯರುಗಳು ಒಳ್ಳೊಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳಷ್ಟು ನಮ್ಮ ಸ್ನೇಹಿತರುಗಳು ಒಳ್ಳೆಯ ಸಲಹೆಗಳನ್ನು ನೀಡಿದ್ದಾರೆ. ಬಸವರಾಜ ಬೊಮ್ಮಾಯಿಯವರು, ಬಸವರಾಜ ರಾಯರೆಡ್ಡಿಯವರು, ಕುಮಾರಸ್ವಾಮಿಯವರು, ನಮ್ಮ ಮಾಮನಿಯವರ ಸುಪುತ್ರ, ಅವರ father ನನಗೆ ಬಹಳ ಪರಿಚಯ, ಶಿವಾನಂದ ಪಾಟೀಲ್‌ರವರು, ಪ್ರಮೋದ್ ಮಧ್ವರಾಜ್‌ರವರು, ಕಾರಜೋಳ್ ಸಾಹೇಬರು, ಖೇಣಿಯವರು, ಪುಟ್ಟಣ್ಣಯ್ಯನವರು, ಸುಧಾಕರ್‌ರವರು, ಸವದಿಯವರು, ಜಿ.ಟಿ. ದೇವೇಗೌಡರು, ನರೇಂದ್ರ ಸ್ವಾಮಿಯವರು, ರಮೇಶ್‌ಕುಮಾರ್‌ರವರು, ನಿಂಗಯ್ಯನವರು, ಶಿವಲಿಂಗೇಗೌಡರು, ಹೀಗೆ ಬಹಳ ಜನ ಸಲಹೆಗಳನ್ನು ನೀಡಿದ್ದಾರೆ. ಇನ್ನೂ ಬಹಳ ಜನ ಮಾತನಾಡುವವರಿದ್ದರು. ಪಾಪ ಎಲ್ಲರಿಗೂ ಅವಕಾಶಗಳು ಸಿಗಲಿಲ್ಲ. ಆದರೆ ಅವರು ಕೆಲವು ಸಂದರ್ಭಗಳಲ್ಲಿ ಏನಾದರೂ ನನ್ನನ್ನು ಕೇಳಿದರೆ ಖಂಡಿತ ನಾನು ಅವರಿಗೆ response ಮಾಡುತ್ತೇನೆ.

ಆಮೇಲೆ ಇಲ್ಲೊಂದು ಬಹಳ ಮುಖ್ಯವಾದ ವಿಚಾರವೆಂದರೆ, ಈ ಇಲಾಖೆಯಲ್ಲಿ ಯಾರು ಏನು ಮಾಡಿದರೂ ತಪ್ಪು ಕಂಡುಹಿಡಿಯಬಹುದು. ಯಾರು ಏನೇ ಮಾಡಲಿ, ಒಬ್ಬರ ಮೇಲೆ ಬೊಟ್ಟು ಮಾಡಿ, ಇದು ಆ ರೀತಿ ಮಾಡಿಲ್ಲ, ಇದು ಈ ರೀತಿ ಮಾಡಿಲ್ಲ, ಈ ತನಿಖೆ ಮಾಡಿ, ಆ ತನಿಖೆ ಮಾಡಿ ಎನ್ನಬಹುದು. Decisions ಯಾರೋ ಮಾಡಿರುತ್ತಾರೆ. ಏಕೆಂದರೆ ನಾನು ನಿನ್ನೆ ನೋಡುತ್ತಿದ್ದೆ, ನಮ್ಮ ಶೆಟ್ಟರ್ ಸಾಹೇಬರು, ಪಾಪ ಅವರದ್ದೇನೂ ಇಲ್ಲ. ಆದರೆ ಕೆಲವರು ಭಾಷಣ ಮಾಡಬೇಕಾದರೆ ಅವರ ಕಡೆ finger ಮಾಡುವ ಹಾಗೆ ತೋರಿಸಿದರು. Yes, I know, ಅವರೇನು, I think any Government can't do this. ಕೃಷ್ಣರವರ ಬಗ್ಗೆ ಮಾತನಾಡಿಕೊಳ್ಳುತ್ತಾ ನಾವು ಮಾತ್ರ ಸಾಧನೆ ಮಾಡಿದ್ದೇವೆಂದು ಬಿಂಬಿಸಿಕೊಳ್ಳುತ್ತಿದ್ದೆವು. ಇಲ್ಲಿ ಯಾರೇನು ಸಾಧನೆ ಮಾಡಿ, ಇಲ್ಲೇನು ಮಾಡುತ್ತಿರುವುದೆಂದರೆ, ಡಿ.ವಿ.ಜಿ. ಯವರು ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ ಸವದಿಯವರೆ, "ಎದ್ದೆದ್ದು ಬೀಳುತಿಹೆ ಗುದ್ದಾಡಿ ಸೋಲುತಿಹೆ, ಎದ್ದೆದ್ದು ಬೀಳುತಿಹೆ ಗುದ್ದಾಡಿ ಸೋಲುತಿಹೆ, ಜಗವೆಂದು ಉದ್ಧರಿಸುತಿದೆ ಎನ್ನುತಿಹೆ ಸಕನೆ, ನಿನ್ನ ಉದ್ಧಾರ ಎಷ್ಟಾಯಿತೊ ಮುಂಕುತಿಮ್ಮ" ಎಂದಿದ್ದಾರೆ. ಹೀಗೆ ಕೇವಲ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಜಗಳ ಆಡಿಕೊಂಡಿದ್ದೇವೆಯೇ ಹೊರತು ನಾವು ಮಾಡಿದ್ದೇನು, ಒಬ್ಬರಿಗೊಬ್ಬರು ಜಗಳ ಮಾಡಿಕೊಂಡು ಇವನ ಮೇಲೆ ಅವನ ಮೇಲೆ ಹೇಳಿಕೊಂಡು ಕುಳಿತಿರುತ್ತೇವೆ. Next, what is the plan of action? Where we are moving forward? ಮುಂದಕ್ಕೆ ಏನು ನಮ್ಮದು? ಮುಂದಕ್ಕೆ ನಮ್ಮ plan of action ಏನು ಎಂಬ ಬಗ್ಗೆ ನಮ್ಮ ಅಧ್ಯಕ್ಷರು ಐದು ಬಾರಿ ಹೇಳಿದರು. ನಾನು ಬರೆದುಕೊಂಡಿದ್ದೇನೆ. ಮುಂದಕ್ಕೆ ಏನು ಎಂಬುದನ್ನು ಹೇಳಿರೋ ಮಾರಾಯ. 4 ಗಂಟೆಗಳ ಕಾಲ ಮಾತನಾಡಿದಿರಪ್ಪಾ, ಮುಂದಕ್ಕೆ ಏನು ಹೇಳಿ ಎಂದರೆ ನನಗೆ I could not get anything. ಏನಾದರೂ reply ಮಾಡೋಣವೆಂದರೆ ಕಾರಜೋಳ್‌ರವರಿಗೆ ಸ್ವಲ್ಪ reply ಮಾಡುವಷ್ಟು ಅವರು ಕೆಲವು ಸಲಹೆಗಳನ್ನು ನೀಡಿದರು. ಇನ್ನು ಮಧ್ವರಾಜ್‌ರವರು ಒಂದಷ್ಟು ಸಲಹೆಗಳನ್ನು ನೀಡಿದರು. Something ಏನಾದರೂ ಹೇಳುತ್ತಾ ಲೈನ್‌ಮನ್ ವಿಚಾರವನ್ನು ಅವರು

ಹೇಳಿದರು. I could not get anything. ಇರಲಿ ಬೇರೆ ಸಂದರ್ಭದಲ್ಲಿ ಆ ಬಗ್ಗೆ ನಾನು ಮಾತನಾಡುತ್ತೇನೆ. ಈಗ ಅದರ ಬಗ್ಗೆ ಮಾತನಾಡುವುದು ಬೇಡ. ಈಗ ಇಂಥ ಒಂದು ಇಲಾಖೆಯನ್ನು ನಡೆಸುತ್ತಿದ್ದೇವೆ. ಈ ಮದ್ಯದಲ್ಲಿ ಒಂದು ಮಾತನ್ನು ಹೇಳಿದೆ. ಏನು ಮಾಡಿದರೂ ತಪ್ಪೆಂದು. ಮಾನ್ಯ ಅಧ್ಯಕ್ಷರೆ, ಸಭೆ ಬಹಳ ಶಾಂತವಾಗಿದೆ. ಇವತ್ತು ಏನೇ ತೀರ್ಮಾನ ತೆಗೆದುಕೊಂಡರೂ ಒಬ್ಬರ ಮೇಲೆ ಬೆಟ್ಟು ಮಾಡಿ ತೋರಿಸಬಹುದು. ನಾನು ಪತ್ರಿಕೆಯಲ್ಲಿ ಓದುತ್ತಿದ್ದೆ, ಅದರಲ್ಲಿ ಎಸ್.ಎಂ. ಕೃಷ್ಣರವರ ಕಾಲದಲ್ಲಿ ಜಗದೀಶ್ ಶೆಟ್ಟರ್‌ರವರ ಕಾಲದಲ್ಲಿ, ಬಿ.ಜೆ.ಪಿ. ಕಾಲದಲ್ಲಿ ಎಂದು ಬರೆಯುತ್ತಾರೆ. ಅವರು ಅವರದ್ದೇ ಆದ ವಿಚಾರವನ್ನು ಬರೆಯುತ್ತಾರೆ. ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಇದು ಹೇಗಿದೆ ಎಂದರೆ, "ಕೊಟ್ಟವನು ಕೊಟ್ಟರೂ ಕೆಟ್ಟ, ಕೊಡದೆಯೂ ಕೆಟ್ಟ, ಬಿಟ್ಟವನು ಕೆಟ್ಟ, ಬಿಡದೆಯೂ ಕೆಟ್ಟ" ಎಂದು ನಮ್ಮ ಹಳ್ಳಿಯಲ್ಲಿ ಒಂದು ಮಾತಿದೆ, ಆ ರೀತಿ ಇದೆ. ಅದು ಹೇಗೆಂದರೆ, ರಾಜ್ಯಭಾರವನ್ನು ಮಾಡುತ್ತಿದ್ದ ಬಲಿ ಚಕ್ರವರ್ತಿಯನ್ನು ವಾಮನಮೂರ್ತಿ ರೂಪದಲ್ಲಿ ಬಂದ ಶ್ರೀಮನ್ ನಾರಾಯಣನು ಎರಡು ಪಾದಗಳನ್ನು ಇಟ್ಟ ನಂತರ ಮೂರನೇ ಪಾದವನ್ನು ಕೊನೆಗೆ ಬಲಿ ಚಕ್ರವರ್ತಿಯ ತಲೆಯ ಮೇಲೆಯೇ ಇಟ್ಟನಂತೆ. ಶ್ರೀಮನ್ ನಾರಾಯಣ ಬಲಿಯ ತಲೆಯ ಮೇಲೆ ಹೆಜ್ಜೆ ಇಟ್ಟಿದ್ದಕ್ಕೇ ಸಂಪೂರ್ಣವಾಗಿ ನಾಶವಾಗಿಬಿಟ್ಟ. ಕೊಟ್ಟವನು–ಬಲಿ ಚಕ್ರವರ್ತಿ, ಕೆಟ್ಟ. ಅದಾದಮೇಲೆ ಪಾಂಡವರು ಕೃಷ್ಣನ ಮುಖಾಂತರ ಕೌರವರನ್ನು ಐದು ಗ್ರಾಮಗಳನ್ನಾದರೂ ಕೊಡಿ ಎಂದು ಬಹಳ ಕೇಳಿಕೊಳ್ಳುತ್ತಾರೆ. ಆದರೆ ದುರ್ಯೋಧನ ಕೊಡುವುದಿಲ್ಲ. ಐದು ಗ್ರಾಮಗಳನ್ನು ಕೊಡದೇ ಹೋದದಕ್ಕೆ ದುರ್ಯೋಧನ ಕೆಟ್ಟ. "ಕೊಟ್ಟವನು ಕೊಟ್ಟರೂ ಕೆಟ್ಟ, ಕೊಡದೆಯೂ ಕೆಟ್ಟ. ಇನ್ನು ಬಿಟ್ಟವನು ಕೆಟ್ಟ, ಬಿಡದೆಯೂ ಕೆಟ್ಟ. ರಾಮಾಯಣದಲ್ಲಿ ಶ್ರೀರಾಮಚಂದ್ರ ರಾವಣನ ಜೊತೆ ಯುದ್ಧವೆಲ್ಲ ಆದ ನಂತರ ಕೊನೆಗೆ ಅಗಸ ಏನೋ ಹೇಳಿದ ಎಂದು ಹೆಂಡತಿಯನ್ನು ಬಿಟ್ಟ. ಹೆಂಡತಿಯನ್ನು ಬಿಟ್ಟು ಶ್ರೀರಾಮ ಕೆಟ್ಟ. ರಾವಣ ಸೀತೆಯನ್ನು ಹಿಡಿದುಕೊಂಡು, ಬಿಡದೇ ಇದ್ದದ್ದರಿಂದ ಅವನೂ ಕೆಟ್ಟ. ಹೆಂಡತಿಯನ್ನು ಬಿಟ್ಟು ರಾಮ ಕೆಟ್ಟ, ಸೀತೆಯನ್ನು ಬಿಡದೆ ರಾವಣ ಕೆಟ್ಟ,

ಗ್ರಾಮಗಳನ್ನು ಕೊಡದೆ ದುರ್ಯೋಧನ ಕೆಟ್ಟ, ಬಲಿಯ ತಲೆಯ ಮೇಲೆ ಪಾದ ಇಟ್ಟಿದ್ದರಿಂದ ಬಲಿ ಚಕ್ರವರ್ತಿ ಕೆಟ್ಟ.

ಶ್ರೀ ಅರವಿಂದ್ ಲಿಂಬಾವಳಿ:- ನೀವು current ಕೊಟ್ಟರೂ ಕೆಡುತ್ತೀರಿ, ಕೊಡದಿದ್ದರೂ ಕೆಡುತ್ತೀರಿ.

ಶ್ರೀ ಡಿ.ಕೆ. ಶಿವಕುಮಾರ್:- ಏನೋ ಒಬ್ಬರ ಮೇಲೆ ದೂರುವುದು. So any decision in this department is very swirling. ಈ ರೀತಿ ಇದೆ ಮಾನ್ಯ ಅಧ್ಯಕ್ಷರೆ, ನಮ್ಮ ಬೇಡಿಕೆಯಲ್ಲಿ ನಾವು ಸಮರ್ಪಕವಾಗಿ ಪೂರೈಸಬೇಕು. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದರು. I agree with him. ನಮ್ಮ ಮೇಲೆ ಒಂದು ದೊಡ್ಡ responsibility ಇದೆ. ನಾವು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕು. ನಾವು 1902ರಲ್ಲಿ ಕೇವಲ 4.32 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಿಂದ ಪ್ರಾರಂಭ ಮಾಡಿ 1933ಕ್ಕೆ 42 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲು ಶುರು ಮಾಡಿದೆವು. 1970ರಲ್ಲಿ 878 ಮೆಗಾವ್ಯಾಟ್ ವಿದ್ಯುತ್‌ನಲ್ಲಿ ಇಡೀ ರಾಜ್ಯ ನಡೆಯುತ್ತಿತ್ತು. 2000 ಇಸವಿಗೆ ಬರುವ ಹೊತ್ತಿಗೆ 5,400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ capacity ನಮಗೆ ಬಂತು. ಇವತ್ತು 14,029 ಮೆಗಾವ್ಯಾಟ್ ನಮ್ಮ capacity ಇದೆ. ಇದರಲ್ಲಿ renewable energy 4,059 MW ಇಟ್ಟುಕೊಂಡಿದ್ದೇವೆ. ವಿವಿಧ sourceಗಳಿಂದ ನಾವು ಬೇಕಾದಷ್ಟು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ. ನಮ್ಮಲ್ಲಿ 10% – 12% ನಿಂದ 15% ವರೆಗೂ demand ಮತ್ತು supplyನಲ್ಲಿ gap ಇದೆ. Central Electric Authorityಯವರು 2014–15ನೇ ಸಾಲಿನಲ್ಲಿ 11,250 ಮೆಗಾವ್ಯಾಟ್ ವಾರ್ಷಿಕ ಬಳಕೆ ಪ್ರಮಾಣವು ಇದ್ದು, ಮುಂದೆ 67,000 ಮಿಲಿಯನ್ ಯುನಿಟ್‌ಗಳು ಆಗಬಹುದು ಎಂದು ಅಂದಾಜು ಮಾಡಲಾಗಿದೆ. ಮೊನ್ನೆ ನಾನು ಮಂತ್ರಿಯಾದ ಮೇಲೆ ಏಪ್ರಿಲ್ 7ನೇ ತಾರೀಖಿನಂದು ದಾಖಲೆಯಷ್ಟು ಎಂದರೆ 9,500 ಮೆಗಾ ವ್ಯಾಟ್‌ನಷ್ಟು ವಿದ್ಯುತ್‌ನ್ನು ಅಂದು ಒಂದೇ ದಿನ consume ಮಾಡಲಾಗಿದೆ. ಅಂದು consumption ಬಹಳ peakಗೆ ಹೋಗಿದೆ. That is a record in the history of our state. 2015ನೇ ಸಾಲಿನಲ್ಲಿ ದಿನನಿತ್ಯದ ಬಳಕೆಗೆ ಬೇಕಾಗುವ ವಿದ್ಯುತ್ 210 ಮಿಲಿಯನ್ ಯುನಿಟ್‌ನಷ್ಟು

ತಲುಪಬಹುದೆಂದು ನಾವು ಅಂದಾಜು ಮಾಡಿದ್ದೇವೆ. 2009ರಿಂದ 42,300 ಮಿಲಿಯನ್ ಯುನಿಟ್ ಇತ್ತು, 16% growth ಇತ್ತು. ಈಗ ಸ್ವಲ್ಪ ಅದು ಕಡಿಮೆ ಆಗಿ ಕೊಂಡು ಬರುತ್ತಿದೆ. ಇದರ ಜೊತೆಗೆ ಗ್ರಾಹಕರ ಸಂಖ್ಯೆ ಸಹ ಜಾಸ್ತಿಯಾಗುತ್ತಾ ಬರುತ್ತಿದೆ. ಮೊದಲು ಆರು ವರ್ಷಗಳ ಹಿಂದೆ 2009–10 ರಲ್ಲಿ 1.69,000,00 consumers ಇದ್ದರು. ಈಗ ನಾವು ಎರಡು ಕೋಟಿ ದಾಟಿದ್ದೇವೆ. ಈಗ KPCLನಿಂದ 3,655 ಮೆಗಾವ್ಯಾಟ್ ಜಲ ವಿದ್ಯುತ್ ಉತ್ಪಾದನೆ ಮಾಡುವ ಶಕ್ತಿ ಇದೆ. 1,500 ರಷ್ಟು ಮಾತ್ರ ಅವಕಾಶ ಸಿಗುತ್ತಿದೆ. Ultimately ಅದು ಮಳೆಯ ಮೇಲೆ ತೀರ್ಮಾನವಾಗುತ್ತದೆ. ಶಾಖೋತ್ಪನ್ನದಲ್ಲಿ RTPS ಮತ್ತು BTPSನಿಂದ 2,720 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವಷ್ಟು ಶಕ್ತಿ ನಮ್ಮ ಹತ್ತಿರವೇ ಇದೆ. RTPS 1720 MW, BTPS 1000 MW. ಈಗ ಒಟ್ಟು 2,100 MW ವಿದ್ಯುತ್ ಉತ್ಪಾದನೆ ಮಾಡುವಷ್ಟು capacity ಇದೆ. ಇದರ ಜೊತೆಯಲ್ಲಿ UPCL ಮತ್ತು captive consumptions ಹತ್ತಿರ 1200 MW ವಿದ್ಯುತ್ ಉತ್ಪಾದನೆ ಮಾಡಲು ಅವರ ಹತ್ತಿರ ಒಂದು Agreement ಮಾಡಿಕೊಂಡು ನಾವು purchase ಮಾಡುತ್ತಿದ್ದೇವೆ. Captive generations 350MW ವಿದ್ಯುತ್ ಉತ್ಪಾದನೆ ಮಾಡಿಕೊಳ್ಳುತ್ತಿದ್ದಾರೆ. Central generationನಿಂದಲೂ ಸಹ ನಾವು purchase ಮಾಡುತ್ತಿದ್ದೇವೆ. ಒಟ್ಟು 1,921 MWನಷ್ಟು ವಿದ್ಯುತ್ ಕೊಡುತ್ತೇವೆಂದು ಅವರು ಒಪ್ಪಂದ ಮಾಡಿಕೊಂಡಿದ್ದಾರೆ. 1,500 ಮೆಗಾವ್ಯಾಟ್‌ನಷ್ಟು ವಿದ್ಯುತ್ ಬರುತ್ತಿದೆ. ಒಟ್ಟಾರೆ 14,321 ಮೆಗಾವ್ಯಾಟ್‌ನಷ್ಟು ವಿದ್ಯುತ್ ಬೇಡಿಕೆಗೆ 7,500 ಮೆಗಾವ್ಯಾಟ್‌ನಷ್ಟು ವಿದ್ಯುತ್ ಬರುತ್ತಿದೆ. ಹೀಗಾಗಿ ಇವತ್ತು ಸುಮಾರು 10% – 12% ವರೆಗೂ ಬೇಡಿಕೆ ಮತ್ತು ಪೂರೈಕೆಯ ನಡುವೆ ಅಂತರವಿದೆ. Generation ಅನ್ನು ಹೆಚ್ಚು ಮಾಡಬೇಕು. ಬೇಕಾದಷ್ಟು challenges ಇವೆ. ಒಂದು ದಿನದಲ್ಲಿ, ಒಂದು ವಾರದಲ್ಲಿ ಅಥವಾ ಒಂದು ತಿಂಗಳಿನಲ್ಲಿ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. Central Governmentನವರು sea ಇರುವ ಕಡೆ ultra megawatt ಮಾಡಿ, ನಿಮಗೆ coal ಬಹಳ ಕಡಿಮೆ rateನಲ್ಲಿ ಸಿಗುತ್ತದೆ, ನಾವೇನು ಬೇಕಾದರೂ support ಮಾಡುತ್ತೇವೆ ಎಂದು ಹೇಳುತ್ತಾರೆ. ಹಿಂದೆ ಅವರೊಂದು ಜಾಗವನ್ನು

identify ಮಾಡಿದರು. ನನ್ನ ಸ್ನೇಹಿತರಾದ ಶ್ರೀ ಅಭಯ ಚಂದ್ರ ಜೈನ್‌ರವರು ಮತ್ತು ಶ್ರೀ ವಿನಯ್ ಕುಮಾರ್ ಸೊರಕೆರವರು ನಮ್ಮದೇನಾದರೂ announce ಮಾಡುತ್ತೀರಾ ಎಂದು ಸದನಕ್ಕೆ ಬರುವುದಕ್ಕೆ ಮುಂಚೆಯೇ ನನ್ನ ಮೇಲೆ ಮಾಡಬೇಡಿ ಎಂದು ಗಲಾಟೆ ಮಾಡಿದರು. ಬಹಳ resistance ಇದೆ. ಬಿಜಾಪುರದ ಬಗ್ಗೆ ನಾವು ನೋಡುತ್ತಿದ್ದೇವೆ, ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಅಲ್ಲಿ ಕೇಂದ್ರ ಸರ್ಕಾರದವರು ಬಂದಿದ್ದಾರೆ. ಈಗಾಗಲೇ ಹೆಚ್ಚು ಕಡಿಮೆ 70%–80% ಕೆಲಸ ಆಗಿದೆ. ಒಂದು ಯೂನಿಟ್ ಕೂಡ ಅಲ್ಲಿ ಆಗುತ್ತಿದೆ. ಅಲ್ಲಿಯೂ ಸಹ ಬೇಕಾದಷ್ಟು ಪ್ರತಿಭಟನೆ ಶುರುವಾಗುತ್ತಿದೆ. But at any point of time ನಾವು ರಕ್ಷಣೆ ಮಾಡಲೇಬೇಕು. ಹೊರದೇಶದಿಂದ ಬಂದು ಕೆಲಸ ಮಾಡುತ್ತಿದ್ದಾರೆ, ಅದನ್ನು continue ಮಾಡಲೇಬೇಕು. ಈ ದಿನ ನಾನು ಇಲ್ಲಿಂದ request ಮಾಡಿಕೊಳ್ಳುತ್ತೇನೆ ನಮ್ಮ ರಾಜ್ಯಕ್ಕೆ ವಿದ್ಯುಚ್ಛಕ್ತಿಬೇಕು. Central Governmentನಿಂದ 50% of power ನಮಗೆ ಕಡಿಮೆ ದರದಲ್ಲಿ ಸಿಗುತ್ತದೆ. ಅದು ನಮ್ಮದೇ ಇದ್ದ ಹಾಗೆ. ದಯವಿಟ್ಟು ಎಲ್ಲರೂ ಸಹಕಾರ ಕೊಡಬೇಕು. ಅನೇಕ ಸದಸ್ಯರು ಸಲಹೆ ಕೊಟ್ಟಂತೆ ನಾವು ಜನರೊಂದಿಗೆ ರೈತರೊಂದಿಗೆ, ಸೌಹಾರ್ದಯುತವಾಗಿ, ಶಾಂತ ರೀತಿಯಿಂದ ಹೋಗಬೇಕಾಗುತ್ತದೆ. ತಿಳುವಳಿಕೆ ಇಲ್ಲದವರಿಗೆ ನಾವು ತಿಳಿಸಬೇಕಾಗುತ್ತದೆ. Agitations ಮತ್ತೊಂದು ಮಾಡುವುದರಲ್ಲಿ ಅರ್ಥವಿಲ್ಲ. Let us take it forward. ಈ ರಾಜ್ಯದ ಹಿತವನ್ನು ನಾವು ನೋಡೋಣ. ಈ ಹಿನ್ನೆಲೆಯಲ್ಲಿ ನಾವೆಲ್ಲರೂ ಕೆಲಸ ಮಾಡೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಆ ಭಾಗದ ಸದಸ್ಯರನ್ನು, ರೈತರನ್ನು ಕರೆದು ಮಾತನಾಡುತ್ತೇನೆಂದು ನೀವು ಆಗಲೇ ಹೇಳಿದಿರಿ. ಅದನ್ನು ನೀವಿನ್ನೂ ಮಾಡಲಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– I agree with you. ಮಾತನಾಡುವುದು, convince ಮಾಡುವುದು, ವಿಚಾರವನ್ನು ತಿಳಿಸುವುದರಲ್ಲೇನೂ ತಪ್ಪಿಲ್ಲ. Let us take it forward. ನಾವು ನೀವೆಲ್ಲರೂ ಸೇರಿ ಈ ವಿಚಾರದಲ್ಲಿ ಮುಂದುವರೆಯೋಣ. ಅದನ್ನೇ ಮಾನ್ಯ ಕುಮಾರಸ್ವಾಮಿಯವರೂ ಸಹ

ಸಲಹೆ ಕೊಟ್ಟಿದ್ದು, ನೀವು ಮಾಡಬೇಕಾಗಿತ್ತು, ಮಾಡಲಿಲ್ಲ, ಯಾರೂ ಹೋಗಲಿಲ್ಲ ಎಂಬ ವಿಚಾರವನ್ನು ಅವರು ಹೇಳಿದರು. ಇದು ಇಷ್ಟು ಇದೆ. ಒಂದು ಕಡೆ BTPS ಆ ರೀತಿ ಇದೆ. ಈ ಮಧ್ಯೆ ಗುಲ್ಬರ್ಗದಲ್ಲಿ ಒಂದನ್ನು ಮಾಡಬೇಕೆಂದು ಹೊರಟಿದ್ದೇವೆ. ಅದಕ್ಕೆ ಬೇಕಾದ clearance, ಮತ್ತೊಂದೆಲ್ಲ ಕೂಡ ಆಗುತ್ತಿದೆ. ಅದಕ್ಕೂ ಕೂಡ Central Government ನವರು ಬಹಳ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಯರಮರಸ್‌ನಲ್ಲಿ ಈ ಡಿಸೆಂಬರ್ ಮತ್ತು ಮೇ ಒಳಗೆ ಯೂನಿಟ್–1 ಮತ್ತು 2 ಆಗಬೇಕಾಗಿದೆ. ಅಲ್ಲಿ ಸ್ವಲ್ಪ coal linkage ಸಮಸ್ಯೆ ಇದೆ. ಈ ಬಗ್ಗೆ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು Central Governmentನೊಂದಿಗೆ ಮಾತನಾಡಿದ್ದೇವೆ. ಅವರೂ ಸಹ positive ಆಗಿ ಹೇಳಿದ್ದಾರೆ. ಈ ಮಧ್ಯೆ Government change ಆಯಿತು. ಈಗಿನ ಸರ್ಕಾರ ಸಹ ಈ ವಿಚಾರದಲ್ಲಿ ಏನು ಸಹಕಾರ ಕೊಡಬೇಕೋ ಅದನ್ನು ಖಂಡಿತ ಕೊಡುತ್ತಾರೆ. ಬಳ್ಳಾರಿಯಲ್ಲೂ coal linkageಗೆ ಸಂಬಂಧಿಸಿದಂತೆ ಏನು ಸಮಸ್ಯೆಯಾಗಿತ್ತು ಅದರ ಬಗ್ಗೆ ಸಹ ನಾವು ಕೇಂದ್ರ ಸರ್ಕಾರದೊಂದಿಗೆ ಚರ್ಚೆ ಮಾಡುತ್ತಿದ್ದೇವೆ. ಅದಕ್ಕೂ ಸಹ ಬಹಳ positive response ತೋರಿಸುತ್ತಿದ್ದಾರೆ. ಬಿಡದಿ ಗ್ಯಾಸ್ ವಿಚಾರದ ಬಗ್ಗೆ ಹೇಳುವುದಾದರೆ ಬಹಳ ವರ್ಷಗಳ ಹಿಂದೆಯೇ ಅಂದರೆ 1995–96ರಲ್ಲಿಯೇ ಆಗಬೇಕಿತ್ತು. ಮಧ್ಯೆ ಬೇಕಾದಷ್ಟು ಸಮಸ್ಯೆಗಳಾಯಿತು. ಈಗ ಕೋರ್ಟ್‌ಗೆ ಹೋಗಿ ನಿಂತಿದೆ. ಮೊನ್ನೆ ಆಗಿದ್ದು, ಮತ್ತೆ ಇದು ಕೋರ್ಟ್‌ಗೆ ಹೋಗಿ ನಿಂತಿದೆ. ಅದಕ್ಕೆ ನಾವು ಇದನ್ನು ಬಿಟ್ಟು ಮುಂದಕ್ಕೆ ಹೋಗೋಣವೆಂದು ಈಗಾಗಲೇ ನಾವು BHELನವರಿಗೆ ಒಂದು ಅವಕಾಶವನ್ನು ಕೊಟ್ಟು, ನಮ್ಮದು ಯಲಹಂಕದಲ್ಲಿ ಜಾಗವಿದೆ, ಅಲ್ಲಿ ಮಾಡುವುದಕ್ಕೆ ಲೈನ್ ಕೂಡ ಮಾಡಿಕೊಂಡಿದ್ದೇವೆ. ನಾವು ಅದನ್ನು ಉಪಯೋಗಿಸಲಿಲ್ಲವೆಂದರೆ ಅವರಿಗೆ ದಂಡ ಕಟ್ಟಬೇಕಾಗುತ್ತದೆ. ಅದೊಂದನ್ನು ಯೋಚನೆ ಮಾಡುತ್ತಿದ್ದೇವೆ. ಮತ್ತೆ ಎರಡನೇ ಯೂನಿಟ್ ಬಗ್ಗೆಯೂ ಯೋಚನೆ ಮಾಡಿ, ಕೋರ್ಟ್‌ನಲ್ಲಿ ಏನು ಕೇಸ್ ಇದೆ. ಬೆಂಗಳೂರು ಸಿಟಿ is like a heart. ಇಲ್ಲಿಗೆ ಒಂದು ಬೇಕು. ಎಲ್ಲಾ ಕಡೆಗಳಲ್ಲೂ ಇದೆ. ಚನ್ನೈನಲ್ಲಿದೆ, ಬಾಂಬೆಯಲ್ಲಿದೆ, ದೆಹಲಿಯಲ್ಲಿದೆ, ಎಲ್ಲಾ ಕಡೆಗಳಲ್ಲೂ ಇದೆ. ಅಲ್ಲಿ ಏನಾದರೂ

ಮಾಡಬೇಕು, ಕಾಸ್ಟ್ ಸ್ವಲ್ಪ ಜಾಸ್ತಿಯಾಗುತ್ತದೆ. ಅದು 9 ರೂ.ಗಳಿಂದ 11,12, 13 ರೂ.ಗಳವರೆಗೂ ಜಾಸ್ತಿಯಾಗುವ chances ಇದೆ. ಆದರೂ ಕೂಡ ಇಲ್ಲಿ emergencyಗೆ ಬೇಕು. ಈ ಮಧ್ಯೆ ಅನೇಕರು ಬೇರೆ ಬೇರೆ ಸಲಹೆಗಳನ್ನು ಕೊಟ್ಟಿದ್ದಾರೆ. ಅದು ಏನೆಂದರೆ Small Thermal Unit 150 ಕಿ.ಮೀ.ನಲ್ಲಿ 250 ಮೆ.ವ್ಯಾ. ಮಾಡುವುದಕ್ಕೆ ಬೇರೆ constraints ನೀರು, ಎಲ್ಲಾ ಕಡಿಮೆಯಾಗುತ್ತದೆ. ಯಾರಾದರೂ ಬಂದು ಇಲ್ಲಿ ಹಾಕಲಿ ಎಂಬ ಚಿಂತನೆ ನಡೆಯುತ್ತಿದೆ. We have called expression of interest. 150 ಕಿ.ಮೀ. ದೂರದಲ್ಲಿ 100 ಎಕರೆ ಜಮೀನು ಇರುವವರು, ಪ್ರೈವೇಟ್‌ನವರು ಮಾಡಲಿ ಎಂದಿದೆ. ಏಕೆಂದರೆ, ಬೆಂಗಳೂರಿಗೆ emergencyಗೆ ನಾವು ಇದನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇವರೆಲ್ಲಾ ಹೇಳುತ್ತಾರಲ್ಲಾ ಅವರಿಗೆ ಮಾತ್ರ 24 ಗಂಟೆಗಳು ಕರೆಂಟ್ ಕೊಡುತ್ತೀರಿ, ನಮಗೆ ಕೊಡುತ್ತಿಲ್ಲವೆಂದು ಹೊರಗಡೆ ಗಲಾಟೆ ಮಾಡುತ್ತಿದ್ದಾರೆ. ಅದಕ್ಕೆ ನಾವು ಈ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಛತ್ತೀಸ್‌ಗಡದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದನ್ನು ಒಂದು ಒಳ್ಳೆಯ ಉದ್ದೇಶದಿಂದ ಪ್ರಾರಂಭ ಮಾಡಿದ್ದಾರೆ, ಆದರೆ ಅದಕ್ಕೆ coal allotment ಆಗಿ environment clearance ಬೇಕಾಗಿದೆ. 212 ಕೋಟಿ ರೂ.ಗಳ investment ಮಾಡಿ, compound ಎಲ್ಲಾ ಹಾಕಿ, ಜಮೀನು ಎಲ್ಲಾ ತೆಗೆದುಕೊಂಡು ಅಲ್ಲೂ ಕೂಡ ಮುಂದಕ್ಕೆ ಹೋಗುತ್ತಿದ್ದೇವೆ. ಗುಲ್ಬರ್ಗಾದ್ದು ಮಾತ್ರ case bidding-2 ವಿಚಾರದಲ್ಲಿ ಜಾಗ, ಜಮೀನ್ನೆಲ್ಲಾ ಮೊದಲೇ KIADBಯವರು ಗುರುತಿಸಿದ್ದಾರೆ. ಅದಕ್ಕೆ ಜನ ಕೂಡ ಬಹಳ ಮುಂದೆ ಬರುತ್ತಿದ್ದಾರೆ, consent ಕೊಡುತ್ತಿದ್ದಾರೆ. ಅದಕ್ಕೆ coal ಅನ್ನು KPCLಗೂ ಅಥವಾ ಎಸ್ಕಾಂಗೂ allotment ಮಾಡುತ್ತೇವೆ. ಅದಕ್ಕೂ ಕೂಡ ಸರ್ಕಾರ ಗಮನ ಹರಿಸಿದೆ. ಈ ರೀತಿ ನಾವು generation ಅನ್ನು ಹೆಚ್ಚಿಗೆ ಏರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮತ್ತೆ Sugar factoryಯವರನ್ನು ಸಹ ಕರೆದು ನಾನು ಮಾತನಾಡಿದೆ. ಅವರ ಹತ್ತಿರ ಸುಮಾರು 1,350 capacity ಇದೆ, ಅದರಲ್ಲಿ 850 ರಷ್ಟು ನಾವು ಹೊಸದಾಗಿ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಅವರೆಲ್ಲಾ coalನಲ್ಲೇ ಮಾಡಬೇಕೆಂದು ಕೆಲವೊಂದು sugar factoryಯವರನ್ನು ಕರೆದು, explore

ಮಾಡಿ ಎಂದು ಹೇಳಿದ್ದೇವೆ. ಬಯೋಗ್ಯಾಸ್ ಮಾಡಿ ಮಿಕ್ಕಿದ್ದು ಉಳಿದುಕೊಂಡಿರುತ್ತದೆ, ಅದು ಉಳಿದುಕೊಂಡಿರುವ ಸಂದರ್ಭದಲ್ಲಿ ನೀವು ಜನರೇಟ್ ಮಾಡಿ ಕೊಡಿ ಎಂದು ಕೇಳಿದ್ದೇವೆ. ಅವರು ಇನ್ನು 10 ದಿವಸಗಳಲ್ಲಿ ನಾವೆಲ್ಲಾ ಕುಳಿತುಕೊಂಡು ಮಾತನಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಹಾಗೆ ಜನರೇಷ್‌ನ್ನು ಅನ್ನು ಈ ಸಂದರ್ಭದಲ್ಲಿ ಯಾವ ರೀತಿ ಹೆಚ್ಚಿಸುವುದಕ್ಕೆ ಸಾಧ್ಯವೆಂಬುದಕ್ಕೆ ಪ್ರಯತ್ನ ಮಾಡಿದ್ದು, ಇದನ್ನು small timeನಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಏನೇ maximum ಮಾಡಿದರೂ ಮೂರು ವರ್ಷಗಳು ಬೇಕಾಗುತ್ತದೆ, ಸ್ವಲ್ಪ ಜನರೇಷನ್ ಅನ್ನು ಹೆಚ್ಚಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಈ ಮಧ್ಯೆ renewable energyಯಲ್ಲಿ ಬೇಕಾದಷ್ಟು ಅವಕಾಶಗಳಿದ್ದು, wind energyಯಲ್ಲಿ 12,000 ಮೆ.ವ್ಯಾ.ನಷ್ಟು ತೆಗೆದುಕೊಂಡಿದ್ದರು. ಯಾರೂ ಹಾಕುತ್ತಿಲ್ಲ, ಕೆಲವರು ಹಾಕುತ್ತಿದ್ದಾರೆ, ಕೆಲವರು ಹಾಕುತ್ತಿಲ್ಲಿ, ಹಾಕುವುದಕ್ಕೆ ಆಗದೇ ಇರುವವರನ್ನು ಈಗ cancel ಮಾಡುತ್ತಿದ್ದೇವೆ. ಈಗ ಒಳ್ಳೆಯ potentiality ಇದೆ, ಅವರು ನಮಗೆ price ಕಡಿಮೆಯೆಂದು ಹೇಳಿ, ಕೆಲವರೆಲ್ಲಾ ಗಲಾಟೆ ಮಾಡುತ್ತಿದ್ದಾರೆ. ಬೇರೆ ರಾಜ್ಯಗಳಿಗೆ compare ಮಾಡಿದರೆ ಕಡಿಮೆ ಎಂದು ಕೆಲವರು ಗಲಾಟೆ ಮಾಡುತ್ತಿದ್ದಾರೆ. ಅದು ಹೇಗೆಂದರೆ ಇದ್ದಕ್ಕಿದ್ದ ಹಾಗೆ 12,000 ಚಿಲ್ಲರೆ capacity ಇದ್ದರೂ ಕೂಡ attotment ನಾವು 10,000 ಚಿಲ್ಲರೆ ಮಾಡಿದ್ದೇವೆ. 2,500 commission ಆಗಿರುವುದು, ಮೊನ್ನೆ ಇದ್ದಕ್ಕಿದ್ದ ಹಾಗೆ 200–220 ಇತ್ತು, ನಾನು ಇಲ್ಲಿಗೆ ಬರಬೇಕಾದರೆ ನಿನ್ನೆ ರಾತ್ರಿ 12 ಗಂಟೆಯಾಯಿತು, ಆಗ 1,500 ಮೆ.ವ್ಯಾ.ನಷ್ಟು ಬಂತು. ಗಾಳಿ ಜಾಸ್ತಿ, ನಮ್ಮ ಅಧಿಕಾರಿಗಳು ಗಾಳಿ ಜಾಸ್ತಿಯಾದರೆ ಮಳೆ ನಿಂತುಹೋಗುತ್ತದೆಂದು ಹೇಳುತ್ತಾರೆ. 1,500 ಮೆ.ವ್ಯಾ. ಎಂದರೆ ದೊಡ್ಡ ಯೂನಿಟ್‌ನಷ್ಟೆ ಬರುತ್ತದೆ. ಈಗ ನಾನು ಆಫೀಸ್‌ಗೆ ಬರಬೇಕಾದರೆ ನೋಡಿದಾಗ 1,300 ಚಿಲ್ಲರೆ ಇತ್ತು. ನಾನು ನನ್ನ ಆಫೀಸ್‌ನಲ್ಲಿ ಒಂದು ಬೋರ್ಡ್ ಇಟ್ಟುಕೊಂಡಿದ್ದೇನೆ, ಏನೇನು ಪರಿಸ್ಥಿತಿ ಬರುತ್ತದೆ ಎಂದು ನೋಡುತ್ತಿರುತ್ತೇನೆ. ಹಾಗೆ Mini Hydel projects ನಲ್ಲೂ ಕೂಡ 3,000ದಷ್ಟು Potentiality ಇದೆ. 2,530ನಷ್ಟು capacity ಇದೆ, 740 ಕಮೀಷನ್

ಆಗಿರುವುದು. ಇನ್ನು ಮಿಕ್ಕಿದ್ದು ಮಾಡಲು cheaper priceನಲ್ಲಿ ಆಗುತ್ತದೆ. ಆದರೆ ಮಿಕ್ಕಿದ್ದು ಮಾಡಲು ಏನಾಗುತ್ತದೆಂದರೆ Western Ghats, Forest Department, public agitations ಇವೆಲ್ಲಾ ಜಾಸ್ತಿಯಾಗುತ್ತಿದೆ. ಆದರೆ ನಮ್ಮ ಇಲಾಖೆಯಲ್ಲೂ ಕೂಡ ನಾವು ಏನಾದರೂ ಮಾಡಿ, deparmentನಲ್ಲಿರುವಂಥದ್ದನ್ನು ಯಾವ ರೀತಿ enhance ಮಾಡಬೇಕೆಂದು ರೂರಕೆಲಾ ಸಂಸ್ಥೆಯವರಿಗೆ ಇದನ್ನು ಕೊಟ್ಟು ಒಂದು enquiry ಮಾಡಿಸುತ್ತಿದ್ದೇವೆ. ಅದನ್ನು ಮಾಡಿ capacity ಯನ್ನು ಎಲ್ಲಾ ಕಡೆಗಳಲ್ಲೂ ಹೆಚ್ಚಿಸಬೇಕು. ಏಕೆಂದರೆ, 20–30–40 ವರ್ಷಗಳ ಹಿಂದೆ ಮಾಡಿರುವಂಥದ್ದು, ಏನಾದರೂ ಮಾಡಿ ಏರಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಈ ಮಧ್ಯೆ ಬಹಳ ಜನರು ಸೋಲಾರ್ ವಿಚಾರವನ್ನು ಮಾತನಾಡಿದರು. ನಾವು ಸೋಲಾರ್ ಬಗ್ಗೆ ಎಲ್ಲಾ ಮಾತನಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಬೇಕಾದಷ್ಟು potentiality ಇದೆ. ಸೋಲಾರ್ ಬಗ್ಗೆ 4–5 district ಬಿಟ್ಟರೆ ಇನ್ನು ಎಲ್ಲಾ ಕಡೆಗಳಲ್ಲೂ ಬೇಕಾದಷ್ಟು ಅವಕಾಶಗಳಿವೆ. ಎಲ್ಲಾ ಕಡೆಗಳಲ್ಲೂ ಉತ್ತಮವಾದ ಬೆಳಕು ಇದೆ, ಬಿಸಿಲು ಇದೆ, ಎಲ್ಲಾ capacity ಇದೆ. ಆದರೆ ಹಿಂದೆ ಸರ್ಕಾರ ಒಂದು policy ಮಾಡಿತ್ತು, ಏನಾದರೂ ಮಾಡಿ ಒಂದು ಸಾವಿರ ಮಾಡಬೇಕೆಂದು ಮಾಡಿತು. ಆ policy ಮಾಡಿ, ಬೇಕಾದಷ್ಟು ಟೆಂಡರ್‌ಗಳನ್ನು ಮಾಡಿದರು. ಟೆಂಡರ್ ಕರೆದ ಮೇಲೆ ultimately ಕಮೀಷನ್ ಆಗಿದ್ದು, 40–50ಮೆ.ವ್ಯಾ. ಮಾತ್ರ ಸೋಲಾರ್‌ನಲ್ಲಿ ಆಯಿತು. ಅದಕ್ಕೆ ಅವರು ಬೇಕಾದಷ್ಟು problems ಎಲ್ಲಾ ಹೇಳಿಕೊಳ್ಳುತ್ತಿದ್ದಾರೆ. ಅದಕ್ಕೆ 15ನೇ ತಾರೀಖಿನಂದು cabinetನಲ್ಲಿ ನಾನು ಹೊಸ ಪಾಲಿಸಿಯನ್ನು ತಂದಿದ್ದೇನೆ, ಇಡೀ ಪಾಲಿಸಿಯನ್ನು ಜನರೆಲ್ಲಾ ನೋಡುತ್ತಿದ್ದಾರೆ. ಅವರದ್ದೇ ಆದಂಥ ರೀತಿಯಲ್ಲಿ ವಿಭಿನ್ನವಾದಂಥ ವ್ಯಾಖ್ಯಾನ ಕೂಡ ಬರುತ್ತಿದೆ. ಕೆಲವರು ನನಗೆ ಸಲಹೆ ಕೊಟ್ಟರು. ಇಲ್ಲಿ ಸೋಲಾರ್ ಪಾಲಿಸಿಯಲ್ಲಿ ಏನಾಗುತ್ತಿದೆಯೆಂದರೆ, ಮೊದಲೆಲ್ಲಾ 19–20 ಕೋಟಿ ರೂ.ಗಳಲ್ಲಿ ಗುಜರಾತ್ ಮಾಡಲ್ ಎಂದು ಕೆಲವರು ಮಾತನಾಡುತ್ತಾರೆ. ಗುಜರಾಜ್ ರಾಜ್ಯದಲ್ಲಿ ಆ ರೀತಿ ಇದೆ, ಗುಜರಾತ್‌ನಲ್ಲಿ ಕೆನಾಲ್‌ನಲ್ಲಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಕೆನಾಲ್‌ನಲ್ಲಿ

ಮಾಡಿರುವಂಥದ್ದು ಬರೀ 1 ಮೆ.ವ್ಯಾ., ಇದಕ್ಕೆ 20 ಕೋಟಿ ರೂ.ಗಳನ್ನು ಖರ್ಚು ಮಾಡಿ ಮಾಡಿದ್ದಾರೆ. ಆ ಕೆಲಸವನ್ನು ನಮ್ಮ ಮಾನ್ಯ ಎಂ.ಬಿ. ಪಾಟೀಲ್‌ರವರು ಅವರ ಕ್ಷೇತ್ರದಲ್ಲಿ ಕೆನಾಲ್‌ನ ಮೇಲೆ ನಾವು ಕೂಡ ಮಾಡುತ್ತಿದ್ದೇವೆ. ಅಂಥ ಏನು ಆಗಿಲ್ಲ, ರಾಜಸ್ಥಾನದಲ್ಲಿ 2,000 ಮೆ.ವ್ಯಾ. ಮಾಡಿದ್ದಾರೆ. ಆ prices ಎಲ್ಲಾ ಲೆಕ್ಕ ಹಾಕಿಕೊಂಡರೆ 7–8–9–10 ಈ ರೀತಿ ವಿವಿಧ ರೀತಿಯ price ಇದೆ. ಗುಜರಾತ್‌ನಲ್ಲಿ ಒಟ್ಟು 860 ಮೆ.ವ್ಯಾ. ಇದೆ. ರಾಜಸ್ಥಾನದಲ್ಲಿ 666 ಮೆ.ವ್ಯಾ. ಮಾಡಿದ್ದಾರೆ. ಆಂಧ್ರಪ್ರದೇಶದಲ್ಲಿ 92 ಮೆ.ವ್ಯಾ. ಮಾಡಿದ್ದಾರೆ, ತಮಿಳುನಾಡಿನಲ್ಲಿ 31 ಮೆ.ವ್ಯಾ. ಮಾಡಿದ್ದಾರೆ, ಮಧ್ಯಪ್ರದೇಶದಲ್ಲಿ 195 ಮೆ.ವ್ಯಾ. ಮಾಡಿದ್ದಾರೆ, ಮಹಾರಾಷ್ಟ್ರದಲ್ಲಿ 237 ಮೆ.ವ್ಯಾ. ಮಾಡಿದ್ದಾರೆ. ನಾನು ಎಲ್ಲಿ ಏನಾದರೂ ಮಾಡಿ ಸ್ವಲ್ಪ ಹೆಚ್ಚಿಗೆ ಮಾಡಬೇಕೆಂಬುದು ನನ್ನ ಚಿಂತನೆಯಾಗಿದೆ. ನಾವು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ಇದೆ. ಗುಜರಾತ್‌ನಲ್ಲಿ 8 ರೂ.ಗಳಿಗೆ ಕೊಡುತ್ತಿದ್ದಾರೆ, ರಾಜಸ್ಥಾನದಲ್ಲಿ 6 ರೂ. 45 ಪೈಸೆಗೆ ಕೊಡುತ್ತಿದ್ದಾರೆ, ಪಂಜಾಬ್‌ನಲ್ಲಿ 7 ರೂ. 67 ಪೈಸೆಗೆ ಕೊಡುತ್ತಿದ್ದಾರೆ, ಉತ್ತರ ಪ್ರದೇಶದಲ್ಲಿ 8 ರೂ.ಗೆ ಕೊಡುತ್ತಿದ್ದಾರೆ, ಉತ್ತರಕಾಂಡದಲ್ಲಿ 10.15 ರೂ.ಗಳಿಗೆ ಕೊಡುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮೊನ್ನೆ ಟೆಂಡರ್ರ ಆಯಿತು, 6 ರೂ. 66 ಪೈಸೆಯಿಂದ 7 ರೂ.74 ಪೈಸೆಗೆ ಹೋಗಿದೆ. ಮಧ್ಯಪ್ರದೇಶದಲ್ಲೂ ಆಗಿದೆ, ಇದು ಏನೇ ಆದರೂ ಕೂಡ ultimately KERC ಯವರು ತೀರ್ಮಾನ ಮಾಡಬೇಕಾಗಿದೆ. ಈ ಮಧ್ಯೆ ನಾನು ಒಂದು ಸೋಲಾರ್ ಪಾಲಿಸಿ ಏನು ತೆಗೆದುಕೊಂಡು ಬಂದಿದ್ದೆನೆಂದರೆ, ನಾನು ವಿಶೇಷವಾಗಿ ಸ್ವಂತ ಮಾಡಿಕೊಳ್ಳುವವರಿಗೆ captive consumersಗೆ ಅವಕಾಶ ಮಾಡಿಕೊಡಬೇಕೆಂದು ದೊಡ್ಡ ದೊಡ್ಡ industrialistಗೆ tax exemption ಇದೆ. ಈ ಮಧ್ಯೆ ಅವರಿಗೆಲ್ಲಾ ಅವಕಾಶ ಮಾಡಿಕೊಡಬೇಕೆಂಬ ದೃಷ್ಟಿಯಿಂದ policyಯನ್ನು ಸ್ವಲ್ಪ liberalize ಮಾಡಿದ್ದೇನೆ. ಅದು ಏನೆಂದರೆ, ಅವರು conversion ಮಾಡಿಕೊಳ್ಳುವುದಕ್ಕೆ time ಬಹಳ ಹಿಡಿಯುತ್ತಿತ್ತು. ನಾವು ಇದನ್ನು ಮಾಡಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲ, ಈಗ ನಮ್ಮಲ್ಲಿ ತೆಗೆದುಕೊಂಡಿರುವವರಿಗೆ ಬೇಕಾದಷ್ಟು constraints ಇವೆ. ಅದಕ್ಕೆ ನಾನು

ರೆವಿನ್ಯೂ ಡಿಪಾರ್ಟ್‌ಮೆಂಟ್ ಅನ್ನು request ಮಾಡಿಕೊಂಡಿದ್ದೇನೆ. ಅಲ್ಲೂ ಕೂಡ ನಾವು ಏನಾದರೂ ಮಾಡಿ, solar beam conversion ಮಾಡಬೇಕು, ಮತ್ತೆ ಜಮೀನು purchase ಮಾಡಿಕೊಳ್ಳುವುದಕ್ಕೆ ಅವರಿಗೆ permission ಕೊಡಬೇಕು. ಬರೀ ಸೋಲಾರ್‌ಗೆಂದು condition ಹಾಕಿ, 109 ಪ್ರಕಾರ purchase ಮಾಡಬೇಕು. ಈ ಮಧ್ಯೆ ನಾನು ಇನ್ನೊಂದು ಪ್ರಯೋಗದಲ್ಲಿದ್ದೇನೆಂದರೆ, land owners ಯಾರ‍್ಯಾರು ಇದ್ದಾರೆ, ಅವರು ರೈತರು ಇರಬಹುದು, ಬೇರೆ ಯಾರಾದರೂ ಇರಬಹುದು. 1 ರಿಂದ 3 ಮೆ.ವ್ಯಾ.ವರೆಗೂ ಯಾರು ಬೇಕಾದರೂ ಹಾಕಿಕೊಳ್ಳಲಿ, ಅದಕ್ಕೋಸ್ಕರ 300 ಮೆ.ವ್ಯಾ. ಅಷ್ಟರವರೆಗೂ ಇಟ್ಟಿದ್ದೇನೆ. ಇಡೀ ರಾಜ್ಯದಲ್ಲಿ 4–5 ಜಿಲ್ಲೆಗಳನ್ನು ಬಿಟ್ಟರೆ ಮಲೆನಾಡು, coastal belt ಬಿಟ್ಟರೆ, ಮಿಕ್ಕಿದ್ದು ಎಲ್ಲಾ ಕಡೆಗಳಲ್ಲೂ potentiality ಇದೆ. ಅದಕ್ಕೆ distribution ಆಗಲಿ ಎಂಬ ದೃಷ್ಟಿಯಿಂದ 1 ಮೆ.ವ್ಯಾ.ಗೆ 5 ಎಕರೆ ಜಮೀನು ಬೇಕಾಗುತ್ತದೆ. 3 ಮೆ.ವ್ಯಾ.ಗೆ 15 ಎಕರೆ ಜಮೀನು ಬೇಕಾಗುತ್ತದೆ. ಒಂದು ಮೆ.ವ್ಯಾ.ಗೆ average 7 ಕೋಟಿ ರೂ.ಗಳಾದರೂ ಬೇಕಾಗುತ್ತದೆ. ಅದಕ್ಕೆ ಯಾರಾದರೂ ಮುಂದೆ ಬರಲಿ ಎಂಬ ದೃಷ್ಟಿಯಿಂದ ಈಗ ಹೊಸ ಪಾಲಿಸಿಯಲ್ಲಿ encourage ಮಾಡುತ್ತಿದ್ದೇನೆ. ಮೊನ್ನೆ ಕೂಡ ನಾನು ಸಹಿ ಮಾಡಿದ್ದೇನೆ, ಈಗ 15–20 ದಿವಸಗಳಿಂದ ಅವರಿಗೆ ಸಿಕ್ಕಿದೆ. ಯಾರು ಬೇಕಾದರೂ ಅವರ ಸ್ವಂತ ಜಮೀನಿನಲ್ಲಿ ಮಾಡಿಕೊಳ್ಳಲಿ, ಅವರಿಗೆ KERCಯವರು ಒಂದು rate fix ಮಾಡುತ್ತಾರೆ. ಈಗ ನಮ್ಮ ರಾಜ್ಯದಲ್ಲಿ last bidding 8 ರೂ. 40 ಪೈಸೆ ಆಗಿದೆ. ಮೊನ್ನೆ bidding 7 ರೂ. 40 ಪೈಸೆ ಇತ್ತು, last bidding 8 ರೂ.40 ಪೈಸೆ ಇತ್ತು, basic ಆ price ಇಟ್ಟುಕೊಂಡು ಅವರು ಮಾಡುತ್ತಾರೆ. ಇಷ್ಟು ಸೋಲಾರ್ price ತೆಗೆದುಕೊಂಡು ಬೇರೆ customerಗೆ ನಾವು ಯಾವ price ಕೊಡಬೇಕು? ಇದು ಕೂಡ ಇದೆ. ನಾವು ಇಲ್ಲಿ ಸ್ವಲ್ಪ encourage ಮಾಡಬೇಕೆಂಬ ದೃಷ್ಟಿಯಿಂದ ಒಂದು ಪ್ರಯತ್ನ ಮಾಡುತ್ತಿದ್ದೇವೆ. ಈ ಮಧ್ಯೆ solar roof ವಿಚಾರದಲ್ಲಿ encourage ಮಾಡಬೇಕೆಂದು ಇದ್ದೇವೆ. ನಮ್ಮಲ್ಲೇ ಮನೆಗಳ ಮೇಲೆಲ್ಲಾ ಬಹಳ ಜನರು heater ಅನ್ನು ಹಾಕಿಕೊಂಡಿದ್ದಾರೆ. ಇದನ್ನು ಏನಾದರೂ ಮಾಡಿ

ಬೆಂಗಳೂರನ್ನು ಸೋಲಾರ್ ಸಿಟಿಯನ್ನಾಗಿ ಮಾಡಬೇಕು. ಇದನ್ನು ಉಪಯೋಗಿಸಿಕೊಳ್ಳಬೇಕೆಂದು net metering system ಅವನು ಮನೆಯ ಮೇಲೆ solar ಅನ್ನು ಹಾಕಿಕೊಂಡು, ಅವನು ಮನಗೆ ಉಪಯೋಗಿಸಿಕೊಂಡು ಮಿಕ್ಕಿದ್ದನ್ನು gridಗೆ connection ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅವನು ಕೇಂದ್ರ ಸರ್ಕಾರದಿಂದೇನಾದರೂ ಸಬ್ಸಿಡಿ ತೆಗೆದುಕೊಂಡರೆ ಅವನಿಗೆ ` 7.20 ಗಳನ್ನು ಕೊಡುತ್ತೇವೆ. ಕೇಂದ್ರ ಸರ್ಕಾರದಿಂದ ಸಬ್ಸಿಡಿ ಇಲ್ಲ ಎಂದರೆ ` 9.20 ಗಳನ್ನು ಕೊಡುತ್ತೇವೆ. ಈಗ ಸಾಮಾನ್ಯವಾಗಿ ಗೃಹ ಬಳಕೆ ವಿದ್ಯುತ್ತಿಗೆ ಐದೂವರೆ, ಆರು ಅಥವಾ ಏಳು ರೂಪಾಯಿ ಬೆಲೆ ಇದೆ. ಅವನು ತನಗೆ ಅಗತ್ಯವಿರುವಷ್ಟು ಉಪಯೋಗಿಸಿಕೊಂಡು ಉಳಿದುದನ್ನು ಸರ್ಕಾರಕ್ಕೆ ಕೊಡುವುದನ್ನು ಮಾಡಬಹುದು. ಇದಕ್ಕೆ ಬಹಳ ಜನ ಮುಂದೆ ಬಂದಿದ್ದಾರೆ. ಇತ್ತೀಚೆಗೆ ನಾವು ಎಲೆಕ್ಟ್ರಾನಿಕ್ ಸಿಟಿಗೆ ಹೋಗಿ ಅಲ್ಲಿ ಪ್ರೆಸೆಂಟೇಷನ್ ಮಾಡಿ ತೋರಿಸಿ, ನಿಮಗೆ ಪ್ರೋತ್ಸಾಹ ನೀಡುತ್ತೇವೆ, ನೀವೆಲ್ಲ ಮುಂದೆ ಬನ್ನಿ, ನಿಮ್ಮ ರೂಫಿಂಗ್ ಮೇಲೆ ಹಾಕಿಕೊಳ್ಳಿ, ನಿಮಗೆ ಯಾರೂ ತೊಂದರೆ ಕೊಡುವುದಿಲ್ಲ ಎಂದು ಹೇಳಿ ಬಂದಿದ್ದೇವೆ. ನಾನು ದೆಹಲಿಯಲ್ಲಿ Green building ಎಂದು ನೋಡಿದೆ, Government of Indiaದವರು ಆ ಕಟ್ಟಡವನ್ನು ಕಟ್ಟಿದ್ದಾರೆ. ಅದರ ಮೇಲೆ ಪೂರ್ತಿಯಾಗಿ ಸೋಲಾರ್ ಹಾಕಿದ್ದಾರೆ. ಅದು ಸುಮಾರು ಒಂದೂವರೆ ಎಕರೆಯಿದೆ. ಹೀಗೆ ವಿವಿಧ ಸಂಸ್ಥೆಗಳವರು, ಕಾಲೇಜುಗಳವರು, ಕಾರ್ಖಾನೆಗಳವರು ಎಲ್ಲರೂ ಹಾಕಿಕೊಂಡು, ಅವರಿಗೆ ಎಷ್ಟು ಬೇಕೋ ಅಷ್ಟು ಉಪಯೋಗಿಸಿಕೊಂಡು ಉಳಿದುದನ್ನು ಸರ್ಕಾರಕ್ಕೆ ಕೊಡಲು ಅಲ್ಲೇ ಒಂದು ಮೀಟರ್ ಹಾಕಬಹುದು. ನಮ್ಮಲ್ಲಿ ವಿದ್ಯುತ್ ಡಿಮ್ಯಾಂಡ್ ಸ್ವಲ್ಪ ಕಡಿಮೆಯಾಗಲಿ ಎಂದು ಹೇಳಿ ಇದಕ್ಕೆ 200 ಮೆಗಾವ್ಯಾಟ್‌ನಷ್ಟು ಇಟ್ಟಿದ್ದೇವೆ. ಸೋಲಾರ್ ಬಗ್ಗೆ ಹೇಳುತ್ತಿದ್ದಾರೆ, ಇದರ ಬಗ್ಗೆ ಏನು ಮಾಡುತ್ತಾರೋ ನೋಡೋಣ ಎಂದು ಕುಮಾರಸ್ವಾಮಿಯವರು ಹೇಳುತ್ತಿದ್ದರು. ಇದನ್ನು ಬೇಗ ಮಾಡಬಹುದು. ಏಕೆಂದರೆ ಇದಕ್ಕೆ 18 ತಿಂಗಳು ಮಾತ್ರ time limit ಇಟ್ಟಿದ್ದೇವೆ. ಹಾಗಾಗಿ ಈಗ chances ಇದೆ. ಈಗ ಕೇಂದ್ರ ಸರ್ಕಾರದವರೂ ಸಹ ತೆರಿಗೆ ಮುಂತಾದವುಗಳನ್ನು ಸ್ವಲ್ಪ liberalize ಮಾಡಿದ್ದಾರೆ. ಹಾಗಾಗಿ,

30–40 ಲಕ್ಷ ರೂಪಾಯಿ ಕಡಿಮೆಯಾಗಬಹುದು. ಇದಕ್ಕೆ ಅತಿ ಹೆಚ್ಚು ಶಾಖ ಬೇಕಾಗಿಲ್ಲ. ಜಾಸ್ತಿ ಶಾಖ ಇದ್ದಷ್ಟೂ ತೊಂದರೆಯೇ. ಒಂದು ಲಿಮಿಟ್‌ನಲ್ಲಿ ಶಾಖವಿದ್ದರೆ ಸಾಕು. ಆದರೆ ಸೂರ್ಯನ ಬೆಳಕು ಚೆನ್ನಾಗಿರಬೇಕು. ನಮ್ಮ ಫೋನ್‌ಗಳು, ಕ್ಯಾಲ್ಕುಲೇಟರ್‌ಗಳು ಸೂರ್ಯನ ಬೆಳಕಿಗೆ ಸುಮ್ಮನೆ ಹಾಗೇ ಇಟ್ಟರೇ ಅವು ಕೆಲಸ ಮಾಡುತ್ತವೆ. ಹಾಗೆ, ಇದರಲ್ಲಿಯೂ ಅವಕಾಶವಿದೆ. ಇಡೀ ಪ್ರಪಂಚ ಇದರ ಬಗ್ಗೆ ಮಾತನಾಡುತ್ತಿದೆ. ಜರ್ಮನಿಯಲ್ಲಿ ಈ ರೀತಿ ಇದೆ ಎಂದು ಕೆಲವರು ಹೇಳಿದರು. ನಾನು ಎಲ್ಲ ರೈತರುಗಳಿಗೆ, ಲ್ಯಾಂಡ್ ಓನರ್‌ಗಳಿಗೆ ಹೇಳುವುದೇನೆಂದರೆ ಇದರ ಬಗ್ಗೆ ನೀವು ಒಂದು ಪ್ರಯೋಗವನ್ನು ಮಾಡಬಹುದು. ಇದು ಡಿಸ್ಟ್ರಿಬ್ಯೂಷನ್ ಆಗಬೇಕು. 11 ಕೆ.ವಿ. ಸ್ಟೇಷನ್‌ಗೇ ಕನೆಕ್ಟ್ ಮಾಡಿಕೊಳ್ಳಬಹುದು. ಅದಕ್ಕೇ ಹೊಸ ಸ್ಟೇಷನ್ ಮಾಡಬೇಕು ಎಂದೇನೂ ಇಲ್ಲ. 3–4 ಕಿ.ಮೀ. ಇತ್ತು ಎಂದರೆ ಲೈನ್ ಎಳೆದುಕೊಳ್ಳಲು ಒಂದು ಕಿ.ಮೀ.ಗೆ 5–6 ಲಕ್ಷ ರೂಪಾಯಿಗಳಾಗುತ್ತದೆ. ನನಗೆ ನೆನಪಿದೆ, ಐದೈದು ಮೆಗಾವ್ಯಾಟ್‌ಗೆ ಅವಕಾಶ ಕೊಡಿ ಎಂದು ಖೇಣಿಯವರು ಹೇಳುತ್ತಿದ್ದರು. This is what the concept. ನಾನು ಈಗ ತಂದಿರುವ ಪಾಲಿಸಿಯಿಂದ ಏನಾಗುತ್ತದೆಂದರೆ, ಜಮೀನು ರೈತನ ಹೆಸರಿನಲ್ಲಿಯೇ ಇರುತ್ತದೆ, ಅವನೇನು ಅದನ್ನು ಮಾರುವುದು ಬೇಕಾಗಿಲ್ಲ, ಅವನಿಗೆ ನಾನು PPA ಕೊಡುತ್ತೇವೆ. ರೈತ ಜಮೀನು ಮಾರಿಕೊಳ್ಳದೇ ಇರಲಿ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಹೊಸದಾಗಿ ಯಾರಾದರೂ ಬಂದು ಮಾಡುತ್ತೇವೆ ಎಂದರೆ ಸಮಸ್ಯೆಯಿಲ್ಲ. ರೈತರು ಒಂದು pool ಮಾಡಿಕೊಂಡು cradleಗೆ ಕೊಟ್ಟರೆ ಆಗುತ್ತದೆ. ಒಟ್ಟಿನಲ್ಲಿ ರೈ ಜಮೀನು ಮಾರಿಕೊಳ್ಳುವುದನ್ನು ತಪ್ಪಿಸಬೇಕು ಎನ್ನುವುದೇ ನನ್ನ ಆಸೆ. ಏಕೆಂದರೆ, ಅವನ ಅಗ್ರೀಮೆಂಟ್ 25 ವರ್ಷ ಇರುತ್ತದೆ. 25 ವರ್ಷಕ್ಕೆ ಜಮೀನಿನ ಬೆಲೆ ಜಾಸ್ತಿಯಾಗುತ್ತದೆ. ಏನು ಬೇಕಾದರೂ ಡಬಲ್ ಆಗಲು ಸಾಧ್ಯವಿದೆ. ಆದರೆ ಭೂಮಿ ಮಾತ್ರ ಡಬಲ್ ಆಗಲು ಸಾಧ್ಯವಿಲ್ಲ. ಹೊರತು ಭೂಮಿ ಕಡಿಮೆ ಆಗುತ್ತಿರುತ್ತದೆ. ರೈತ ತನ್ನ ಜಮೀನನ್ನು ಉಳಿಸಿಕೊಳ್ಳಲಿ ಎನ್ನುವ ದೃಷ್ಟಿಯಿಂದ, ಅವನು ಸರ್ಕಾರದ ಜೊತೆಗೆ, ಬೇರೆ ಯಾವುದಾದರೂ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡು,

ಅವನಿಗೆ ಒಂದಷ್ಟು ಬಾಡಿಗೆಯಾದರೂ ಬರಲಿ ಎನ್ನುವ ದೃಷ್ಟಿಯಿಂದ ಆ ಒಂದು option ಕೂಡ ಇಟ್ಟಿದ್ದೇವೆ. ಏಳು ಕೋಟಿ ಬಂಡವಾಳ ಹಾಕಿದವನಿಗೆ 3–4 ಲಕ್ಷ ರೂಪಾಯಿಗಳು ದೊಡ್ಡದೇನಲ್ಲ. Group of farmers ಬಂದು, ನಮ್ಮದು 50 ಎಕರೆ ಜಮೀನಿದೆ, ಅಲ್ಲಿ ಸೋಲಾರ್ ಮಾಡಿಕೊಳ್ಳಿ ಎಂದರೆ ಆಗುತ್ತದೆ. ಅವನು ಅರ್ಜಿ ಹಾಕಿಕೊಂಡು, ಎಲ್ಲವನ್ನೂ ತೆಗೆದುಕೊಂಡು ಬರಬೇಕಾದರೆ ಅವನಿಗೆ ಸುಮಾರು ಎರಡು ವರ್ಷವಾಗುತ್ತದೆ. ಆದ್ದರಿಂದ ಈ ವ್ಯವಹಾರ ಬೇಡ ಎಂದು ಹೇಳಿ, ರೈತರಿಗೂ ಅನುಕೂಲವಾಗಲಿ, ಅವರು ಜಮೀನನ್ನು ಉಳಿಸಿಕೊಳ್ಳಲಿ, ಎನ್ನುವ ದೃಷ್ಟಿಯಿಂದ ಈ solar policyಯನ್ನು ನಾನು ತಂದಿದ್ದೇನೆ. ನಾನು ಮುಕ್ತವಾಗಿ ಇದನ್ನು ಎಲ್ಲರಿಗೂ ಹೇಳುತ್ತಿದ್ದೇನೆ, ನೀವು ಇದನ್ನು ಪ್ರೋತ್ಸಾಹ ಮಾಡಿ, ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಿ. 5 ರಿಂದ 15 ಎಕರೆ ಇರುವವರು ಮಾಡಬಹುದು. ಆದರೆ ಮೂರು ಮೆಗಾವ್ಯಾಟ್‌ಗಿಂತ ಜಾಸ್ತಿ ಈ ಪಾಲಿಸಿಯಲ್ಲಿ ಕೊಡಲು ಸಾಧ್ಯವಿಲ್ಲ. ಬೇರೆಯದೆಲ್ಲವನ್ನೂ ಟೆಂಡರ್ ಮಾಡಬೇಕಾಗುತ್ತದೆ. ಇದನ್ನು ಮಾತ್ರ first come first serve basisನಲ್ಲಿ ಕೊಡುತ್ತೇವೆ. ನೋಟಿಫಿಕೇಷನ್ ಮಾಡಿ ನಂತರ ಹದಿನೈದು ದಿನ ಸಮಯ ಕೊಡುತ್ತೇವೆ, ಯಾರು ಬೇಕಾದರೂ ಅರ್ಜಿ ಹಾಕಿಕೊಂಡು ದುಡ್ಡು ಕಟ್ಟಬಹುದು. ಆದರೆ ಒಂದು ಮೆಗಾವ್ಯಾಟ್ ಉತ್ಪಾದನೆಗೆ ಏಳು ಕೋಟಿ ರೂಪಾಯಿ ಬಂಡವಾಳ ಹಾಕುವಂಥ ಶಕ್ತಿ ಅವನಿಗೆ ಇರಬೇಕು. ಮೂರು ಮೆಗಾವ್ಯಾಟ್‌ಗಾದರೆ ಸುಮಾರು 20 ಕೋಟಿ ಬೇಕಾಗುತ್ತದೆ. ಕೆಲವು institutionಗಳಿಗೂ ನಾನು ಹೇಳಿದ್ದೇನೆ. ಎಲ್ಲ ವರ್ಗದವರಿಗೂ ಕೂಡ ಈ ಅವಕಾಶ ಮಾಡಿಕೊಡಬೇಕು ಎಂದು ಈ ಪಾಲಿಸಿಯನ್ನು ತಂದಿದ್ದೇನೆ. ಏಕೆಂದರೆ ಕನಿಷ್ಟವೆಂದರೆ ಒಂದು ವರ್ಷದಲ್ಲಿ ವಿದ್ಯುತ್ ಉತ್ಪಾದನೆ ಮಾಡಲು ಅವಕಾಶವಿದೆ. ಇದರಿಂದ, ಮುಂದಿನ ವರ್ಷ 1,000 ಮೆಗಾವ್ಯಾಟ್‌ಅನ್ನು ಸೇರಿಸಲು ಅವಕಾಶವಿದೆ. ಕಳೆದ ಮೂರು ವರ್ಷಗಳಲ್ಲಿ 30 ಮೆಗಾವ್ಯಾಟ್ ಅನ್ನೂ ಸೇರಿಸಲು ಆಗಲಿಲ್ಲ. ಕೇವಲ 21–22 ಮೆಗಾವ್ಯಾಟ್ ಬಂದಿದೆ. ಈಗ 30–34 ಮೆಗಾವ್ಯಾಟ್‌ಗೆ ಈಗ ಬರುತ್ತಿದೆ. ಆದ್ದರಿಂದ Green energy ಎಂದು ಹೇಳಿ ಸೋಲಾರ್ ಬಗ್ಗೆ ನಾನು

ಹೆಚ್ಚಿನ ಗಮನ ಕೊಟ್ಟಿದ್ದೇನೆ. ಹೊರದೇಶದ ಬ್ಯಾಂಕುಗಳೆಲ್ಲ ಇದಕ್ಕೆ positive attitude ತೋರಿಸುತ್ತಿದ್ದಾರೆ. ಆದ್ದರಿಂದ, ಸೋಲಾರ್‌ಗೆ ಹೆಚ್ಚಿನ ಹಣ ಕೊಡಬೇಕು ಎಂದು ನಾನು ಮಾಡುತ್ತಿದ್ದೇನೆ. ಇನ್ನು, transmission line ಬಗ್ಗೆ ಬಹಳ ಜನರು ಮಾತನಾಡಿದರು. ನೀವು ಕರೆಂಟ್ ತೆಗೆದುಕೊಂಡರೂ ಅದನ್ನು ತರುವುದಕ್ಕೆ ನಿಮ್ಮಿಂದ ಆಗುತ್ತಿಲ್ಲ ಎಂದು ಕುಮಾರಸ್ವಾಮಿಯವರು ಹೇಳುತ್ತಿದ್ದರು. Yes, I agree. ಈಗ one nation, one grid ಎಂದು ಇಡೀ ರಾಷ್ಟ್ರದಲ್ಲಿ ಆಗಿದೆ. ವಿದ್ಯುತ್ತನ್ನು transmission ಮಾಡುವಾಗ ಬಹಳಷ್ಟು ತೊಂದರೆಯಿದೆ. ಬೆಂಗಳೂರಿನಲ್ಲಿ ಕರೆಂಟ್ ಕೊಡುವುದಕ್ಕೆ ಅವಕಾಶವಿದ್ದರೂ ಕೂಡ ಮಧ್ಯದಲ್ಲಿ ಕೆಲವು ಭಾಗಗಳಲ್ಲಿ ಕನೆಕ್ಷನ್ ಕೊಡುವುದಕ್ಕೆ ಆಗುತ್ತಿಲ್ಲ. ಜಿಗಣಿಯಲ್ಲಿ, ಫ್ರೇಜರ್ ಟೌನ್ ಈ ಕಡೆಗಳಲ್ಲೆಲ್ಲ ಬೇಕಾದಷ್ಟು ಸಮಸ್ಯೆ ಇದೆ. ಯಲಹಂಕದೊಳಗೆ ತುಮಕೂರಿನಿಂದ ಒಂದು ದೊಡ್ಡ ಲೈನ್ ಬರುತ್ತಿದೆ. ಅಲ್ಲೂ ಕೂಡ ಒಳಗೆ ತರಲು ತೊಂದರೆಯಿದ್ದು, ಕೇಂದ್ರ ಸರ್ಕಾರದವರು ದುಡ್ಡು ಸರಿಯಾಗಿ ಕೊಡುತ್ತಿಲ್ಲ ಎಂದು ರೈತರ ಗಲಾಟೆಯಿದೆ. ಅದಕ್ಕೆ ಏನಾದರೂ ಮಾಡಬೇಕೆಂದು ನಾನು ಒಂದು ಪಾಲಿಸಿಯನ್ನು ಕೂಡ ತಂದಿದ್ದೇನೆ. ಅದು ಕ್ಯಾಬಿನೆಟ್‌ನಲ್ಲಿ ಕೂಡ ಬರುತ್ತಿದೆ. ರೈತರ ಜಮೀನಿನಲ್ಲಿ ಲೈನ್ ಹೋಯಿತೆಂದರೆ ಅವನಿಗೆ ಒಳ್ಳೆಯ ಕಾಂಪನ್ಸೇಷನ್ ಕೊಡಲೇಬಾಕಾಗುತ್ತದೆ. ಲೈನ್ ಹೋಗಿರುವ ಜಮೀನಿಗೆ ಕೆಳಗೆ ಯಾವುದೇ ಕಟ್ಟಡವನ್ನು ಕಟ್ಟಲು ಸಾಧ್ಯವಿಲ್ಲ. ಅದಕ್ಕೆ liberal ಆಗಿ ಒಂದು ಪಾಲಿಸಿಯನ್ನು ಮಾಡಿ, project costನಲ್ಲೇ ಅದು ಸೇರಿಕೊಂಡರೆ ಸೇರಿಕೊಳ್ಳಲಿ ಎಂದು ಮಾಡಿದ್ದೇವೆ. ಆ ಒಂದು ಪಾಲಿಸಿಯನ್ನು ಕೂಡ ನಾನು ತರುತ್ತಿದ್ದೇನೆ. ನಂತರ ಏನು ಕೊಡುತ್ತೇವೆ ಎನ್ನುವುದನ್ನು ನಾನು ಹೇಳುತ್ತೇನೆ. ಈ ಮಧ್ಯೆ K.P.T.C.L. infrastructure improve ಮಾಡುವುದರಲ್ಲಿ ನಾವು ಈ ವರ್ಷ ಸ್ವಲ್ಪ ಮುಂದಕ್ಕೆ ಹೋಗಿದ್ದೇವೆ. ಯಡ್ಲಾಪುರ ಜನರೇಟಿಂಗ್ ಸ್ಟೇಷನ್, ಯರಮರಸ್ ಅಲ್ಲಿಗೆ 3,000 ಕೋಟಿ ರೂಪಾಯಿಗಳ ಕಾರ್ಯಕ್ರಮ ಈಗಾಗಲೇ ನಡೆಯುತ್ತಿದೆ. ಗುಲ್ಬರ್ಗ, ಚಿಕ್ಕನಾಯಕನಹಳ್ಳಿ, ಬಳ್ಳಾರಿ ಈ ಮೂರು receiving stationಗಳಿಗೆ ಪ್ಲಾನ್ ಮಾಡಿದ್ದೇವೆ. ಅಲ್ಲೂ ಕೂಡ ಕೆಲಸ

ನಡೆಯುತ್ತಿದೆ. ಕೂಡಗಿ ಮತ್ತು ತುಮಕೂರು ಲೈನ್‌ದೂ ಸಹ 160 ಕಿ.ಮೀ. ಅನ್ನು power gridಗೆ ಸೇರಿಸಬೇಕಾಗುತ್ತದೆ. ಅದನ್ನೂ ಕೂಡ ನಾವು ಮಾಡುತ್ತಿದ್ದೇವೆ. ಈ ಮಧ್ಯೆ, Green Energy Corridor ಎಂದು ಮಾಡುತ್ತಿದ್ದೇವೆ. ಅದಕ್ಕೂ ಕೂಡ ಕೇಂದ್ರ ಸರ್ಕಾರದವರು, MNREಯವರು 400 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ, ಜರ್ಮನಿಯಿಂದ soft loan 40% ಬರುತ್ತಿದೆ. ನಮ್ಮದೂ 20%ನಷ್ಟು ಇದೆ. ಇಲ್ಲಿ 842 ಕಿ.ಮೀ.ಗಳಷ್ಟು ಲೈನ್‌ಅನ್ನು ಎಳೆಯಬೇಕೆಂದು ಗದಗ್ ಹತ್ತಿರ ದೋಣಿ. ಮುದಕೋಡು ಮತ್ತು ಜಗಳೂರು ಇಲ್ಲಿ ಮೂರು ಸ್ಟೇಷನ್‌ಗಳನ್ನು ಮಾಡಬೇಕಾಗಿದೆ. ಹೊಸದುರ್ಗ ಹಾಗೂ ಶಿವನಸಮುದ್ರ ಇಲ್ಲಿ ಕೂಡ ಸ್ಟೇಷನ್ ಮಾಡಲು ಈಗಾಗಲೇ ನಾವು ಕ್ರಮ ಕೈಗೊಂಡಿದ್ದೇವೆ. ಸುಮಾರು 1,000 ಕೋಟಿ ರೂಪಾಯಿಗಳನ್ನು Green Energy Corridorಗೆ invest ಮಾಡುತ್ತಿದ್ದೇವೆ. ಏಕೆಂದರೆ, wind energy ಅಲ್ಲಿಗೆ ಬರಬೇಕಲ್ಲವೇ? ಬೆಂಗಳೂರು ಸಿಟಿಯೊಳಗೆ system strengthen ಮಾಡುವುದಕ್ಕೋಸ್ಕರ ಏನು ಮಾಡುತ್ತಿದ್ದೇವೆ ಎಂದರೆ, ಇಲ್ಲಿ ಹಿಂದೆ ಜಾಗವನ್ನು ಬಿಡದೇ ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ. ಹೀಗೆ ಬೇಕಾದಷ್ಟು ಸಮಸ್ಯೆ ಇದೆ. ವಿದ್ಯುಚ್ಛಕ್ತಿ ಇದ್ದರೂ ನಿರ್ವಹಣೆ ಮಾಡುವುದಕ್ಕಾಗಿಯೇ ನಾವು ಬೆಂಗಳೂರಿನಲ್ಲಿ 2–3 ಗಂಟೆ ಪವರ್ ಕಟ್ ಮಾಡುತ್ತಿದ್ದೇವೆ. ಅದಕ್ಕೆ ಕರೆಂಟ್ ಇಲ್ಲ ಎಂದು ಅಲ್ಲ. ಇಲ್ಲಿ prompt payers ಇದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಗ್ರಾಹಕರು ದುಡ್ಡು ಕರೆಕ್ಟಾಗಿ ಕಟ್ಟುತ್ತಿದ್ದಾರೆ. ಬೆಸ್ಕಾಂ ಬಹಳ ಚೆನ್ನಾಗಿ ನಡೆಯುತ್ತಿದೆ. ಹಾಗಾಗಿ ಇಲ್ಲಿ ಉತ್ತೇಜನ ಕೊಡಬೇಕು. ಇಷ್ಟೆಲ್ಲಾ ಸಮಸ್ಯೆ ಇದ್ದರೂ ಇಲ್ಲಿ major power cut ಆಗಿಲ್ಲ. ಕಳೆದ ಬೇಸಿಗೆಯಲ್ಲಿ ಕೂಡ we have managed it. ಇಲ್ಲಿ ಪವರ್ ಕಟ್ ಮಾಡಲೇ ಬೇಕು ಎಂದರೂ ಕೂಡ we have tried to protect. ಬೇರೆ ಕಡೆ ಸ್ವಲ್ಪ ಸಮಸ್ಯೆಯಾದರೂ ಕೂಡ ಇಲ್ಲಿ ನಾವು ರಕ್ಷಣೆ ಮಾಡಿದ್ದೇವೆ. ಕಳೆದ 10–12 ವರ್ಷ ಈ ವಿಷಯದಲ್ಲಿ we have failed. ಯಾರ ಮೇಲೂ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಸ್ವಲ್ಪ ಹೆಚ್ಚಿಗೆ ಒತ್ತು ಕೊಡಬೇಕಾಗಿತ್ತು. ಬೆಂಗಳೂರು ಸಿಟಿಯಲ್ಲಿ ಲೈನ್ ಬರಬೇಕಾದರೆ ರೈತರು ಸಹಕಾರ ಕೊಡಬೇಕು, ಇಲ್ಲಿ ಜಮೀನು

costlyಯಾಗಿದೆ, ಅಲ್ಲಿ ಒಂದು ಕಂಬ ಹಾಕಲೂ ಅವನು ಬಿಡುವುದಿಲ್ಲ. ಹೀಗೆ ಬೇಕಾದಷಟು ಸಮಸ್ಯೆಯಿದೆ. Transmission line ಹಾಕಲು ರೈತರ ಸಮಸ್ಯೆಯಂತೂ ವಿಪರೀತ ಇದೆ. ಅದಕ್ಕೋಸ್ಕರ K.P.T.C.L. ನಿಂದ 2,027 ಕೋಟಿ ರೂಪಾಯಿಗಳ ಯೋಜನೆ ಮಾಡಿ ಪ್ಲಾನ್ ಹಾಕಿಕೊಂಡಿದ್ದೇವೆ. ಸುಮಾರು ಒಂದೂವರೆ ವರ್ಷದಲ್ಲಿ ಇದನ್ನು ಮಾಡಬಹುದು. ಇದರ ಜೊತಗೆ, ನಾನು ಹೇಳಿದ ಹಾಗೆ, expression of interest ಕರೆದಿದ್ದೇವೆ. ನೋಡೋಣ. ಯಾರ್‍ಯಾರು ಇದಕ್ಕೆ participate ಮಾಡುವುದಕ್ಕೆ, thermal plant ಗೆ 150 ಕಿ.ಮೀ., ನಮ್ಮ ಅಧ್ಯಕ್ಷರೆ ಕ್ಷೇತ್ರದಲ್ಲಿ ಯಾರೋ ಒಂದಿಬ್ಬರು ಅರ್ಜಿ ಹಾಕಿಕೊಂಡು ಕೇಳಿಕೊಂಡು ಬಂದಿದ್ದರು. ಗೌರಿಬಿದನೂರಿನ ಕಡೆ ಯಾರೋ ಜಮೀನಿದೆ, ನಾವು thermal plant ಮಾಡುತ್ತೇವೆಂದು ಬಂದಿದ್ದರು. ಬೆಂಗಳೂರಿಗೆ 150 ಕಿ.ಮೀ. ಬಂತು ಎಂದರೆ ಬೆಂಗಳೂರಿಗೆ ಸ್ವಲ್ಪ ಅನುಕೂಲವಾಗಲಿ, alternative ಎಂದು ಹೇಳಿ ಈ ರೀತಿ ಯೋಚನೆ ಮಾಡುತ್ತಿದ್ದೇನೆ. ಹಾಗೆಯೇ ನಮ್ಮದು ಇದೆ. ಈ ಮಧ್ಯೆದಲ್ಲಿ ನಾನು Central Government ನವರ ಜೊತೆ ಕೂಡ ಅವರಲ್ಲಿರುವಂಥ 15% extra power ಇಟ್ಟುಕೊಂಡಿರುತ್ತಾರೆ. ಹೇಗೆ add ಮಾಡುವುದು ಎಂದು ಹೇಳುತ್ತೇನೆ. ಅದನ್ನೂ ಕೂಡ ನಾನು request ಮಾಡಿಕೊಳ್ಳುತ್ತಿದ್ದೇನೆ. ಮೊನ್ನೆ ತಮಿಳುನಾಡಿನವರು 300 MW ನಷ್ಟು ತೆಗೆದುಕೊಂಡು ಬಂದಿದ್ದಾರೆ, ಆಂಧ್ರಪ್ರದೇಶದವರು ಒಂದಷ್ಟು ಮಾಡಿಕೊಂಡು ಬಂದಿದ್ದಾರೆ. ಇದಾದತಕ್ಷಣ ನಾನು ನಾಳೆ, ನಾಡಿದ್ದರಲ್ಲಿ Central Minister ಹತ್ತಿರ ಹೋಗಿ 15% ಏನಿದೆ ಸ್ವಲ್ಪ ನಮಗೆ ನೀವು ಕೊಡಿ ಎಂದು request ಮಾಡುವ ಹಂತದಲ್ಲಿದ್ದೇನೆ. ಈಗಾಗಲೇ ನಾನು ಅವರಿಗೆಲ್ಲ request ಮಾಡಿ ಕಳುಹಿಸಿಕೊಟ್ಟಿದ್ದೇನೆ. CM, ನಾವೆಲ್ಲ ಈಗಾಗಲೇ ಒಂದು ಕಾಗದ ಬರೆದಿದ್ದೇವೆ. ಹೋಗಿ personal ಆಗಿ request ಮಾಡಿಕೊಂಡು ಆ grid ನಿಂದ ಮಾಡಿ ಎನ್ನುತ್ತೇವೆ. ರಾಜ್ಯದಲ್ಲಿ ಅಲ್ಲೇ ಪರಿಸ್ಥಿತಿ ನೋಡುತ್ತಿದ್ದೀರಿ. ಇಡೀ ದೇಶದಲ್ಲಿ ಇದರ ಬಗ್ಗೆ ದೊಡ್ಡದಾಗಿ ನಡೆಯುತ್ತಿದೆ. ಈ ಮಧ್ಯದಲ್ಲಿ ನಾನು ಮಂತ್ರಿಯಾದ ಮೇಲೆ Central Government ನಿಂದ ಒಂದು agreement ಮಾಡಿಕೊಂಡೆ. 4ನೇ ಮಾರ್ಚ್‌ನಲ್ಲಿ

ESCOMS ನಿಂದ ಒಂದು PP enter ಮಾಡಿದ್ದೇನೆ. 4 ರೂ.ಗಳ ದರದಲ್ಲಿ 450 MW ಗೆ ನಾನು sign ಮಾಡಿದ್ದೇನೆ. ಅದು CERC ಮುಂದಿದೆ. ಅದನ್ನೂ ಕುಡ ಏನಾದರೂ ಮಾಡಿ Central Government ನಿಂದ ನಮ್ಮ ದಾಮೋದರ್ ವ್ಯಾಲಿ ಅವರಿಂದ ಮಾಡಿಕೊಂಡಿದ್ದೇವೆ. ಅದಕ್ಕೂ corridor ಗೂ, ಮತ್ತೊಂದಕ್ಕೆಲ್ಲ apply ಮಾಡಿದ್ದೇವೆ. ಈ ಮಧ್ಯೆ ಇಲ್ಲಿ ಕೂಡಂಕುಳಂನಲ್ಲಿ 4 ರೂ.ಗಳಿಗೆ CERC ಮುಂದೆ final tariff ಗೆ ಅರ್ಜಿ ಹಾಕಿಕೊಂಡಿದ್ದೇವೆ. ಅದೂ ಕೂಡ ಒಂದು agreement ಮಾಡಿದ್ದೇನೆ. ಕೂಡಂಕುಳಂಗೆ 3 ರೂ. 50 ಪೈ., ಅಲ್ಲೂ ಕೂಡ ಇದನ್ನು ಹಾಕಿಕೊಂಡಿದ್ದೇವೆ. ಹಾಗೆ ನಾವು add ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಮಧ್ಯದಲ್ಲಿ ಯಾರೋ ಒಬ್ಬರು ಜುರಾಲಾ ವಿಚಾರ ಮಾತನಾಡಿದರು. ನಮಗೂ ಆಂಧ್ರಪ್ರದೇಶದವರಿಗೂ ದೇವರಾಜ ಅರಸುರವರ ಕಾಲದಲ್ಲಿ ಒಂದು agreement ಆಗಿತ್ತು. ಈ Government ಮಧ್ಯೆ ಬರುವ ದಿನಗಳಲ್ಲಿ, I should congratulate my Officers, ನಮ್ಮ KPCL MD and ACS ರವರು ಹೋಗಿ ಏನೋ ಒಂದು pressure build up ಮಾಡಿ ಅದನ್ನು ತಂದು agreement ಅನ್ನು ಸೈನ್ ಮಾಡಿಸಿಬಿಟ್ಟರು. Sign ಮಾಡಿಸಿ, ಅಲ್ಲೊಂದು ದೇವರಾಜ ಅರಸುರವರ ಕಾಲದಲ್ಲಿ ಆದ agreement ಇವತ್ತಿನವರೆಗೂ implement ಆಗಿರಲಿಲ್ಲ. ಅದು unit ಆಗಿದೆ. Next ನದಿ, ನೀರು ಎಲ್ಲಾ ತುಂಬಿದ ತಕ್ಷಣ ಅದೂ ಕೂಡ ಆಗುತ್ತದೆ. 236 MW, ಅದರಲ್ಲಿ 50% ನಮಗೆ ಸಿಗುತ್ತದೆ. ನಾವು ಅವತ್ತಿನ ಕಾಲದಲ್ಲಿ 70 ಕೋಟಿ. ರೂ.ಗಳಷ್ಟು ಬಂಡವಾಳ ಹಾಕಿದ್ದೇವೆ. ಅವರು 720 ಕೋಟಿ.ರೂ. investment ಮಾಡಿದ್ದಾರೆ. ನಮಗೆ 50% share ಕೊಡಬೇಕೆಂದು ತೀರ್ಮಾನವಾಗಿದೆ. 117MW ಆಗುತ್ತದೆ. ಅದಕ್ಕೆ tariff 3 ರೂ. 23 ಪೈ. Fix ಆಗಿದೆ. Ultimately ಏನೇ ಆದರೂ ಕೂಡ tariff, CERC order ಇವೆಲ್ಲ ಕೂಡ ಇದೆ, ಇದರ ಮೇಲೆ ನಾವು ಮಾಡಬೇಕಾಗುತ್ತದೆ. ವಿದ್ಯುಚ್ಛಕ್ತಿ ಸಾಮರ್ಥ್ಯವನ್ನು ಹೆಚ್ಚಿಸಲಿಕ್ಕೆ, add ಮಾಡಲಿಕ್ಕೆ ನಾವು ಇಂಥ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಬಹಳ ಜನ ಸ್ನೇಹಿತರು ನಮ್ಮ ರೈತರ ಬಗ್ಗೆ ಎಲ್ಲ ಮಾತನಾಡಿದರು. Transformers, ಮತ್ತೊಂದು ಎಲ್ಲಾ ಬೇಕಾದಷ್ಟು

ಸಮಸ್ಯೆಗಳಿವೆ, ನೀವು ಸರಿಯಾಗಿ ಮಾಡುತ್ತಿಲ್ಲವೆಂದು ಹೇಳಿದರು. ನಿರಂತರ ಜ್ಯೋತಿ ಯೋಜನೆ 2008-09ರಲ್ಲಿ ಪ್ರಾರಂಭವಾಯಿತು. ಒಟ್ಟು 128 ತಾಲ್ಲೂಕುಗಳಲ್ಲಿ ಸುಮಾರು 1746 ಮಾರ್ಗಗಳಲ್ಲಿ ಆಗುತ್ತಿದೆ. ಇನ್ನೂ 89 ತಾಲ್ಲೂಕುಗಳನ್ನು ಒಟ್ಟಿಗೆ ನಾವು ತೆಗೆದುಕೊಳ್ಳಬೇಕಾಗಿದೆ. RLMSನಿಂದ ಕೆಲವು ಕಡೆ ಅದು fail ಆಗಿ ಇದನ್ನು ನಾವು convert ಮಾಡುತ್ತಿದ್ದೇವೆ. ಈಗಾಗಲೇ ನಾವು ಸುಮಾರು 61% ನಿರಂತರ ಜ್ಯೋತಿಯಲ್ಲಿ ಪ್ರಗತಿ ಸಾಧನೆ ಮಾಡಿದ್ದೇವೆ. ಒಟ್ಟು 1066 ಭೌತಿಕ ಗುರಿಯನ್ನಿಟ್ಟುಕೊಂಡು 11 KV ಯನ್ನು ಪೂರ್ಣಗೊಳಿಸಿದ್ದೇವೆ. ಇನ್ನೂ 706 feederಗಳನ್ನು ನಾವು ಈಗ ಮಾಡಬೇಕಾಗಿದೆ. ಹೆಚ್ಚೂಕಡಿಮೆ ಒಟ್ಟು 1700 ಕೋಟಿ.ರೂ. I think third phase ನಲ್ಲೇನಾದರೂ ಮಾಡಿ ನಾವು ಮುಗಿಸುತ್ತೇವೆ. ಏಕೆಂದರೆ, ನಾವು ಜನರಿಗೆ ಒಂದು ಕಡೆ 24 ಗಂಟೆ ವಿದ್ಯುಚ್ಛಕ್ತಿ ಕೊಡಬೇಕು, ಇನ್ನೊಂದು ಕಡೆ ರೈತನಿಗೂ ಕೂಡ ಸರಿಯಾದ quality power ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಈ ಮಧ್ಯದಲ್ಲಿ transformer ವಿಚಾರದಲ್ಲಿ ದೊಡ್ಡ ದ್ವಂದ್ವ ಬಂತು. ನಮ್ಮ ಸದಸ್ಯರೆಲ್ಲ ಹೇಳಿದ್ದನ್ನು ನಾನು ಒಪ್ಪುತ್ತೇನೆ. ಬಹಳ ಸಮಸ್ಯೆ ಇದೆ. 3 ತಿಂಗಳು, 4 ತಿಂಗಳು, 30 ಸಾವಿರ, 40 ಸಾವಿರ ಇವೆಲ್ಲ ಕೇಳಿದ್ದೇನೆ. ಇಲ್ಲವೆಂದು ನಾನು ಹೇಳುವುದಿಲ್ಲ. ಇದನ್ನು ಏನಾದರೂ ಮಾಡಬೇಕು. ನನಗೂ ಕೂಡ ಆಸಕ್ತಿ ಇದೆ. ನಾನೇನಾದರೊಂದು mark ಮಾಡಬೇಕು. ಏಕೆಂದರೆ, ಒಂದು ದಿನದಲ್ಲಿ ನಾನು ಮಾಡಲಿಕ್ಕೆ ಸಾಧ್ಯವಿಲ್ಲ. ಇದಕ್ಕೆ ಏನಾದರೊಂದು ಮಾಡಬೇಕು. ರೈತನಿಗೆ ಯಾವ ರೀತಿ ಸಹಾಯ ಮಾಡಬೇಕು ಎಂದು ಹೇಳಿ ಅನೇಕ ಚಿಂತನೆಯನ್ನು ಮಾಡುತ್ತಿದ್ದೇನೆ. ಈಗ 20 ಲಕ್ಷ ಪಂಪ್‌ಸೆಟ್ ಇವೆ. ನಮ್ಮ ಗೋವಿಂದಪ್ಪನವರು ಇಲ್ಲಿ ಇದ್ದಾರೆ. ಗೋವಿಂದಪ್ಪನವರೆ ನಿಮ್ಮ ತಾಲ್ಲೂಕಿನಲ್ಲಿ ಒಂದೇ ವರ್ಷ add ಆಗಿರುವುದು ಎಷ್ಟು?

ಶ್ರೀ ಜಿ.ಜಿ. ಗೋವಿಂದಪ್ಪ:- 15 ಸಾವಿರ ಪಂಪ್‌ಸೆಟ್.

ಶ್ರೀ ಡಿ.ಕೆ. ಶಿವಕುಮಾರ್:- 15 ಸಾವಿರ ಅಕ್ರಮ ಪಂಪ್‌ಸೆಟ್‌ಗಳು ಒಂದು ವರ್ಷದಲ್ಲಿ ಹೊಸದುರ್ಗದಲ್ಲಾಗಿದೆ. ಏನು ಮಾಡಬೇಕು? ನಾನು

ಒಂದು ತಾಲ್ಲೂಕು ಬಗ್ಗೆ ಹೇಳುತ್ತಿದ್ದೇನೆ. ನೋಡಿ ನನಗೆ ಗಾಬರಿಯಾಯಿತು. ಮಾತನಾಡುವ ಹಾಗಿಲ್ಲ. ರೈತ. ರೈತನ ವಿಚಾರಕ್ಕೆ ಹೋಗುವ ಹಾಗಿಲ್ಲ. Disconnect ಮಾಡುವ ಹಾಗಿಲ್ಲ. ಎಷ್ಟೋ ಹಳ್ಳಿಗಳಲ್ಲಿ ರೈತ ಒಳಗಡೆ ಹೋಗುವುದಕ್ಕೆ ಬಿಡುತ್ತಿಲ್ಲ. ಏನ್ರಿ, ಬೆಂಗಳೂರಿನವರಿಗೆ 24 ಗಂಟೆ ಕರೆಂಟ್ ಕೊಡುತ್ತಿದ್ದೀರಿ, ನಮಗೆ ಏಕೆ ಕರೆಂಟ್ ಕೊಡುವುದಿಲ್ಲ, ಅಲ್ಲಿಯವರೆಗೆ ನಿಮಗೆ ಬಿಲ್ ಕಟ್ಟುವುದಿಲ್ಲ ಎನ್ನುತ್ತಾರೆ. ನಮ್ಮ ಪುಟ್ಟಣ್ಣಯ್ಯನವರ ನ್ಯಾಯ ಅದೇನೇ. ಬೇರೆ ಬೇರೆ districts ನಲ್ಲೂ ಎಲ್ಲ ಇದರಲ್ಲೂ ಇದೆ. Assembly ಆದಮೇಲೆ ಸ್ವಲ್ಪ ದಿಟ್ಟವಾದ, ಏಕೆಂದರೆ, law of the land ಬದಲಾವಣೆ ಮಾಡಲಿಕ್ಕೆ we cannot allow. ಇದಕ್ಕಾಗಿ ವಿಧಿ ಇಲ್ಲದೆ ನಾನು ದಿಟ್ಟವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಮಧ್ಯದಲ್ಲಿ ರೈತನಿಗೆ transformers ಏನಾಗುತ್ತದೆಂದರೆ, ಒಬ್ಬೊಬ್ಬರು 4–4, 5–5 ಹಾಕಿಕೊಳ್ಳುತ್ತಾರೆ. ಕೆಲವರು ಕಷ್ಟಪಟ್ಟು ಸ್ವಂತ ಹಾಕಿಕೊಳ್ಳುವವರು ಮುಂದಕ್ಕೆ ಬರುತ್ತಿದ್ದಾರೆ. ಈ ಮಧ್ಯದಲ್ಲಿ ಏನಾದರೂ ಮಾಡಬೇಕೆಂದು ಕೆಲವರೆಲ್ಲ suggest ಮಾಡಿದರು. Compulsory transformer bank ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. In all Taluks we want to do this. ಕೇವಲ transformers repair ಗೇ ಒಟ್ಟು 270 ಕೋಟಿ.ರೂ. ವರ್ಷಕ್ಕೆ ಖರ್ಚಾಗುತ್ತದೆ. 2011–12, 2013–14 ಕ್ಕೆ 270 ಕೋಟಿ.ರೂ. transformer ಗೆ ಆಗಿದೆ. ಅದಕ್ಕೇನಾದರೂ ಮಾಡಿ transformer bank ಮಾಡಬೇಕೆಂದು ಮಾಡಿದ್ದೇವೆ. ಈಗ ಎಷ್ಟು transformers ಇವೆ, ಅದನ್ನು double ಮಾಡಬೇಕೆಂಬುದು ನನ್ನ ಚಿಂತನೆ. ಈಗ ಒಟ್ಟು 8,801 transformers ಅನ್ನು ಈಗಾಗಲೇ 2 ವರ್ಷಕ್ಕೆ ನಾವು 620 ಕೋಟಿ.ರೂ. ಗಳಲ್ಲಿ purchase ಮಾಡಿದ್ದೇವೆ. ಅದನ್ನು ನಾವು ಈಗೇನಾದರೂ ಮಾಡಿ double ಮಾಡಬೇಕೆಂದಿದೆ. ಕೆಲವರು ನಗಬಹುದು, ಇದು ಸಾಧ್ಯವೇ ಎನ್ನಬಹುದು. ಇದಕ್ಕೆ ನಾನೊಂದು ಪ್ರಯೋಗ ಮಾಡಿದ್ದೇನೆ. ಏನೆಂದರೆ, ಕೆಲವರು members suggest ಮಾಡಿದರು, ಒಂದು ದಿನಕ್ಕೆ ಕುಡಿಯುವ ನೀರಿಗೆ transformer ಬದಲಾವಣೆಯಾಯಿತೆಂದರೆ, 24 hours ನಲ್ಲಿ ಅವನು ಬದಲಾವಣೆ ಮಾಡಬೇಕಾಗುತ್ತದೆ. ಅವರ್ಯಾರೋ ಹೇಳಿದರು, ರೈತನಿಗೆ 4–5

ದಿನ, ಒಂದು ವಾರ ಎಂದು ಹೇಳಿದರು. ಒಂದು ವಾರ ಇಲ್ಲ. ನಾನು ಆಗಲೇ advertisement ಮಾಡಿದ್ದೇನೆ. Circular ಹೊರಡಿಸಿದ್ದೇನೆ. 3 ದಿನಗಳಲ್ಲಿ ಅವನು compulsory transformer ಅನ್ನು change ಮಾಡಲೇಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- Interfere ಆಗುತ್ತೇನೆ. BESCOM ಒಂದರಲ್ಲಿಯೇ ಪ್ರತಿ ವರ್ಷ 5 ಸಾವಿರ transformers demand ಇದೆ. ನೀವು ಕ.ವಿ.ಕ. ಮೇಲೆ depend ಆಗಿದ್ದೀರಿ. ಕ.ವಿ.ಕ ದಲ್ಲಿ ವರ್ಷಕ್ಕೆ ಅವರು manufacture ಮಾಡುವುದೇ 2 ಸಾವಿರ, ಅವರ limit ಇರತಕ್ಕಂಥದ್ದು ಅಷ್ಟೆ. ನೀವು transformer bank ಮಾಡುತ್ತೇವೆಂದು ಕಳೆದ ವರ್ಷದಿಂದ ಹೇಳುತ್ತಿದ್ದೀರಿ. ಕಳೆದ 6 ವರ್ಷಗಳಿಂದ ಯಾವುದೇ ಒಂದು ಹಳ್ಳಿಯಲ್ಲಿ ಕುಡಿಯುವ ನೀರಿಗೆ ಇರಲಿ, ರೈತನ ಹೊಲಕ್ಕೆ ಇರಲಿ, 2 ತಿಂಗಳು, 3 ತಿಂಗಳಾದರೂ transformer change ಮಾಡುತ್ತಿಲ್ಲ. ಇವತ್ತೇನು ನೀವು transformer ವಿಷಯದಲ್ಲಿ bank ಬಗ್ಗೆ ಹೇಳುತ್ತಿದ್ದೀರಿ, ನಾನು ದೇಶಪಾಂಡೆ, ಹಿರಿಯರು ಅವರಿಗೆ ಮನವಿ ಮಾಡುತ್ತೇನೆ, ನಾನು ಕಳೆದ ವಿಧಾನಸಭೆ ಕಲಾಪದಲ್ಲಿ ಹೇಳಿದೆ, NGEFನಲ್ಲಿ ಅತ್ಯಂತ ಉತ್ಕೃಷ್ಟವಾದಂಥ transformers ಅನ್ನು prepare ಮಾಡುತ್ತಿದ್ದರು. ಅಂಥ ಒಂದು ಸಂಸ್ಥೆಯನ್ನು ಮುಳುಗಿಸಿಬಿಟ್ಟಿದ್ದೇವೆ. ಇವತ್ತೂ ಅವಕಾಶವಿದೆ. ಅದನ್ನು ಇವತ್ತು ಪ್ರಾರಂಭ ಮಾಡುವಂಥದ್ದಕ್ಕೆ ಇನ್ನೂ ಅತ್ಯುತ್ತಮವಾದಂಥ equipment ಅಲ್ಲೇನಿದೆ manufacture ಮಾಡುವಂಥದ್ದಕ್ಕೆ ಇಂಥದ್ದರ ಬಗ್ಗೆ ಸರ್ಕಾರ ಗಮನಕೊಡದೆ, ಅವನ್ನೆಲ್ಲ ಮಾರತಕ್ಕಂಥ ತೀರ್ಮಾನಗಳನ್ನು ಮಾಡಿಕೊಂಡು ಇವತ್ತು ಹಾಳು ಮಾಡಿಟ್ಟುಕೊಂಡು ಕುಳಿತಿದ್ದೇವೆ. ಕ.ವಿ.ಕ ಒಂದರ ಮೇಲೆಯೇ ನಾವು depend ಆಗಿ transformer ತೆಗೆದುಕೊಳ್ಳಲಿಕ್ಕಾಗುವುದಿಲ್ಲ. BESCOM ಒಂದರಲ್ಲೇ ಇವತ್ತು 5 ಸಾವಿರ demand ಇಟ್ಟುಕೊಂಡು, ಕವಿಕಾದಲ್ಲಿ 2 ಸಾವಿರ manufacture ಮಾಡುತ್ತಾರೆ. NGEF ಅನ್ನು ಏನಾದರೂ ಮಾಡಿ ಸರಿಪಡಿಸಿಕೊಂಡು ಇದಕ್ಕೆಲ್ಲ ಒಂದು positive direction ನಲ್ಲಿ ಹೋಗತಕ್ಕಂಥದ್ದಕ್ಕೆ ಕೆಲವು ತೀರ್ಮಾನಗಳನ್ನು ದಿಟ್ಟವಾದ ನಿರ್ಧಾರ ಮಾಡಿಕೊಳ್ಳಿ ಎಂದು ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– NGEFನವರು ಈಗಾಗಲೇ ಬಹುಶಃ ನಿಮಗೆ ಮನವಿಯನ್ನೂ ಕೊಟ್ಟಿದ್ದಾರೆ. ಅಲ್ಲಿಯ employees, officers ಎಲ್ಲರೂ ಸೇರಿ ಕೊಟ್ಟಿದ್ದಾರೆ. ಹುಬ್ಬಳ್ಳಿಯ NGEF ಬಹಳ profit ನಲ್ಲಿ ನಡೆಯುತ್ತಿದೆ, ಚೆನ್ನಾಗಿ production ಇದೆ. ಹೀಗಾಗಿ ನೀವು ಅದನ್ನು ನಿಮ್ಮ ಇದಕ್ಕೇ ತೆಗೆದುಕೊಂಡು, ನಿಮ್ಮ control ಗೆ ತೆಗೆದುಕೊಂಡುಬಿಟ್ಟರೆ ಅವರು ಕೆಲಸ ಮಾಡಲಿಕ್ಕೂ ತಯಾರಿದ್ದಾರೆ, ಇನ್ನೂ ಜಾಸ್ತಿಯೂ ಆಗುತ್ತದೆ. ನಿಮಗೆ benefit ಆಗುತ್ತದೆ. ಅದನ್ನೂ serious ಆಗಿ consider ಮಾಡಬಹುದು ನೀವು. NGEF, ಹುಬ್ಬಳ್ಳಿಯವರು ಬಂದು ನಿಮಗೆ ಈಗಾಗಲೇ ಮನವಿಯನ್ನೂ ಕೊಟ್ಟಿದ್ದಾರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಗ್ರಾಮೀಣ ಪ್ರದೇಶದಲ್ಲಿ 3 ದಿವಸಗಳಲ್ಲಿ ಮತ್ತು ನಗರ ಪ್ರದೇಶದಲ್ಲಿ 24 ಗಂಟೆಗಳಲ್ಲಿ TC ಗಳನ್ನೂ ಕೂಡಿಸುವುದಕ್ಕೆ ನಾನು ಸೂಚನೆ ಕೊಡುತ್ತೇನೆ ಎನ್ನತಕ್ಕಂಥದ್ದು. Already 10 ವರ್ಷಗಳಿಂದ ಸೂಚನೆ ಇದೆ. ಆದರೆ, ನಿಮ್ಮ ಕಾಲದಲ್ಲಿ exeute ಆಗಲಿ ಎಂದು ವಿನಂತಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಈ ಆದೇಶದ ಬಗ್ಗೆ ಎಲ್ಲ KEB ಮುಂದೆ ದೊಡ್ಡ ಬೋರ್ಡ್ ಹಾಕಿಸಿ. ಮುಂದೆ 3 ದಿವಸಗಳಲ್ಲಿ ಕೊಡದಿದ್ದರೆ ಅವರಮೇಲೆ punishment fix ಮಾಡುತ್ತೇವೆಂದು ಹಾಕಿಸಿ.

ಶ್ರೀ ಡಿ.ಕೆ. ಶಿವಕುಮಾರ್:– I fully agree ith you. ನಾನು ಈಗಾಗಲೇ ಒಂದು ಹೆಜ್ಜೆ ಮುಂದೆ ಹೋಗಿದ್ದೇನೆ. ಕುಮಾರಸ್ವಾಮಿಯವರು NGEF transformer ವಿಚಾರದಲ್ಲಿ ಹೇಳಿದರು. ಶೆಟ್ಟರ್‌ರವರು ವಿಚಾರ ಹೇಳಿದರು. I think, ನಿಮ್ಮ ಸಲಹೆ ಬಹಳ valid ಇದೆ. I will take it forward. ನಮ್ಮ ಇಲಾಖೆಗೆ ತೆಗೆದುಕೊಂಡು ಏನಾದರೂ ಮಾಡಿ, strengthen ಮಾಡಿ ಎಂದು ಹೇಳಿದ್ದಾರೆ. It is a very good suggestion. ಖಂಡಿತ, ಅವರ suggestion ಅನ್ನು valid ಆಗಿ ತೆಗೆದುಕೊಳ್ಳುತ್ತೇನೆ. Transform ವಿಚಾರದಲ್ಲಿ ಈಗಾಗಲೇ ನಾವು ಮಾಡಿದ್ದೇವೆ. 1912 ನಂಬರ್ ಕೊಟ್ಟು ಮಾಡಿದ್ದೇವೆ. Ombudsman

ಎಂದು ಇಡೀ ಜಿಲ್ಲೆಗೊಬ್ಬಬ್ಬರನ್ನು ನೇಮಕ ಮಾಡಿದ್ದೇವೆ. ಅವರು ಹೋಗಿ complaint file ಮಾಡಬೇಕು. Complaint file ಮಾಡಿದ ತಕ್ಷಣ 3 ದಿನಗಳಲ್ಲಿ transfer ಮಾಡಲಿಲ್ಲವೆಂದರೆ ಒಂದು complaint ಗೆ ಇಷ್ಟು fine ಕಟ್ಟಬೇಕೆಂದು ತೀರ್ಮಾನ ಮಾಡಿದ್ದೇವೆ. Yes, ಇಲಾಖೆಗೆ ಕೊಡಬೇಕು. ಒಂದೇ ದಿನದಲ್ಲಿ ನನ್ನ ಕೈಯಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಅವನಿಗೆ ಭಯ ಇಲ್ಲವೆಂದರೆ, responsibility ಇಲ್ಲವೆಂದರೆ ಇದನ್ನು ಏನಾದರೂ ಮಾಡಿ ಮಾಡಬೇಕು. ಪ್ರತಿ ತಾಲ್ಲೂಕಿನಲ್ಲೂ ನಾನು ಬಹಳ ಗಲಾಟೆ ಮಾಡಿ, ಅದೊಂದು ದೊಡ್ಡ ದಂಧೆ. Transformer repair ಇದೆಯಲ್ಲ, ಬೇರೆ ಯಾರಿಗೂ ಅವರು ಬಿಟ್ಟುಕೊಡುವುದಿಲ್ಲ. ಪ್ರತಿ ತಾಲ್ಲೂಕಿನಲ್ಲೂ repair centres ಮಾಡಿಸಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– Transformer ವಿಷಯದಲ್ಲಿ ನನಗೊಂದು ಮಾಹಿತಿ ಇದೆ. ಈಗಾಗಲೇ ನನಗಿರುವ ಮಾಹಿತಿಯ ಪ್ರಕಾರ ನಾಗಮಂಗಲ ತಾಲ್ಲೂಕಿನ ಶಿವಲಿಂಗೇಗೌಡ ಎನ್ನುವವರು ಬಹುಶಃ ಮಾನ್ಯ ಮುಖ್ಯಮಂತ್ರಿಯವರಿಗೊಂದು presentation ಕೊಟ್ಟಿದ್ದಾರೆ. ಅವರು, transformer ಅನ್ನು ಏನು ಕೆಟ್ಟಿದೆ ಅದಕ್ಕೆ ನನಗೊಂದು ಅವಕಾಶ ಕೊಡಿ. ಹೊಸ transformer ಏನು ಕೆಲಸ ಮಾಡುತ್ತದೆ, ಅಷ್ಟು performance ಅನ್ನು ನಾನು repair ಆಗತಕ್ಕಂಥ transformer ನಲ್ಲೂ ನಾನು ಕೊಡುತ್ತೇನೆಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಲ್ಲಿ demonstration ಮಾಡಿ ಈಗಾಗಲೇ 8, 9 ತಿಂಗಳೋ ಆಗಿದೆ. ಅದನ್ನು ಇವರು ನಂಬಿಕೊಳ್ಳುವುದಿಲ್ಲ. ಒಂದು chance ಕೊಟ್ಟು ನೋಡುವುದಿಲ್ಲ. ಇಂಥ ವಿಷಯಗಳನ್ನು ಹಗುರವಾಗಿ ತೆಗೆದುಕೊಳ್ಳಬೇಡಿ. ನನಗೆ ತಿಳಿದಿರತಕ್ಕಂಥ ಮಾಹಿತಿಯ ಪ್ರಕಾರ ಅದರ ಬಗ್ಗೆ ಅವರು ಅತ್ಯಂತ expert ಇದ್ದಾರೆ.

ಅಧ್ಯಕ್ಷರು:– O.K.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- Demonstration ಕೊಟ್ಟು ಈಗಾಗಲೇ 8 ತಿಂಗಳಾಯಿತು. ಅದರ ಬಗ್ಗೆ ಮತ್ತೆ progress ಇಲ್ಲ. ಆದ್ದರಿಂದ ನಾವು ಇದನ್ನು ಕೇವಲ ಬಾಯಿ ಮಾತಿನಲ್ಲಿ ಕಾಲ ಕಳೆಯುವುದು ಬೇಡ.

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:- ಹೀಗೆ ಮಾಡಿದರೆ late ಆಗುತ್ತದೆ.

ಶ್ರೀ ಬಿ.ಬಿ. ನಿಂಗಯ್ಯ:- ಒಂದೇ ನಿಮಿಷ. ಅದಕ್ಕೆ add ಮಾಡಿ ಹೇಳುತ್ತೇನೆ. TC ಕೇಂದ್ರಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿ repair centres ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಮಾಡಿದ ಮೇಲೆ ಬಹುಶಃ ನಿಮ್ಮ circular ಜಾರಿ ಕೊಟ್ಟರೆ ಒಳ್ಳೆಯದು. ಇಲ್ಲದೆ ಈಗ ನಾವು immediate ಆಗಿ 3 days ಒಳಗೆ ಮಾಡದೇ ಹೋದರೆ ಅವರಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ತಾವು ಉತ್ಸಾಹದಿಂದ ಹೇಳಿದ್ದೀರಿ. ಇರುವ ಪರಿಸ್ಥಿತಿಯಲ್ಲಿ ಅದು ಸಾಧ್ಯವೇ?

ಅಧ್ಯಕ್ಷರು:- ಆಯಿತು, ಹೇಳಿ.

ಶ್ರೀ ಅಶೋಕ ಖೇಣಿ:- ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:- ಹೀಗೆ interfere ಮಾಡಿದರೆ ಹೇಗೆ? Level of discussion ಅವರೇನು reply ಕೊಡುತ್ತಿದ್ದಾರೆ disrupt ಆಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:- ಆಮೇಲೆ ಹೇಳುತ್ತೇನೆ, I will be at your call.

ಶ್ರೀ ಅಶೋಕ ಖೇಣಿ:- ಏಕೆಂದರೆ, ಅವರು ನಮಗೆ 2 ತಿಂಗಳತನಕ transformer change ಮಾಡಿಲ್ಲ. 3 ದಿವಸ ಎಂದು ಹೇಳುತ್ತಿದ್ದಾರೆ. Out of 655 transformer 120 transformers are always fail. I get everyday report from my constituency.

ಅಧ್ಯಕ್ಷರು:- ಆಯಿತು ನಿಮಗೆ ಬರುತ್ತದೆ, ನಮಗೆ ಬರುವುದಿಲ್ಲ ತೆಗೆದುಕೊಳ್ಳಿ. Approach ಹೇಳುತ್ತಾರೆ, ತಿಳಿದುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್:- 65 ವರ್ಷಗಳಿಂದ ಇರುವುದನ್ನು we are trying to do it. ಒಟ್ಟು 138 ವಿಭಾಗ ಮಟ್ಟದಲ್ಲಿ ಈಗಾಗಲೇ 134 ಬ್ಯಾಂಕ್‌ಗಳನ್ನು ಸ್ಥಾಪನೆ ಮಾಡಿದ್ದೇವೆ. ಇನ್ನೂ ಮಾಡಬೇಕಾಗಿದೆ. ಉಳಿದ 138 ಮಾಡಬೇಕಾಗಿದೆ. ಏನಾದರೂ ಮಾಡಿ ಅದಕ್ಕೆ I have asked them, ಮೊನ್ನೆ ತಾನೆ 2 ತಿಂಗಳಲ್ಲಿ ನಾನು ಮೀಟಿಂಗ್ ಮಾಡಿ ಏನು transformers ಇವೆ, ಅದನ್ನು ನೀವು double ಮಾಡಬೇಕೆಂದು ಹೇಳಿದ್ದೇನೆ. Investment double ಮಾಡಬೇಕು ಎಂದು ಹೇಳಿದ್ದೇನೆ. ಜೊತೆಗೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಕೂಡ repair centres ಅನ್ನು ಮಾಡಬೇಕು. ಏಕೆಂದರೆ, transformers ಖರ್ಚೆಲ್ಲ ವಿಪರೀತವಾಗುತ್ತಿದೆ. ಈಗಾಗಲೇ ದುರಸ್ತಿ ಕೇಂದ್ರಗಳೂ ಕೂಡ 83 ಇವೆ. ಹೊಸದಾಗಿ 23 ಮಾಡುತ್ತಿದ್ದೇವೆ. ಇನ್ನು ಯಾರ್‍ಯಾರ ತಾಲ್ಲೂಕುಗಳಲ್ಲಿ, ಯಾರ್‍ಯಾರಾದರೂ ಮುಂದಕ್ಕೆ ಬರುತ್ತಾರೆಂದರೆ, we are ready to cooperate. ನಾನು ಯಾರಾದರೂ ಮಾಡುತ್ತೇನೆಂದರೆ ಎಲ್ಲರಿಗೂ ಕೂಡ ಹೇಳುತ್ತಿದ್ದೇನೆ. ಏಕೆಂದರೆ, ಕೆಲವರು ಲೇಟ್ ಆಗುತ್ತದೆ, ಸರಿ ಇಲ್ಲ ಎನ್ನುತ್ತಾರೆ. ನಾವು ಕೆಲವು conditions ಹಾಕಲೇಬೇಕಾಗುತ್ತದೆ. ಕುಮಾರಸ್ವಾಮಿಯವರು ಸಲಹೆ ಕೊಟ್ಟಿದ್ದಾರೆ. I think definitely ನಾನು ಅವರನ್ನು ಕರೆಸಿ ಅವರದೇನಿದೆ ಎಂದು ಕೇಳುತ್ತೇನೆ. Pilot ಆಗಿ ಕೊಡಬಹುದು. ತಪ್ಪೇನೂ ಇಲ್ಲ. As a pilot project ಎಂದು ಒಬ್ಬರಿಗೆ ಕೊಟ್ಟು ಪ್ರಯೋಗವನ್ನೂ ಕೂಡ ಮಾಡಬಹುದು. Pilot project ಎಂದು ಏನೇನೋ ಮಾಡುತ್ತೇವೆ, ಏಕೆ ಒಂದು ಅವಕಾಶ ಮಾಡಿಕೊಡಬಾರದು? ಬೇಕಾದಷ್ಟು ಅವರ ಅನುಭವಗಳನ್ನು ಖಂಡಿತ ಇದಕ್ಕೆ ಉಪಯೋಗಿಸಿಕೊಳ್ಳೋಣ. ಈ ಮಧ್ಯದಲ್ಲಿ Ombudsman ಎನ್ನುವವರನ್ನು, KREC ಯಿಂದ ಆಗಿದೆ. Consumers Grievances Redressal Forum ಎಂದು ಅಲ್ಲಿ Ombudsman ಆಗಿದೆ. ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬರು. Superintendent Engineer ಅಲ್ಲಿ Secretary ಇದ್ದು, ಒಬ್ಬೊಬ್ಬರನ್ನು ನೇಮಕ ಮಾಡಿದ್ದೇವೆ. ಅವರಿಗೊಂದು

parameter fix ಮಾಡಿದ್ದೇವೆ. ಖಂಡಿತ 24 ಗಂಟೆಗಳಲ್ಲಿ ಕುಡಿಯುವ ನೀರಿಗೆ town ನಲ್ಲಾಗಲಿ, ಎಲ್ಲೇ ಆಗಲಿ ಅವನು change ಮಾಡಬೇಕು. 72 ಗಂಟೆಯೊಳಗೆ ಉಳಿದದ್ದನ್ನು ಅವನು change ಮಾಡಬೇಕು. Line ಬಿದ್ದುಹೋದರೆ ಇಷ್ಟು ದಿನಗಳಲ್ಲಿ ಮಾಡಬೇಕು. Complaint ಏನಾದರೂ ಅವನು file ಮಾಡಿದರೆ ಅವನಿಗೆ ಅವನು ದುಡ್ಡು ಕಟ್ಟಿಕೊಡಲೇಬೇಕು. ಅದಕ್ಕೂ fix ಮಾಡಿದ್ದೇನೆ. ಅವನು expansion ಮಾಡುವುದಕ್ಕೆ ಇರಬಹುದು, ಹೊಸದಾಗಿ ಅರ್ಜಿ ಕೊಟ್ಟವನು ಇರಬಹುದು, ಎಷ್ಟು ದಿನಗಳಲ್ಲಿ connection ಕೊಡಬೇಕು, ಅವನು meter complaint ಮಾಡಿದರೆ, ಎಷ್ಟು ದಿನಗಳಲ್ಲಿ ಅವನು check ಮಾಡಬೇಕು, ಏನಾದರೂ expansion ಮಾಡಬೇಕಾದರೆ, 7 ದಿನಗಳಲ್ಲಿ ಮಾಡಬೇಕು. Upgradation ಮಾಡಬೇಕಾದರೆ 3 ತಿಂಗಳಲ್ಲಿ ಮಾಡಬೇಕು. Burnt meters ಅನ್ನು complaint ಕೊಟ್ಟರೆ 24 ಗಂಟೆಗಳಲ್ಲಿ ಮಾಡಬೇಕು. Replace ಮಾಡಲಿಕ್ಕೆ 7 ದಿನಗಳಲ್ಲಿ ಅವನಿಗೆ ಮಾಡಿಕೊಡಬೇಕು. ಇವೆಲ್ಲ ಮಾಡಲಿಲ್ಲವೆಂದರೆ, ಅವನು complaint file ಮಾಡಬಹುದು. ಆಮೇಲೆ, single phase ನಿಂದ 3 phase ಗೆ convert ಮಾಡಿಕೊಡಲಿಕ್ಕೆ ಅವನು 30 ದಿನಗಳಲ್ಲಿ ಅವನು payment ಮಾಡಿದತಕ್ಷಣ ಮಾಡಲೇಬೇಕು. ಏಕೆಂದರೆ, ತಿರುಗಿಸಿ ತಿರುಗಿಸಿ ನಾನೇ ಯಾವುದೋ ಸಂದರ್ಭದಲ್ಲಿ ಅನುಭವಿಸಿದ್ದೇನೆ. ಎರಡು ವರ್ಷಗಳಾದರೂ correct ಆಗಿದ್ದರೂ ನನಗೇ current ಕೊಡಲಿಲ್ಲ. ನನಗೇ experience ಆಗಿದೆ. ನಾವು ಅನೇಕ ವಿಚಾರಗಳನ್ನಿಟ್ಟು ನಮ್ಮ Regulatory Authority ಯವರು ಇದರ ಬಗ್ಗೆ separate ಮಾಡಿ, seminar ಮಾಡಿ ಪ್ರತಿ ಜಿಲ್ಲೆಗೂ ಅಲ್ಲಿ ಒಬ್ಬೊಬ್ಬರನ್ನು ombudsman ಎಂದು ಈಗಾಗಲೇ ನೇಮಕವಾಗಿದೆ. ಅವರೇ ಮಾಡಿದ್ದಾರೆ. ನಮ್ಮದೇನಿಲ್ಲ. ಅದಕ್ಕೆ ಕಮಿಟಿ ಕೂಡ ಇದೆ. ಎಲ್ಲರೂ ಕೂಡ ಸಂಬಂಧಪಟ್ಟ Executive Engineer, Superintendent Engineer ಅಲ್ಲಿ ಇರುತ್ತಾರೆ. ಒಬ್ಬೊಬ್ಬರನ್ನು ಅವರೇ Member ಎಂದು nominate ಮಾಡಿದ್ದಾರೆ. ಒಂದು forum, office ಅಲ್ಲಿಯೇ ಕೂಡ ನಡೆಯುತ್ತಿದೆ. ಎಲ್ಲಾ district ನಲ್ಲೂ ಕೂಡ ಇದಕ್ಕೆ ಇಟ್ಟಿದ್ದೇವೆ. ಇದರ ಬಗ್ಗೆ ಇನ್ನೂ ಹೆಚ್ಚಿಗೆ ಪ್ರಚಾರ ಮುಂದಿನ ದಿನಗಳಲ್ಲಿ

ಕೊಟ್ಟು ಮಾಡುತ್ತೇವೆ. Transformer ಬದಲಾವಣೆ ಮಾಡಬೇಕೆಂದು ಇದ್ದೇನೆ. ತಮಗೂ ಅಷ್ಟೇ, ಮುಂದಕ್ಕೆ ಎಲ್ಲಾ ಶಾಸಕರುಗಳಿಗೆ I am telling you, ನಮ್ಮ Officers ಗೆ ಹೇಳಿದ್ದೇನೆ, ಆ ತಾಲ್ಲೂಕಿನಲ್ಲಿ ಎಷ್ಟು transformer fail ಆಗಿದೆ, at least ವಾರಕ್ಕೊಂದು ಸಾರಿ telephone ನಲ್ಲಾದರೂ SMS ಮುಖಾಂತರ message ಹೋಗಬೇಕು. ಅವರಿಗೆ ಎಷ್ಟು ರಿಪೇರ್ ಆಗಿದೆ, ಎಷ್ಟು ದಿನ ಆಗಿದೆ ಎಂದು ಗೊತ್ತಾಗಬೇಕು.

ಶ್ರೀ ಅಶೋಕ್ ಖೇಣಿ:– ಮಾನ್ಯ ಅಧ್ಯಕ್ಷರೆ....

ಶ್ರೀ ಡಿ.ಕೆ. ಶಿವಕುಮಾರ್:– Please, I will yield you later. FPD ಬಗ್ಗೆ ಬರುತ್ತಿದೆಯಲ್ಲ, ಆ ರೀತಿ transformer ಬಗ್ಗೆ ಕೂಡ ನಿಮಗೆ ಎಲ್ಲಾ ಮಾಹಿತಿಗಳನ್ನೂ ತಲುಪಿಸಬೇಕೆನ್ನುವ ದೃಷ್ಟಿಯಿಂದ... ಏಕೆಂದರೆ, lower level ನಲ್ಲಿ ನಾವು ರೈತರಿಗೆ protect ಮಾಡಲಿಲ್ಲವೆಂದರೆ ಮೇಲುಗಡೆ ಬಹಳ ಕಷ್ಟ. ಅದಕ್ಕೆ lower level ನಲ್ಲಿ ಆದಷ್ಟು ಜಾಸ್ತಿ ಮಾಡುತ್ತೇನೆ. ಆಮೇಲೆ ತಾಲ್ಲೂಕು level ನಲ್ಲಿ review ಮಾಡುವುದಕ್ಕೊಂದು committee ಮಾಡಬೇಕೆಂದು ಶಿವಲಿಂಗೇಗೌಡರವರು ಹೇಳಿದರು. Serious ಆಗಿ ಅದನ್ನು consider ಮಾಡುತ್ತಿದ್ದೇನೆ. ಎಲ್ಲಾ MLAs ನೇತೃತ್ವದಲ್ಲಿ ಒಂದು ಕಮಿಟಿ ಮಾಡಿ ಅದಕ್ಕೇನೇನುಬೇಕು. ಆಮೇಲೆ Sub Divisional level ನಲ್ಲಿ ಅದು ಬೇರೆ ಆಗುತ್ತದೆ. Consumers ಜೊತೆ ಮಾಡಿಕೊಂಡು, ಖಂಡಿತ ಅದನ್ನು ಮಾಡುತ್ತಿದ್ದೇನೆ. Transformer ನದ್ದು major repair, transformer bank, capacity add ಮಾಡುವಂಥದ್ದು. ಈ major problems ಗೆ ನಾನು ಹೆಚ್ಚಿನ ಒತ್ತು ಕೊಡುತ್ತಿದ್ದೇನೆ. The first priority of my Office, ಈ ರೈತರನ್ನು transformer ವಿಚಾರದಲ್ಲಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಇದ್ದೇನೆ. ನಾನು ಇನ್ನೂ ಹೇಳುತ್ತಿದ್ದೇನೆ, we add more, ಅವರು ಹೇಳಿದಹಾಗೆ, transformer ಮಾಡಲಿಕ್ಕೆ ನಮ್ಮ ಕಂಪನಿಗಳಿಗೆ ಕವಿಕ, NGEF, ಇಂಥದ್ದನ್ನೆಲ್ಲ ಎಷ್ಟು maximum ಉಪಯೋಗಿಸುವುದಕ್ಕೆ, ಬಹಳ ಜನ ಮುಂದಕ್ಕೆ ಬರುತ್ತಿದ್ದಾರೆ, guarantee ಕೊಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ಏನೆಂದರೆ, double ಆಗುತ್ತಿದೆಯಲ್ಲ. ಈ ಮಧ್ಯೆ ಇನ್ನೊಂದು ಬೆಳವಣಿಗೆ

ಎಂದರೆ, ರೈತರು ಈ ನಡುವೆ ಸ್ವಲ್ಪ mind set change ಮಾಡಿಕೊಂಡಿದ್ದಾರೆ. This is the advertisement. ಆಗಲೇ release ಮಾಡಿದ್ದೇನೆ. ಏನೆಂದರೆ, ತಪ್ಪಿದ್ದಲ್ಲಿ ಪ್ರತಿ ದೂರಿಗೆ ಇಷ್ಟು. 24 ಗಂಟೆಗಳಲ್ಲಿ ನಗರ ಪ್ರದೇಶಗಳಲ್ಲಿ, 73 ಗಂಟೆಗಳಲ್ಲಿ ಇದರಲ್ಲಿ. ಇದಕ್ಕೆ advertisement ಕೂಡ ನಾನು ಈಗಾಗಲೇ release ಮಾಡಿಸಿದ್ದೇನೆ. ಒಂದು advertisement ಕೊಡಿ ಎಂದು ನೀವೇನು ಹೇಳುತ್ತಿದ್ದಿರಲ್ಲ.... 72 ಗಂಟೆಗಳಲ್ಲಿ 3 ದಿನಗಳಲ್ಲಿ transformer change ಮಾಡಬೇಕು. ಲೇಟ್ ಆಗಿ ಬಂದರೆ ಅವನು fine ಕಟ್ಟಬೇಕು. "1912" ಗೆ register ಮಾಡುವಂಥದ್ದು. ಇದೆಲ್ಲ advertisements ಕೊಡುತ್ತಿದ್ದೇನೆ. ವಿದ್ಯುತ್ transformer ದೂರುಗಳ ಪರಿಹಾರ. ಮಾಡಬೇಕೆಂದು ಇದೆ. ಸ್ವಲ್ಪ advertisements, ಎಲ್ಲಾ ಕಡೆ board ಇದೆಲ್ಲ ಪ್ರಾರಂಭವಾಗುತ್ತದೆ. ಇದರಲ್ಲಿ ಬೇಕಾದಷ್ಟು ತಪ್ಪಿಸಿಕೊಳ್ಳುವವರು, ಮಾಡುವವರು, ನಮಗೆ ಬರಲೇ ಇಲ್ಲವೆನ್ನುತ್ತಾರೆ. ಅದಕ್ಕೆ records system ಮಾಡುತ್ತಿದ್ದೇನೆ. ನಾಳೆ ನಾಡಿದ್ದು ಇಲ್ಲಿಯೇ ಇರುತ್ತೇವೆ, ಒಂದು experience ಗಾಗಿ ಏನಾದರೂ ದೂರು ಇದ್ದರೆ ತಾವು ಯಾರಾದರೂ 1912 ಸಂಖ್ಯೆಗೆ ಒಂದು ದೂರವಾಣಿ ಕರೆ ಮಾಡಿ, you please come back to me o this issue. ಅವರು ಸರಿಯಾಗಿ respond ಮಾಡಿಲ್ಲವೆಂದರೆ ಪ್ರತಿ ದೂರಿಗೆ 50 ರೂಪಾಯಿಯಂತೆ ದಂಡ ಕಟ್ಟಬೇಕಾಗುತ್ತದೆ ಎಂಬುದನ್ನು ಸೇರಿಸಿದ್ದೇವೆ. So, Transformer ವಿಚಾರದಲ್ಲಿ ಅದನ್ನು ಮಾಡುತ್ತೇವೆ. ರೈತನ ನೀರಾವರಿ pump-set ಬಗ್ಗೆ ಬಹಳ ಜನ ಮಾತನಾಡುತ್ತಿದ್ದರು. ಇವುಗಳ ಸಂಖ್ಯೆ ಏರುತ್ತಲೇ ಇವೆ, 15 ಸಾವಿರ ಪಂಪ್ ಸೆಟ್ಸ್. Connection ಜಾಸ್ತಿಯಾಗುತ್ತದೆ, power consumption ಜಾಸ್ತಿ. 6,200 ಕೋಟಿ ಎಂದು ಲೆಕ್ಕ ಹಾಕುತ್ತಿದ್ದೆವು, ಈಗ ಅದು 8 ಸಾವಿರ ಚಿಲ್ಲರೆ ಕೋಟಿಗೆ ಹೋಗುತ್ತಿದೆ. ಅವುಗಳನ್ನು disconnect ಮಾಡುವುದಕ್ಕಾಗುತ್ತಿಲ್ಲ. River Bed ನಲ್ಲಿ ನಾನು ಇವರ ಕಡೆ ಹೋಗಿ ನೋಡಿದ್ದೇನೆ. 10 HP ಎಂದಕೊಂಡರೂ 20 ಅಡಿಗೆ 150 HP ಇದೆ. 150 HP ಯಿಂದ 10 ಕಿ.ಮೀ.ರವರೆಗೆ ತೆಗೆದುಕೊಂಡು ಹೋಗುತ್ತಾರೆ. ನಾವು 10 HP ಎಂದು ಕೊಡುತ್ತೇವೆ. ನಮ್ಮ ಹತ್ತಿರ 34 ಮೋಟರ್‌ಗಳಿವೆ ಎಂದು ಮಾನ್ಯ ಉಮೇಶ್ ಕತ್ತಿಯವರು

ಹೇಳುತ್ತಿದ್ದರು. ನಾನು ಹೋಗಿ ನಮ್ಮ ಊರಿನಲ್ಲಿ ಚೆಕ್ ಮಾಡಿದೆ. ನನ್ನ ಮನೆಯ ಕಾಂಪೌಂಡ್‌ನಲ್ಲಿಯೇ 7 ಪಂಪ್‌ಸೆಟ್ಸ್ ಇಟ್ಟಿದ್ದೇನೆ. ಎಷ್ಟು ಓಡುತ್ತದೆ ಬಿಡುತ್ತದೆ that is different question. ನಾವು ಒಬ್ಬೊಬ್ಬರು ಆ ರೀತಿಯಾಗಿ ಉಪಯೋಗಿಸಿಕೊಳ್ಳುತ್ತಿದ್ದೇವೆ. Quality power ಬೇಕು ನೀವು ಎಷ್ಟು ದಿನವಾದರೂ ಕೊಡಿ, ನಮಗೆ ಹಗಲು ಹೊತ್ತಿನಲ್ಲಿ ಕೊಡಿ, ರಾತ್ರಿಯ ಹೊತ್ತು ಬೇಡ, ಅವರು ರಾತ್ರಿಯ ಹೊತ್ತಿನಲ್ಲಿ ಬೆಲೆ ಕಡಿಮೆ ಇರುತ್ತದೆ ಎಂದು ಹೇಳಿದರು. ನಿಜ I agree on that point. ಒಬ್ಬ management ಮಾಡುವವನು, ಬೆಳಿಗ್ಗೆ ಹೊತ್ತು demand ಬೇರೆ ಇರುತ್ತದೆ, peek hour time ನಲ್ಲಿ ಬೇರೆ demand ಇರುತ್ತದೆ. ಈ ಮಧ್ಯೆ now I have taken it in a very positive way. ನಿನ್ನೆ ಒಂದು ಕಡತಕ್ಕೆ ಸಹಿ ಮಾಡಿ ಒಂದು ಸರ್ಕಾರಿ ಆದೇಶವನ್ನು ತಂದು ನಾನು ಇಲ್ಲಿ ಪ್ರಕಟ ಮಾಡುತ್ತಿದ್ದೇನೆ. ಏನೆಂದರೆ; illegal pump-set, ಇವುಗಳ ಸಂಬಂಧ ಪ್ರತಿ ವರ್ಷ ಸರಾಸರಿ 50 ಸಾವಿರ ರೈತರು ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಹಾಕಿ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. Illegal ಮತ್ತೊಂದು ಎಂದು ಹೇಳಿ ಸಂಪರ್ಕ ತೆಗೆದುಕೊಳ್ಳುತ್ತಿದ್ದಾರೆ. ವ್ಯವಸಾಯ ಪ್ರಮುಖ ರೈತರು, ಕಸುಬುದಾರರು, ಇದು ನಡೆಯುತ್ತಿರುವಂಥದ್ದು, ನೀರಾವರಿ ಪಂಪ್‌ಸೆಟ್‌ಗಾಗಿ ವಿದ್ಯುತ್ ಸಂಪರ್ಕ ಒದಗಿಸಲು ಮುಂದಿನ ದಿನಗಳಲ್ಲಿ ಅಕ್ರಮ ಸಕ್ರಮ ಹಾಗೂ ಹೊಸದಾಗಿ ನೋಂದಾಯಿಸಲ್ಪಟ್ಟ ಪಂಪ್‌ಸೆಟ್ ಎನ್ನುವ ಬೇಧಭಾವ ಇಲ್ಲದೆ ಎಲ್ಲಾ ನೀರಾವರಿ ಪಂಪ್ ಸೆಟ್‌ಗಳ ಅರ್ಜಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಕೊಡಲು ಕೆಳಕಂಡ ಪರ್ಯಾಯ ಅನುಕೂಲ ಮಾರ್ಗಗಳನ್ನು ಅಳವಡಿಸಿಕೊಳ್ಳಲು ಸೂಚಿಸಲಾಗಿದೆ. ಮೂರ್‍ನಾಲ್ಕು options ಮಾಡಿದ್ದೇವೆ. ಏನೆಂದರೆ; ದಿನಾಂಕ: 31–07–2007 ರಲ್ಲಿ ಯಾರ್‍ಯಾರು register ಮಾಡಿಕೊಂಡಿಲ್ಲ ಅನಧಿಕೃತ ಪಂಪ್ ಸೆಟ್‌ಗಳ ಅರ್ಜಿದಾರರಿಗೆ 10 ಸಾವಿರ ರೂಪಾಯಿ ಸಕ್ರಮ ಶುಲ್ಕವೆಂದು, ಠೇವಣಿ ಹಣ ಪಾವತಿಸಿದಲ್ಲಿ ಅಂಥ ಅರ್ಜಿದಾರರಿಗೆ ನೋಟಿಸ್ ನೀಡಿ ಶುಲ್ಕವನ್ನು ಪಡೆದು ಜೇಷ್ಠತೆಯಾಧಾರದ ಮೇಲೆ ಹಂತಹಂತವಾಗಿ ಸಕ್ರಮಗೊಳಿಸುವುದಕ್ಕೆ ಕ್ರಮ ಕೈಗೊಳ್ಳಲಾಗುವುದು. It will be regularized. 31-07-2012ರ ನಂತರ ಅನಧಿಕೃತವಾಗಿ

ಸೇರ್ಪಡೆಗೊಂಡ ಹೊಸದಾಗಿ ನೊಂದಾಯಿಸಿಕೊಂಡ, ಇನ್ನು ಮುಂದಕ್ಕೆ ಅನಧಿಕೃತ ಎಂದು ಕರೆಯುವುದು ಬೇಡ. ಅವನು ಅರ್ಜಿ ಹಾಕಿ ಠೇವಣಿಯ ಮೊತ್ತ ಹತ್ತು ಸಾವಿರ ರೂಪಾಯಿಯನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಿದ ನಂತರ, ಜೇಷ್ಠತೆಯಾಧಾರದ ಮೇಲೆ first come first serve basis ಮೇಲೆ ಸೌಕರ್ಯಗಳನ್ನು ಒದಗಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿ ಮೂಲ ಸೌಕರ್ಯವಾದ service line ಮೂಲಕ ವಿದ್ಯುತ್ ಸಂಪರ್ಕವನ್ನು ಕೊಡಲಾಗುತ್ತದೆ. ಶೀಘ್ರ ಸಂಪರ್ಕ ಯೋಜನೆ, urgent ಬೇಕು ಎನ್ನುವವನಿಗೆ, ಹೊಸದಾಗಿ ಅರ್ಜಿ ನೊಂದಾಯಿಸಲ್ಪಟ್ಟ ರೈತರು ಹತ್ತು ಸಾವಿರ ರೂಪಾಯಿ ಮತ್ತು ಠೇವಣಿ ಹಣವನ್ನು ಪಾವತಿಸಲು ಇಚ್ಚಿಸಿದಲ್ಲಿ ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯ ಮೂಲಕ ಸೌಕರ್ಯವನ್ನು ಕಲ್ಪಿಸಿಕೊಡಲಾಗುವುದು. ಅವನಿಗೆ self execution ಮಾಡಿಕೊಳ್ಳುವುದಕ್ಕೆ ಅವಕಾಶ. ಪರಿವರ್ತಕಗಳು ಅಗತ್ಯವಿದ್ದಲ್ಲಿ ವಿದ್ಯುತ್ ಕಂಪನಿಗಳ ವತಿಯಿಂದ 25 KV ಪರಿವರ್ತಕಗಳನ್ನು ಒದಗಿಸುವುದು. ನಾವೇ ಅವರಿಗೆ ಅವನು self execution line ಮಾಡಿಕೊಟ್ಟರೆ 25KV ಯ transformer ಅನ್ನು ನಾವೇ ಕೊಟ್ಟು ಬಿಡುತ್ತೇವೆ. ಏಕೆಂದರೆ, ಅವನು ತಾನೇ ಲೈನ್ ಹಾಕಿಕೊಂಡಿದ್ದೇನೆಂದು ಅದನ್ನು ಕಾಪಾಡಿಕೊಳ್ಳುತ್ತಾನೆ. ಮೂಲ ಸೌಕರ್ಯ ರಚನೆಯ ಮಾರ್ಗ ವಿಸ್ತೃತ ಕಾಮಗಾರಿ, ನಿನ್ನೆ ತಾವೇನು 10% service charges ವಸೂಲಿ ಮಾಡುತ್ತಾರೆಂದು ಹೇಳುತ್ತಿದ್ದೀರಿ, ಅದನ್ನೆಲ್ಲಾ ಮನ್ನಾ ಮಾಡಲಾಗಿದೆ. ಇನ್ನೊಂದು Major HT ಮಾರ್ಗದಲ್ಲಿ ನನಗೆ 24 ಗಂಟೆ ಕರೆಂಟ್ ಬೇಕು ನಾನು ದೊಡ್ಡ ದುಡ್ಡು ಕಟ್ಟುತ್ತೇನೆಂದು ಹೇಳುತ್ತಾರೆ. HT ಮಾರ್ಗದಲ್ಲಿ ವಿದ್ಯುತ್ ಸಂಪರ್ಕ ಪಡೆಯಲು ಬಯಸುವ ರೈತರು ಬಳಕೆಯ ಪ್ರತಿ ಯೂನಿಟ್‌ಗೆ KERC ನಿಗದಿಪಡಿಸುವ ವಿದ್ಯುತ್ ದರವನ್ನು ಪಾವತಿಸಬೇಕಾಗುವುದು. ವಿದ್ಯುತ್ ಸಂಪರ್ಕಕ್ಕೆ ಬೇಕಾದ 11 KV ಪರಿವರ್ತಕ, HT ಮಾರ್ಗ ಹಾಗೂ ಇತರೆ ಉಪಕರಣಗಳನ್ನು ರೈತರೇ ಭರಿಸುವುದು. 11 KV HT ಮಾರ್ಗವನ್ನು ಉಪ ಕೇಂದ್ರದಿಂದ ನೇರವಾಗಿ ಪ್ರತ್ಯೇಕ ಫೀಡರ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ನೀರಾವರಿ ಪಂಪ್ ಸೆಟ್‌ಗಳ ಸ್ಥಾಪನೆಗೆ ಮಾಪಕ

ಅಳವಡಿಸುವುದು ಹಾಗೂ 24 ಗಂಟೆ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳುವುದು. ಇನ್ನೊಂದು option ಕೊಡಲಾಗಿದೆ, ಏನೆಂದರೆ; ಮಾಪಕ ಅಳವಡಿಸಿರುವ KERC ನಿಗದಿಪಡಿಸಿರುವ ದರದಲ್ಲಿ ವಿದ್ಯುತ್ ಶುಲ್ಕವನ್ನು ಪಾವತಿಸಿ ನೀರಾವರಿ ಪಂಪ್‌ಸೆಟ್‌ಗಳು. ನಿಮ್ಮ ಕಡೆ especially ನಿಮ್ಮ ಭಾಗದ ನೀರಾವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ವಿದ್ಯುತ್ ಶುಲ್ಕವನ್ನು ಪಾವತಿಸುವ ಪಂಪ್ ಸೆಟ್‌ಗಳ ರೈತರಿಗೆ HVDCವ್ಯವಸ್ಥೆಯಡಿಯಲ್ಲಿ ಉಪಕರಣಗಳನ್ನು ಪ್ರತ್ಯೇಕವಾದ 11KV ಲೈನ್ ಎಳೆದು ಅವರಿಗೆ Ariel bundled cable covered conductor ಹಾಕಿ, ಬೇರೆ ಯಾರಿಗೂ ಅದನ್ನು ತೆಗೆದುಕೊಳ್ಳದಿರುವ ಹಾಗೆ, ಏಕೆಂದರೆ, ಅವನು ದುಡ್ಡು ಕೊಡುತ್ತಾನೆ ಅಲ್ಲವೆ? ಈ ಫೀಡರ್ ರಚನೆಯ ಸಂಪೂರ್ಣವಾದ ವೆಚ್ಚವನ್ನು ವಿದ್ಯುತ್ ಕಂಪನಿಯೇ ಭರಿಸುತ್ತದೆ... No, ಇದರಲ್ಲಿ ಇದೆ. ಮಾಪಕ ಅಳವಡಿಸಿಕೊಂಡ KERC ರವರ ನಿಗದಿಪಡಿಸಿದ ಜಕಾತಿ ದರದಲ್ಲಿ ವಿದ್ಯುತ್ ಶುಲ್ಕವನ್ನು ಪಾವತಿಸುವ ನೀರಾವರಿ ಪಂಪ್‌ಸೆಟ್‌ಗಳಿಗೆ ರೈತರಿಗೆ HVDC ವ್ಯವಸ್ಥೆಯಲ್ಲಿ ಉಪ ಕೇಂದ್ರದಿಂದ ಅವರಿಗೆ ಪ್ರತ್ಯೇಕ 11 KVಯ ಲೈನ್ ಹಾಕಿ, Ariel bundled covered conductor ಹಾಕಿ ಗ್ರಾಹಕರನ್ನು ರಕ್ಷಿಸಲಾಗುವುದು. ಈ ಫೀಡರ್ ರಚನೆಯ ಸಂಪೂರ್ಣ ವೆಚ್ಚವನ್ನು ವಿದ್ಯುತ್ ಕಂಪನಿಗಳೇ ಭರಿಸುತ್ತವೆ. ಈ ವಿಧಾನದಲ್ಲಿ ವಿದ್ಯುತ್ ಸಂಪರ್ಕ ಪಡೆಯುವ ರೈತರ ಠೇವಣಿ ಶುಲ್ಕ ಹಾಗೂ ಪರಿವರ್ತಕಗಳ ವೆಚ್ಚವನ್ನು ಭರಿಸುವುದು. ನನಗೆ quality power ಬೇಕು ನಾನು ದುಡ್ಡು ಕೊಡುತ್ತೇನೆಂದು ಹೇಳಿದವರಿಗೆ encourage ಮಾಡಬೇಕಾಗುತ್ತದೆ. ಏಕೆಂದರೆ, ನೀವು ಎಲ್ಲಾ irrigation commercial crop, ಆದ್ದರಿಂದ ಅವರಿಗೊಂದು ಅವಕಾಶ ಕೊಡಬೇಕು. ಏಕೆಂದರೆ, ತಾವೆಲ್ಲಾ ರೈತರು ಬಂದಿದ್ದೀರಿ,

ಶ್ರೀ ಹಂಪನಗೌಡ ಬಾದರ್ಲಿ:- ಆ ಯೋಜನೆಯಲ್ಲಿ slab system introduce ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. Meter ಅಳವಡಿಸುವುದಕ್ಕಿಂತಲೂ slab system ಮಾಡಿ. ಇಲಾಖೆಗೂ burden ಕಡಿಮೆಯಾಗುತ್ತದೆ. ತಾವು ಈ ಬಗ್ಗೆ ವಿಚಾರ ಮಾಡಿ ರೈತರಿಗೆ

ಅನುಕೂಲವಾಗುತ್ತದೆ. ಹೀಗಾಗಿ ತಾವು ಅದರ ಬಗ್ಗೆ ಸ್ವಲ್ಪ ಒತ್ತು ಕೊಟ್ಟು ಹೇಳಿದರೆ ಚೆನ್ನಾಗಿರುತ್ತದೆ.

ಶ್ರೀ ಜಿ.ಟಿ. ದೇವೇಗೌಡ:- ತಾವು ಈಗ ಏನೇನು ಹೇಳಿದಿರಿ ಅದೆಲ್ಲಾ ಸರಿ ಮತ್ತು ಸೂಕ್ತವಾಗಿದೆ. ಆದರೆ, ಜೇಷ್ಠತೆ ಆಧಾರದ ಮೇಲೆ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುತ್ತೇವೆಂದು ಏನು ಹೇಳಿದಿರಿ, ಅದಕ್ಕೊಂದು time bond ನಿಗದಿ ಮಾಡಿ ಅಷ್ಟರೊಳಗೆ complete ಮಾಡುತ್ತೇವೆಂದು ಹೇಳಿದಿರಿ ನಮಗೆ ಸಮಾಧಾನ.

ಶ್ರೀ ಜೆ.ಟಿ. ಪಾಟೀಲ್:- Energy Auditing ಮಾಡಿದರೆ ರೈತರ ಹೆಸರ ಮೇಲೆ ಕಳುವು ನಡೆಯುತ್ತಿದೆ, ಅದಕ್ಕೊಂದು ಕಡಿವಾಣ ಹಾಕಿದ ಹಾಗೆ ಆಗುತ್ತದೆ. ಅದನ್ನು High Distribution System ಮೂಲಕ ಒಂದು ಕಡೆ implement ಮಾಡಿದ್ದಾರೆ. Line loss 19% ಇದ್ದದ್ದನ್ನು 5% reduce ಮಾಡಿದ್ದಾರೆ. ದಯಮಾಡಿ, ತಾವು ಅದನ್ನೊಂದು consider ಮಾಡಿ ಎನ್ನುವುದು ನನ್ನ ಮನವಿ. ಹೊಸದಾಗಿ HT ಮತ್ತು LT line ಹಾಕಿದರೆ, ಅದರಿಂದ ಸಹಿತ ಪ್ರಸ್ತುತ 19% ಇರುವ line loss ಅನ್ನು 10% – 11% ಗೆ ತರುವುದಕ್ಕೆ ಸಾಧ್ಯವಿದೆ, ಇದನ್ನು ಸ್ವಲ್ಪ ದಯವಿಟ್ಟು consider ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಇನ್ನೊಂದು High Voltage Double Circuit North to South ಗೆ ತರದೆ ಹೋದರೆ, corridor ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಅದು ಏನಾದರೂ ಯೋಚನೆ ಇದೆಯೆ? ಇಲ್ಲ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಟ್ಟಿಗೆ ಸೇರಿ..

ಶ್ರೀ ಡಿ.ಕೆ. ಶಿವಕುಮಾರ್:- ಏನು ಹೇಳಿದಿರಿ?

ಶ್ರೀ ಕೆ.ಎಂ. ಶಿವಲಿಂಗೇಗೌಡ:- High Voltage Double Circuit ಅದನ್ನು ಈಗ ಯಾವುದೇ ಕಾರಣದಿಂದ ತರದೆ ಹೋದರೆ ನೀವು ವಿದ್ಯುತ್ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು:- ರೈತರ ಪಂಪ್‌ಸೆಟ್‌ನ ವಿಚಾರ complete ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್:– Pump-set ವಿಚಾರ. ಆ ಪಂಪ್ ಸೆಟ್ ವಿಚಾರದಲ್ಲಿಯೇ HVDC ಮಾಡಿ ಎಂದು ಹೇಳುತ್ತಿದ್ದಾರೆ. ಈಗಾಗಲೇ ನಾವು ತುಮಕೂರು ರೂರಲ್ ತೆಗೆದುಕೊಂಡಿದ್ದೇವೆ. ಮತ್ತು ನಮ್ಮ ಬಜೆಟ್‌ನಲ್ಲೂ ಕೂಡ 3–4 pilot project ಮಾಡಬೇಕು. ಈಗ ಏನಾಗುತ್ತಿದೆ ಎಂದರೆ, 37 ಸಾವಿರ ಕೋಟಿ ರೂಪಾಯಿ ಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಹೌದು ಇದನ್ನು ನೀವು ಮಾಡದೆ ಹೋದರೆ, ನೀವು North to South ಗೆ ವಿದ್ಯುತ್ ತರುವುದಕ್ಕೆ ಸಾಧ್ಯವಿಲ್ಲ. ಸಮರ್ಪಕವಾದ ವಿದ್ಯುತ್ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– ಆ line ಆ grid ಅದು ಬೇರೆ ವಿಚಾರ. ಈಗ ತಾವು ಏನು HVDC ಮಾಡಬೇಕೆಂದು ಹೇಳುತ್ತಿರಿ ಅದು ಬೇಕು. ಅದಕ್ಕೆ stage by stage by ನಾವು plan ಹಾಕಲಾಗುತ್ತಿದೆ. ಸಧ್ಯಕ್ಕೆ financial constrain ಇದೆ, ಆದ್ದರಿಂದ pilot project ಮಾಡಿ ಇದನ್ನು try ಮಾಡುತ್ತಿದ್ದೇವೆ.

ಶ್ರೀ ಹಂಪನಗೌಡ ಬಾದರ್ಲಿ:– Slab system introduced ಮಾಡುವುದರ ಬಗ್ಗೆ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್:– ನಾನು ಮಾತನಾಡುತ್ತೇನೆ. I will come back to you. ಈ ಮಧ್ಯೆದಲ್ಲಿ ಗಂಗಾ ಕಲ್ಯಾಣ ವಿಚಾರ, ಕುಡಿಯುವ ನೀರಿನ ವಿಚಾರದ ಬಗ್ಗೆ ಕೆಲವು ಸ್ನೇಹಿತರೆಲ್ಲ ಮಾತನಾಡಿದರು.

ಅಧ್ಯಕ್ಷರು:– ಈಗಾಗಲೇ regularize ಮಾಡುವುದಕ್ಕೆ ದುಡ್ಡು 10 ಸಾವಿರ ರೂಪಾಯಿ ಕಟ್ಟಿಸಿಕೊಂಡಿದ್ದರಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– ಅದನ್ನು ಹೇಳಿದಿನೆಲ್ಲಾ that, we will have to start ಅದು ಏನಾಗುತ್ತಿದೆ, ಒಬ್ಬರಿಗೆ 1 ಲಕ್ಷದ 25 ಸಾವಿರ ರೂಪಾಯಿ ಬೇಕಾಗುತ್ತದೆ. ಒಬ್ಬನಿಗೆ regularize ಮಾಡಿ, ಏಕೆಂದರೆ, ಲೈನ್ ಎಳೆದು ಕೊಡಬೇಕು, transformer ಹಾಕಿ ಕೊಡಬೇಕು. ಅದನ್ನು divide ಮಾಡಿ urgency ಮೇಲೆ ತೀರ್ಮಾನ ಮಾಡುತ್ತಿದ್ದೇವೆ. ಈ ಮಧ್ಯೆ

ಮಾನ್ಯ ನರೇಂದ್ರಸ್ವಾಮಿ ಇತರ ಸ್ನೇಹಿತರು ಗಂಗಾ ಕಲ್ಯಾಣ ವಿಚಾರವಾಗಿ ಮಾತನಾಡುತ್ತಿದ್ದರು. ಒಂದು ವರ್ಷದಲ್ಲಿ ಒಟ್ಟು ಗಂಗಾ ಕಲ್ಯಾಣ ಯೋಜನೆಯಲ್ಲಿ 15 ಸಾವಿರ ಅರ್ಜಿಗಳು ಬರುತ್ತಿವೆ. 2013-14 ರಲ್ಲಿ 25 ಸಾವಿರ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕದ ಗುರಿ ಇತ್ತು. ಹತ್ತು ವರ್ಷದಲ್ಲಿ ಹೋಲಿಕೆ ಮಾಡಿದರೆ, ಹಿಂದೆ ಎಲ್ಲಾ 2004-05 ರಲ್ಲಿ 1,000, 2005 ರಲ್ಲಿ 2100, 2006 ರಲ್ಲಿ 3560, 2007 ರಲ್ಲಿ 4900 ಇತ್ತು. 2008ರಲ್ಲಿ 11,000 ಮತ್ತು 2011ರಲ್ಲಿ 12,000 ಇತ್ತು. ಈ ವರ್ಷ priorityಯಲ್ಲಿ ನಮ್ಮ Chief Ministerರವರು 5-6 ಬಾರಿ ಒತ್ತಿಒತ್ತಿ ಹೇಳಿ ಈ ಬಗ್ಗೆ ಮಿಟಿಂಗ್ ಮಾಡಿಸಿ ಇದನ್ನು ಮಾಡಿದರು. ಇದೇ ವರ್ಷ ನಾವು 20,191 energize ಮಾಡಿದ್ದೇವೆ. ಮಾರ್ಚ್ 2014ರ ಹೊತ್ತಿಗೆ ಯಾರ್ಯಾರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆಯೋ ಅವೆಲ್ಲವನ್ನು ಮುಂದಕ್ಕೆ we will complete it. On priority basis ಇದನ್ನು ಮಾಡಿದ್ದೇವೆ. ಅದು ಏನಾಗಿದೆ ಎಂದರೆ, Corporation ನಿಂದ 50,000 ರೂಪಾಯಿಗಳನ್ನು ಕೊಡುತ್ತಾರೆ. ಆದರೆ ಇದಕ್ಕಾಗಿ 1,25,000 ರೂಪಾಯಿಗಳು ಖರ್ಚಾಗುತ್ತಿದೆ. ಆದರೂ ಚಿಂತೆಯಿಲ್ಲವೆಂದು ಹೇಳಿ ಇದನ್ನು ಮಾಡಬೇಕಾಗಿದೆ. ಇಲ್ಲಿ ಏನಾಗಿದೆ ಎಂದರೆ, ಬಹಳ ದೂರ ದೂರದಿಂದ ಲೈನ್ ಹಾಕಿಕೊಂಡು ಬರಬೇಕಾಗಿರುವುದರಿಂದ Cost Price ಅವರ ಮೇಲೆ ಬೀಳುತ್ತದೆ. ನಾವು ಎಲ್ಲರಿಗೂ ನಮ್ಮ internal problems ಅನ್ನು ಹೇಳುವುದಕ್ಕಾಗುವುದಿಲ್ಲ. So, ಇರಲಿ It is a social sector ಇದಕ್ಕೆ priority ಕೊಡಬೇಕು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಈಗ ಅದನ್ನು ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 1,00,000 ರೂಪಾಯಿ ಮಾಡಿದ್ದಾರೆ. ನಿಮ್ಮ ಇಲಾಖೆಯಲ್ಲಿ SCP/TSP ಅನುದಾನ ಉಳಿದಿದೆ. ಅದನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:- ಅದನ್ನು priority ಮೇಲೆ ಕೊಡುತ್ತೇವೆ. ಕಳೆದ 8 ವರ್ಷಗಳಿಂದ ಕೊಟ್ಟಿಲ್ಲವೆಂದು ಅವರು ಹೇಳಿದ್ದಾರೆ. ಅದನ್ನು ಅವರ

some experience ಮೇಲೆ ಹೇಳಿದ್ದಾರೆ. ಸುಮ್ಮಸುಮ್ಮನೆ ನೀವು ಬಂದು ನನಗೆ ಹೇಳಿಲ್ಲ. ಏನೋ some technical problems ಇರುತ್ತದೆ.

ಶ್ರೀ ಡಿ.ಸಿ. ತಮ್ಮಣ್ಣ:– ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷಗಳಿಂದ ಗಂಗಾಕಲ್ಯಾಣ ಯೋಜನೆಗಳಿಗೆ ವಿದ್ಯುತ್ ಕೊಟ್ಟಿರುವುದಿಲ್ಲ. ಅಲ್ಲಿ ಈ ಯೋಜನೆಯಲ್ಲಿ ಬಾವಿಗಳನ್ನು ತೋಡಿದ್ದಾರೆ. ಈಗ ಪ್ರತಿವರ್ಷ ಅಂತರ್ಜಲವು ಕೆಳಗಡೆಗೆ ಹೋಗುತ್ತಿದೆ. ಬೋರ್‌ವೆಲ್ ಅನ್ನು 500 ರಿಂದ 600 ಅಡಿ ತೋಡುವುದಕ್ಕೆ ಸರ್ಕಾರ ಖರ್ಚು ಮಾಡುತ್ತದೆ. ಆದರೆ, ಆ ಬಾವಿಯಲ್ಲಿ ನೀರು ಇದೆಯೋ ಅಥವಾ ಇಲ್ಲವೋ ಎಂಬುದನ್ನು ಚೆಕ್ ಮಾಡಿ ಸರ್ಕಾರವು ಅದಕ್ಕೆ ಪವರ್ ಕೊಡಬೇಕಾಗುತ್ತದೆ. ಇಲ್ಲದೆ ಹೋದರೆ ಸರ್ಕಾರವು ಖರ್ಚು ಮಾಡಿರುವಂತಹ ಹಣ waste ಆಗುವಂತಹ ಸಂದರ್ಭ ಇದೆ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಮಂತ್ರಿಗಳೆ, ಧಾರವಾಡದಲ್ಲಿ review ಮಾಡುವಾಗ ನಮಗೆ ಎಸ್‌ಸಿ:ಎಸ್‌ಟಿ ಕಾರ್ಪೋರೇಷನ್‌ನಿಂದ SCP/TSPಯಲ್ಲಿ ಗಂಗಾಕಲ್ಯಾಣ ಯೋಜನೆಗೆ ಬೋರ್‌ವೆಲ್ ಕೊರೆದು ಅಲ್ಲಿ 8 ವರ್ಷಗಳಾದರೂ ಕೂಡ energization ಆಗಿರುವುದಿಲ್ಲವೆಂದು ಅಲ್ಲಿ ತಿಳಿದು ಬಂದ ವಿಚಾರ. ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ತಾವು ಮಂತ್ರಿಗಳಾಗಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದೀರಿ ಇದರಿಂದ ನಮಗೆ ಸಂತೋಷವಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್:– ನಿನ್ನೆಯ ದಿನ ಮಾನ್ಯ ರಮೇಶ್‌ಕುಮಾರ್ ಮಾತನಾಡುತ್ತಾ ಅಲ್ಲಿ ಬೋರ್‌ವೆಲ್ ತೋಡಿ ಮೂರೇ ದಿನಕ್ಕೆ ನೀರು ಹೋಗಿಬಿಟ್ಟಿತ್ತು ಎಂದು ಹೇಳಿದರು. ಅವನು ಹಾಕಬೇಕಾದರೆ 700 ಅಡಿ ಎಂದು ಹೇಳಿರುತ್ತಾನೆ. ಆದರೆ ಅವನು 400 ಅಡಿ ಮಾತ್ರ ತೋಡಿರುತ್ತಾನೆ. ಅಲ್ಲಿ ಪಾಪ ರೈತ ಹೋಗಿ ಹಾಕುವುದಿಲ್ಲ ಅಥವಾ ನೋಡುವುದಿಲ್ಲ. ಇಲ್ಲಿ power connection ಕೊಡುವುದು ಮಾತ್ರ ನನ್ನ ಡ್ಯೂಟಿ ಆಗಿದೆ. ಅವನು ಬಂದು ಅರ್ಜಿ ಕೊಟ್ಟ ತಕ್ಷಣ ನಾನು ಪವರ್ ಕೊಡಬೇಕು. ಅಲ್ಲಿ ನೀರು ಇದೆಯೋ ಇಲ್ಲವೋ ಅದನ್ನು ನಾನು ನೋಡುವುದಕ್ಕೆ ಆಗುವುದಿಲ್ಲ.

ಹೆಚ್ಚುಕಡಿಮೆ ಸುಮಾರು 30 ರಿಂದ 40 ಸಾವಿರ ಪಂಪ್‌ಸೆಟ್‌ಗೆ connection ತೆಗೆದುಕೊಂಡಿದ್ದಾರೆ. ಆದರೆ, ನೀರೇ ಬಂದಿರುವುದಿಲ್ಲ. They are suffering. We can understand. But, ಅದಕ್ಕೆ ಏನು ಮಾಡುತ್ತೀರಿ? Water level ಅಷ್ಟು ಕೆಳಕ್ಕೆ ಹೋಗಿಬಿಟ್ಟಿದೆ. ನಮ್ಮ ರಾಮನಗರ, ಚನ್ನಪಟ್ಟಣ ಈ ಕಡೆಯಲ್ಲಿ ಹೊಳೆಗಳು ಹರಿದು ಹೋಗುತ್ತಿತ್ತು, ಇವತ್ತಿನದಿವಸ ಕಾವೇರಿ ಬೆಲ್ಟ್‌ಲ್ಲಿಯ ದೊಡ್ಡ ಸಮಸ್ಯೆ ಇದೆ. ಕೋಲಾರ ಜಿಲ್ಲೆ ಹಾಗೂ ಬೇರೆ ಬೇರೆ ಭಾಗಗಳಲ್ಲಿ ದೇವರೆ ಕಾಪಾಡಬೇಕಾಗಿದೆ.

ಶ್ರೀ ಜಿ.ಟಿ. ದೇವೇಗೌಡ:- ನೀರಾವರಿ ಪ್ರದೇಶಗಳ ಪಂಪುಸೆಟ್ಟುಗಳಿಗೆ ಬೇರೆ guidelines ಮತ್ತು ಖುಷ್ಕಿ ಪ್ರದೇಶಗಳ ಪಂಪುಸೆಟ್ಟುಗಳಿಗೆ ಬೇರೆ guidelines ಅನ್ನು ನೀವು ಮಾಡಬೇಕು. ಇಲ್ಲದೆ ಹೋದರೆ ಭಾರಿ ಕಷ್ಟವಾಗುತ್ತದೆ, ನಿಮ್ಮ ಅಧಿಕಾರಿಗಳು ರಾಜ್ಯಕ್ಕೆಲ್ಲಾ ಒಂದೇ ರೀತಿ ಮಾಡುತ್ತಾರೆ. ಆ ರೀತಿಯಾಗಿ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಡಿ.ಕೆ. ಶಿವಕುಮಾರ್:- ಇದಕ್ಕಾಗಿ ನಾವು separate ಆಗಿ ನಾಲ್ಕು optionsಗಳನ್ನು ತಂದಿದ್ದೇವೆ. ಈ coal ವಿಚಾರ ಪ್ರಸ್ತಾಪಕ್ಕೆ ಬಂತು ನಿಮ್ಮ PLF, ನಿಮ್ಮ machinery ಎಲ್ಲವೂ old ಆಗಿದೆ. ಇದನ್ನು Privateನವರು ಜಾಸ್ತಿ ಮಾಡುತ್ತಿದ್ದಾರೆ. ನೀವು ಏತಕ್ಕಾಗಿ ಕಡಿಮೆ ಮಾಡುತ್ತಿದ್ದೀರಿ ಎಂದು ಹೇಳಿದರು. I fully agree with that. ಮೊದಲು 80ರಿಂದ 89% Generation ಆಗುತ್ತಿತ್ತು. ಈ ಮಧ್ಯೆ ಬಹಳ ಕಡಿಮೆಯಾಯಿತು. 2007ರಲ್ಲಿ 71% ಇತ್ತು, 2008ರಲ್ಲಿ 89% ಇತ್ತು ಈಗ ಇದ್ದಕಿದ್ದಹಾಗೆ 67 ರಿಂದ 75% ಏರಿಕೆಯಾಗಿದೆ. ಮೊನ್ನೆ last year 67%, 62% ಬಂದಿದೆ. ಹಿಂದೆ ಅಂದರೆ, 2008ರಲ್ಲಿ Rock coal ಅನ್ನು wash ಮಾಡುತ್ತಿದ್ದರು. ಅದನ್ನು economics change ಮಾಡುವುದಕ್ಕೋಸ್ಕರ wash coal ನಿಲ್ಲಿಸಿ ಸ್ವಲ್ಪ ಮಾಡಿದರು. ಇದರಿಂದ boilers and tubeಗಳಿಗೆ ಹೆಚ್ಚುಕಡಿಮೆ ಆಗಿ ಸಮಸ್ಯೆ ಸ್ವಲ್ಪ ಜಾಸ್ತಿಯಾಯಿತು. ಇದರಿಂದ expenditure ಕೂಡ ಜಾಸ್ತಿಯಾಯಿತು. ಇದಕ್ಕೋಸ್ಕರ ಏನಾದರೂ ಮಾಡಿ ಇದನ್ನು ಬದಲಾವಣೆ ಮಾಡಬೇಕೆನ್ನುವಂತಹ ದೃಷ್ಟಿಯಿಂದ ಸುಮಾರು 13 ರಿಂದ 14% generation ನಮಗೆ drip ಆಯಿತು. Central Government

ಕೂಡ ಇದೆಲ್ಲವನ್ನು ಗಮನಿಸಿ ನೀವು ಮಾಡುತ್ತಿರುವುದು ಸರಿಯಿಲ್ಲವೆಂದು ಈ ಬಗ್ಗೆ strict ಆಗಿ ಹೇಳಿ, ನೀವು compulsory ಆಗಿ wash coal ಮಾಡಬೇಕೆಂದು ಆದೇಶವನ್ನು ಕೊಟ್ಟರು. ಪುನಃ ನಾವು ವಾಪಸ್ಸು ಇದನ್ನು change ಮಾಡಿದ್ದೇವೆ. ಬೇರೆಯವರು ಇದನ್ನು wash coal ಮಾಡಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ Central Governmentನಿಂದ directions ಕೂಡ ಇದೆ. ಇದರ ಬಗ್ಗೆ ನಾವು ಮುಂದಕ್ಕೆ ಹೋಗಿ ನಮ್ಮ PLF capacityಯನ್ನು ಏನಾದರೂ ಮಾಡಿ 80 ರಿಂದ 85% ಮತ್ತು 90% ತರಬೇಕೆಂದು ಮಾಡುತ್ತಿದ್ದೇವೆ. ಇದರಿಂದ ಹಾಗೂ ಹೊಸ ಯೋಜನೆಗಳಿಂದ ಹೆಚ್ಚುಕಡಿಮೆ 800 ರಿಂದ 1000 ಮೆಗಾವ್ಯಾಟ್ ಹೆಚ್ಚಿಗೆ ಸಾಮರ್ಥ್ಯ ಕೂಡ ಬರಬಹುದೆಂದು ನಾವು ಈಗಾಗಲೇ ಎಲ್ಲಾ ರೀತಿಯಲ್ಲಿ ಪ್ರಾರಂಭ ಮಾಡಿಕೊಂಡಿದ್ದೇವೆ. ಒಟ್ಟಿನಲ್ಲಿ ಏನಾದರೂ ಮಾಡಿ ಅಲ್ಲಿ generation ಅನ್ನು ಏರಿಸಬೇಕೆಂದು ನಾವು ಪ್ರಯತ್ನ ಮಾಡಿದ್ದೇವೆ. ನೀವು ಇದನ್ನು ಮಾಡಲೇ ಬೇಕೆಂದು Central Government ಕೂಡ ನಮಗೆ ಒಂದು strict ಆಗಿ order ಅನ್ನು ಕಳುಹಿಸಿಬಿಟ್ಟಿದ್ದಾರೆ. ಈ ಹಿಂದೆ ಜಾಮದಾರ್ ಎಂಬ ಒಬ್ಬ ಆಫೀಸರ್ ಇದ್ದರು. ಅವರೊಬ್ಬರೆ ತೀರ್ಮಾನ ಮಾಡಿದರು ಎಂದು ನಾನು ಹೇಳುವುದಿಲ್ಲ. Ultimately, Regulatory Authority ಅವರು ಕೂಡ ಅದನ್ನೇ ಮಾಡಬೇಕೆಂದು ಹೇಳಿದರು. ಪುನಃ Regulatory Authorityಯವರು ಇದು ಸರಿಯಿಲ್ಲ. ಆದ್ದರಿಂದ, ಇದನ್ನು ನೀವು change ಮಾಡಿ ಎಂದು ಅವರು ಕೂಡ ಹೇಳಿದ್ದಾರೆ. Central Governmentನವರು ಕೂಡ ನೀವು coal ಅನ್ನು wash ಮಾಡಿಯೇ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೆ ನಾವು ಸ್ವಲ್ಪ ಮುಂದಕ್ಕೆ ಹೋಗುತ್ತಿದ್ದೇವೆ. Power purchase ವಿಚಾರದಲ್ಲಿ Government of Indiaದಲ್ಲಿ ಕೆಲವು issues ಇವೆ. ಈ ನಮ್ಮ coal linkage ಕೊಡುವ ವಿಚಾರ, ಬೇರೆ ಬೇರೆ ವಿಚಾರಗಳು ಇವೆ. ಅಂದರೆ, ಗುಲ್ಬರ್ಗಾ ಹಾಗೂ ಇತರೆ ಕಡೆ environmental clearance ಕೊಡತಕ್ಕಂಥವು ಇವೆ. ಹಾಗೆಯೇ kaiga Power Plantಗೆ ಸಂಬಂಧಪಟ್ಟ ಕೆಲವು issues ಅಲ್ಲಿವೆ. ಅದಕ್ಕೆ ನಾವೆಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡಬೇಕಾಗುತ್ತದೆ. ಈಗ ಇರುವಂತಹ Power Minister

ಕೂಡ ಬಹಳ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಹಿಂದೆ ಶ್ರೀ ಸುಶೀಲ್ ಕುಮಾರ್ ಶಿಂಧೆಯವರು ಇದ್ದಾಗ ಮತ್ತು ಹಿಂದೆ ನಮ್ಮ ಮಧ್ಯಪ್ರದೇಶದ Power Minister ಆಗಿದ್ದಂಥರು ಕೂಡ ನಮಗೆ ಕೆಲವು issuesಗಳಿಗೆ ಸಂಬಂಧಪಟ್ಟಂತೆ clearance ಅನ್ನು ಕೊಟ್ಟಿದ್ದರು. ತಕ್ಷಣ ಅದು cabinet ಮುಂದೆ ಬಂದಿತ್ತು. ಆದರೆ, ಅದು last cabinet ಆಗಿಹೋಯಿತು. ಇಲ್ಲದೆ ಹೋದರೆ ನಮಗೆ coal linkage ಸಿಗುತ್ತಿತ್ತು. ಈ ಮಧ್ಯದಲ್ಲಿ ನಮಗೆ ಸಣ್ಣ ಸಮಸ್ಯೆಗಳು ಬಂದವು. Major ಆಗಿ ನಮಗೆ Coal black ಇದ್ದಿದ್ದರೆ ನಮ್ಮ ಅನೇಕ ಸಮಸ್ಯೆಗಳು ಬಗೆಹರಿಯುತ್ತದೆ. ದೇವಚಪ ಚಾಮಿ ಎಂಬ West Bengalನವರಿಗೆ ಕೊಟ್ಟುಬಿಟ್ಟಿದ್ದಾರೆ. 5 ರಾಜ್ಯವನ್ನು ಸೇರಿಸಿ ನಾವು ಒಂದು ಕಂಪನಿಯನ್ನು ಮಾಡಬೇಕೆಂದು ಹೇಳಿದ್ದರು. ಅಲ್ಲಿ 150 ಅಡಿ ಕೆಳಗೆ ಕಲ್ಲನ್ನು ತೆಗೆದು ಹೋಗಬೇಕಾದಂತಹ ಪರಿಸ್ಥಿತಿ ಇದೆ. ನಾವು ಆ ಬಗ್ಗೆ report ತರಿಸಿಕೊಂಡು ನಮಗೆ ಅದು ಬೇಡ, ಈಗಾಗಲೇ ಕೆಲವೆಲ್ಲವನ್ನು ವಜಾ ಮಾಡಿದ್ದೀರಿ. ಆದ್ದರಿಂದ, ನಮಗೂ ಸಹ ಬೇರೆ ಕೊಡಿ ಎಂದು ನಾವು ಕೇಳಿದ್ದೇವೆ. ನಮ್ಮ projects ಈಗಾಗಲೇ ಬಂದುಬಿಟ್ಟಿದೆ. ಈಗಾಗಲೇ ಮುಂದಿನ ಮೇ 15ಕ್ಕೆ ಕೆಲವು projectsಗಳು ಬಂದಿದೆ. ಅದರ ಬಗ್ಗೆ ಅವರು positive ಆಗಿದ್ದಾರೆ. So, I think ನನ್ನ next issues ನಮ್ಮ MPS ಹಾಗೂ ನಮ್ಮ ಎಲ್ಲಾ ಪಕ್ಷದ ಕೆಲವು important leaders ಎಲ್ಲರೂ ಹೋಗಿ ಅವರನ್ನು ಭೇಟಿ ಮಾಡುವವರಿದ್ದೇವೆ. I think ಅದರ ಬಗ್ಗೆ ಕೂಡ ನನಗೊಂದು ಭರವಸೆ ಇದೆ. ಏಕೆಂದರೆ, ಅವರು ನಮ್ಮ Officerಗಳನ್ನು ಕರೆದು ನೀವು ಸಮುದ್ರದ ಪಕ್ಕ ಅಥವಾ ಬೇರೆ ಕಡೆಯಲ್ಲಿ ನೀವು ಮಾಡಿ case bidding ಬನ್ನಿ ಎಂದು ಅವರು ಹೇಳುತ್ತಿದ್ದಾರೆ. ಅವರಿಗೆ ನಮ್ಮ state ಬಗ್ಗೆ ದೊಡ್ಡ ಆತಂಕ ಏನು ಇಲ್ಲ. ಅವರು ನಮಗೆ encourage ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ನಾವು ಆ ವಿಚಾರಕ್ಕೆ ಹೋಗುತ್ತಿದ್ದೇವೆ. Power Purchaseನ Price ಮತ್ತು ಇತರೇ ವಿಚಾರಗಳ ಬಗ್ಗೆ ಇಲ್ಲಿ ಬಹಳ ದೊಡ್ಡ ಚರ್ಚೆ ಆಯಿತು. I don't want, ನಾನು ಯಾರ ಮೇಲೂ complaint ಮಾಡುವುದಕ್ಕೆ ಯಾರು ಸರಿ, ಯಾರು ಸರಿಯಲ್ಲ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಇಲ್ಲಿ

ಏನು ಮಾಡಿದರೂ ತಪ್ಪು ಎಂದು ಹೇಳಿದ್ದೇನೆ. Ultimately ಇವತ್ತು ಏನು purchase ಮಾಡುವುದಕ್ಕೂ ಯಾವ ಮಂತ್ರಿಗಾಗಲಿ ಅಥವಾ ಇತರೇ ಯಾರಿಗೂ ಸಹ power ಇಲ್ಲ. Ultimately power ಅನ್ನು ಏನೇ rateನಲ್ಲಿ purchase ಮಾಡಬೇಕಾದರೂ ಕೂಡ ultimately ಅವರು KERCಗೆ ಹೋಗಬೇಕಾಗುತ್ತದೆ. KERCಯವರು ಎಲ್ಲವನ್ನು ನೋಡುತ್ತಾರೆ. All power purchase is with the prior approval of the KERC. ಏನೇ ಪವರ್ ಅನ್ನು purchase ಮಾಡಬೇಕಾದರೂ tender ಮೂಲಕವೇ ಮಾಡಬೇಕು. 4.50ಪೈಸೆಗಿಂಥ ಕಡಿಮೆ ಇದ್ದರೆ ಮಾತ್ರ ಹಾಗೂ ನಮಗೆ ಎಷ್ಟು ಡಿಮ್ಯಾಂಡ್ ಇದೆ ಎಂದು ಅವರಿಗೆ ಹೇಳಿ, ನಾವು ಈ ರೀತಿಯಾಗಿ ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳಬೇಕು. ಆನಂತರ consumerಗೆ ಎಷ್ಟು ಪವರ್ ಬೇಕಾಗುತ್ತದೆ ಎಂದು ನೋಡುತ್ತಾರೆ. ನಾವು ಸುಮ್ಮನೆ ನನಗೆ ಬೇಕೆಂದು purchase ಮಾಡುವುದಕ್ಕೆ ಸಾಧ್ಯವಿಲ್ಲ. We don't have powers. ಯಾರಿಗೂ ಕೂಡ ಪವರ್ಸ್ ಇಲ್ಲ. ಅವರಿಗೂ ಸಹ ಬಿಡುವುದಿಲ್ಲ. Ultimately ಇದರ ಬಗ್ಗೆ ಅವರೇ decide ಮಾಡುತ್ತಾರೆ. ಲಿಂಗನಮಕಿ, ಸೂಪ, ಮಣಿ ಡ್ಯಾಂನಲ್ಲಿ 2006ರಲ್ಲಿ 100% ಇತ್ತು. 2007ರಲ್ಲೂ 100% ನೀರು ಈ ಡ್ಯಾಂಗಳಲ್ಲಿ ತುಂಬಿಹೋಗಿತ್ತು. ಇದು ಆದಮೇಲೆ ಸ್ವಲ್ಪ ಕಡಿಮೆ ಆಯಿತು. ಇದು ಕಡಿಮೆ ಆದಾಗ ವಿಧಿ ಇಲ್ಲ. ಅವರು purchase ಮಾಡಲೇಬೇಕಾದ ಒಂದು ಪರಿಸ್ಥಿತಿ ಬಂತು. So, ಅದಕೋಸ್ಕರ ಮಾಡಿದ್ದಾರೆ. So, financial year ಆಗ 2008ರಲ್ಲಿ average coast 7 ರೂಪಾಯಿ 04 ಪೈಸೆಯವರೆಗೂ ಹೋಗಿದೆ. 2009 ರಲ್ಲಿ 6 ರೂಪಾಯಿ 76 ಪೈಸೆ ಆಗಿದೆ. 2010 ರಲ್ಲಿ 6 ರೂಪಾಯಿ 42 ಪೈಸೆ ಹೋಗಿದೆ. 2011 ಕ್ಕೆ 5.00 ರೂ.ಗಳು. 2012 ಕ್ಕೆ 4 ರೂಪಾಯಿ 80 ಪೈಸೆ ಹೋಗಿದೆ. ಈಗ average cost 4 ರೂಪಾಯಿ 38 ಪೈಸೆಗಳಿಗೆ ಬಂದು ನಿಂತಿದೆ. ಮೊನ್ನೆ ನಾವು election timeನಲ್ಲಿ ಅವರು ಹೇಳಿದ ಹಾಗೆ coal generation ರವರಿಗೆ section 11 impose ಮಾಡಿದೆವು. ಬಹಳ ಸಮಸ್ಯೆ ಇತ್ತು ಎಂದು ಹೇಳಿ. ಅವರಿಗೆ Karnataka Electricity Regulatory Commission (KERC) ಅವರು 5 ರೂಪಾಯಿ 50 ಪೈಸೆಗಳು ಎಂದು ಫಿಕ್ಸ್ ಮಾಡಿದರು.

ಈಗ 4 ರೂಪಾಯಿ 96 ಪೈಸೆಗಳು ಇದೆ. ಇದೆಲ್ಲ ಕೂಡ ultimately short term, long term ಕೂಡ ಇವತ್ತು ಇದೆ. ಈ supply ಮಾಡಬೇಕಾದರೆ average cost ಏನಾಗುತ್ತದೆಂದರೆ, 5 ರೂಪಾಯಿ 56 ಪೈಸೆಗಳು ಬೀಳುತ್ತದೆ. Supply cost, expenditure ಮತ್ತೊಂದೆಲ್ಲಾ ಸೇರಿ ಬೀಳುತ್ತದೆ. ಮೊನ್ನೆ ಅವರು tariff ಕೂಡ ಸ್ವಲ್ಪ ಬದಲಾವಣೆ ಮಾಡಿದ್ದಾರೆ. ನಮಗೆ ಇಲ್ಲಿ option ನಲ್ಲಿ for any Government, it s very less. Purchase ಮಾಡಿದವನು ಇಷ್ಟು ಬೆಲೆ ಎಂದು ಹೇಳಿದರು ಅವರು ಕೇಳುವ ಮಟ್ಟದಲ್ಲಿ ಇಲ್ಲ. ಅದಕ್ಕೆ ಬೇಕಾದಷ್ಟು Appellate Authority ಇದೆ. ಈಗ ಅವನು hydel power ಬರುತ್ತದೆಂದರೆ, ನಮಗೆ 2.00 ರೂಪಾಯಿ ಚಿಲ್ಲರೆಗೆ hydel power ಸಿಗುತ್ತದೆ. ಅದರ ಮೇಲೆ ಅವನು ಕೊಡುವುದಕ್ಕೆ ಸಾಧ್ಯವಿಲ್ಲ. ನಾವು ನಮಗೆ ಸ್ವಂತಕ್ಕೆ produce ಮಾಡಬೇಕಾದರೆ 54 ಪೈಸೆಗೆ produce ಮಾಡುತ್ತೇವೆ, ಅಂಥದ್ದು ಇದೆ. ನಮ್ಮ thermal cost ಇದೆಯಲ್ಲಾ ಆ cost ಹೊರಗಡೆ purchase ಮಾಡುವುದಕ್ಕಿಂತ ನಾವು produce ಮಾಡಿರುವ ಜಾಸ್ತಿ ಆಗುತ್ತದೆ. ನಮ್ಮದೆ ಆದಂಥ own unit ನಲ್ಲಿ ನಾವು public ನಲ್ಲಿ purchase ಮಾಡುವುದಕ್ಕೆ 50-60 ಪೈಸೆ difference ಕಾಣುತ್ತದೆ. ಏಕೆಂದರೆ, there are various reasons. ಅವೆಲ್ಲಾ ಹೊಸ ಹೊಸ ಕಂಪನಿಗಳು. ಅವರಿಗೆ ಕಡಿಮೆ ಬೀಳುತ್ತದೆ. ಅದಕ್ಕೆ ಬೆಲೆ ಎಲ್ಲಾ complete ಆಗಿ KERC ಯವರೇ ಮಾಡುತ್ತಾರೆ. ಅವರು ಬೇಕಾದಷ್ಟು ಕೆಲವು suggestions ನಮಗೆ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಈಗ average ಕೊನೆಗೆ ನೀವು purchase ಮಾಡಿರುವ cost ಹೇಳಿದಿರಿ. ಆದರೆ ಕೆಲವು ಕಂಪನಿಗಳಿಗೆ power purchase ಮಾಡುವುದಕ್ಕೆ 18-20 ರೂ.ಗಳನ್ನು ಕೊಟ್ಟಿರತಕ್ಕಂಥದ್ದು ಮಾಹಿತಿ ಇದೆ. KERC ಅವರು ಏನು ಬೃಹಸ್ಪತಿಗಳಾ? KERC ನಲ್ಲಿರತಕ್ಕಂಥವರು ಯಾರು? ನೀವು ಇಲ್ಲಿ retire ಆದವರನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೂರಿಸುತ್ತೀರಿ. Ultimately, ಅವರು ಸರ್ಕಾರದವರು ಹೇಳಿದಂತೆಯೇ ಮಾಡುತ್ತಾರೆ. ನಮಗೂ ಗೊತ್ತಿದೆ. Power Purchase ನಲ್ಲಿ 20 ರೂ.

ಗಳವರೆಗೆ ಕೊಟ್ಟಿರುವಂಥ ನಿದರ್ಶನ ಇದೆ. ಆದರೆ ಇಲ್ಲಿ ನಾವು ಆವರೇಜ್ ಲೆಕ್ಕ ಇಡುತ್ತೇವೆ. ಇಲ್ಲಿ ಇವತ್ತು ಹಲವಾರು ಪ್ರಕರಣಗಳನ್ನು ಇಡಬಹುದು.

ಅಧ್ಯಕ್ಷರು:– ಅದಕ್ಕೆ ನಿಮ್ಮ solution ಏನಾದರೂ ಇದ್ದರೆ suggest ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಾವು ನಿನ್ನೆ ಸುದೀರ್ಘವಾಗಿ ಹೇಳಿದ್ದೇವೆ. ಅಂತಿಮವಾಗಿ ಸರ್ಕಾರ ಏನು solution ಕೊಡುತ್ತಾರೆ ಹೇಳಲಿ. ಆಮೇಲೆ ನಾವು ಚರ್ಚೆ ಮಾಡುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಕುಮಾರಸ್ವಾಮಿಗಳು ಮಾತನಾಡುವಾಗ ಒಂದು ಗಂಭೀರವಾದಂಥ ಮಾತನ್ನು ಹೇಳಿದ್ದಾರೆ. 28 ಕೋಟಿ ರೂ.ಗಳಿಗೆ ತೆಗೆದುಕೊಳ್ಳುತ್ತಿದ್ದು ಒಂದೇ ಸಲಕ್ಕೆ 1000 ಕೋಟಿ ರೂ.ಗಳಿಗೆ ಏರುತ್ತದೆ. ಅದಕ್ಕೆ ತಾವು ಏನೇನು ನಿಯಮಾವಳಿಗಳನ್ನು ಮಾಡಿದ್ದೀರಿ ಅದರ ಬಗ್ಗೆ ಹೇಳಿದಿರಿ ಅದು ನಮಗೆ convince ಆಗಿದೆ. ಆದರೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಅಷ್ಟು ದೊಡ್ಡ ಪ್ರಮಾಣದ ವಿದ್ಯುಚ್ಛಕ್ತಿಯನ್ನು ನಾವು ಖರೀದಿಸಬೇಕಾಗುತ್ತದೆ. ನೀವು ಆವರೇಜ್ ರೇಟ್ ಕೂಡ ಹೇಳಿದಿರಿ. ಎಲ್ಲಿಯೂ 8.00 ರೂ.ಗಳವರೆಗೆ ಹೋಗಿಲ್ಲ. Between 4.80 and 7.60 RS. something ಇದೆ. Average 7.ರೂ.ಗಳು ಅಥವಾ 6.00 ರೂ.ಗಳೆಂದು ಇಟ್ಟುಕೊಳ್ಳೋಣ. 28 ಕೋಟಿ ರೂ.ಗಳಿಂದ 1,000 ಕೋಟಿ ರೂಳಿಗೆ ನಮ್ಮದು ಮುಟ್ಟಬೇಕಾದರೆ ಅಷ್ಟು ದೊಡ್ಡ ಪ್ರಮಾಣದ ವಿದ್ಯುಚ್ಛಕ್ತಿಯನ್ನು ನಾವು ಖರೀದಿ ಮಾಡಿರಬೇಕು. ಆ seasonal conditions ಆ ವರ್ಷಗಳಲ್ಲಿ....

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ರಮೇಶ್ ಕುಮಾರ್ ರವರ ಅದು 2012–13 ನೇ ಸಾಲಿಗೆ 4,000 ಕೋಟಿ ರೂ.ಗಳು actually. It is a fact. ಅದು 1,000 ಕೋಟಿ ರೂ.ಗಳು ಅಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ನಾನು ಸ್ವಲ್ಪ ಲೆಕ್ಕದಲ್ಲಿ weak.

ಶ್ರೀ ಶಿವಾನಂದ ಎಸ್. ಪಾಟೀಲ್:- ನೀವು ಲೆಕ್ಕದಲ್ಲಿ weak ಇಲ್ಲ. ನೀವು ಹೇಳಿಬಿಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ನಾವು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು. ಉಳಿದದ್ದು ಎಲ್ಲಾ ಹೇಳಿದಿರಿ. Procedures ಹೇಳಿದಿರಿ, KERCದು, ಸರ್ಕಾರದ limitations ಎಲ್ಲಾ ಹೇಳಿದಿರಿ. We will appreciate it. ಆದರೆ ನೀವೇ ಬಹಿರಂಗ ಪಡಿಸಿದಂತೆಕೊಳ್ಳುವ ದರವನ್ನು ಹೇಳಿಬಿಟ್ಟರೆ maximum ಎಷ್ಟು ಇತ್ತು ಎಂದು. ಇಷ್ಟು ದೊಡ್ಡ ಪ್ರಮಾಣದ ಹಣಖರ್ಚು ಮಾಡಬೇಕಾಗಿದ್ದರೆ ಎಷ್ಟು shortfall ಇತ್ತು. ಕಾರಣ ಏನು ಎನ್ನುವುದನ್ನು ಹೇಳಿ ಬಿಟ್ಟರೆ ಆ figures ಗೆ ನಾವು convince ಆಗಿ ಬಿಡುತ್ತೇವೆ. ಇಲ್ಲದೆ ಹೋದರೆ ನೀವು ಏನೋ ಮುಚ್ಚಿಡುತ್ತಿದ್ದೀರಿ ಅದು ತಪ್ಪು ನೀವು ಇದ್ದದ್ದು ಇಲ್ಲ, ನೀವು ಮಾಡಿದ್ದು ಇಲ್ಲ. ಎಲ್ಲೇ ದಾರಿಯಲ್ಲಿ ಹೋಗುವುದನ್ನು ನೀವು ತಲೆ ಮೇಲೆ ಹಾಕಿಕೊಳ್ಳುತ್ತೀರಿ. ಅಷ್ಟೆ ನಾವು ಹೇಳುವುದು.

ಶ್ರೀ ಡಿ.ಕೆ. ಶಿವಕುಮಾರ್:- ನಾನು ಇಲ್ಲಿ ಬಂದಾಗ ನೀವು ಬಂದಿರಲಿಲ್ಲ. ಬಹಳ ಲೇಟಾಗಿ ಮಾನ್ಯ ರಮೇಶ್ ಕುಮಾರ್ ರವರು ಮತ್ತು ಕುಮಾರಸ್ವಾಮಿಯವರು ಬಂದರು. Starting ನಲ್ಲಿ ನಾನು ಒಂದು ವಿಚಾರವನ್ನು ಹೇಳಿದೆ. ಏನು ಹೇಳಿದೆನೆಂದರೆ, ಮಂಕುತಿಮ್ಮನ ಒಂದು ಕವನ ಹೇಳಿದೆ. ನಮ್ಮ ಹಣೇಬರಹ ಹೇಗೆ ಎಂದರೆ, ನಾನು ಯಾರ ಮೇಲೆಯೂ ಏನು ಹೇಳುವುದಿಲ್ಲ. ಇವರು ಇರಲಿಲ್ಲ. D.V.G.ದು ಒಂದು ಮಾತು ಹೇಳಿದೆ. "ಎದ್ದದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ, ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ, ಜಗವೆಂದು ಉದ್ಧರಿಸುತಿರುವೆ ಎನ್ನುತಿರುವೆ ಸಕನೆ, ನಿನ್ನ ಉದ್ಧಾರ ಎಷ್ಟಾಯಿತು ಮಂಕು ತಿಮ್ಮ, ನಿನ್ನ ಉದ್ಧಾರ ಎಷ್ಟಾಯಿತು ಮಂಕು ತಿಮ್ಮ ಎಂದು" ನಾವು ಬೆಳಗ್ಗೆ ಬೆಳಗ್ಗೆ ನಮ್ಮ ನಮ್ಮದು ಹಾಕಿಕೊಂಡು.... ಇಲ್ಲಿ ultimately ನಾನು ಹೇಳುತ್ತಿದ್ದೇನಲ್ಲಾ ಯಾರ ಮೇಲೆಯೂ ನಾನು I can't fix.... ಇಲ್ಲಿ ಏನಾಗಿದೆ ಎಂದರೆ,

ಶ್ರೀ ವೈ.ಎಸ್.ವಿ. ದತ್ತಾ:- ಈ ಮಂಕುತಿಮ್ಮನ ಕವನ ಎಲ್ಲಾ MLA ಗಳಿಗೆ ಅನ್ವಯಿಸಿ ಹೇಳುತ್ತಿದ್ದೀರಾ?

ಶ್ರೀ ಡಿ.ಕೆ. ಶಿವಕುಮಾರ್:- ನನಗೆ ಅನ್ವಯಿಸುತ್ತದೆ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್:- ನಾನು ಹೇಳಿದ್ದೂ ಕೂಡ XYZ ಮೇಲೆ ಫಿಕ್ಸ್ ಮಾಡಿ. ಇಂಥವರೆ ಮಾಡಿದ್ದಾರೆಂದು ನಾನು ಹೇಳುತ್ತಿಲ್ಲ. ಈ ಸದನಕ್ಕೆ ಕನಿಷ್ಠ ಹಕ್ಕಿದೆಯೋ ಇಲ್ಲವೋ?

ಶ್ರೀ ಡಿ.ಕೆ. ಶಿವಕುಮಾರ್:- He has every right. ಮಾನ್ಯ ಕುಮಾರಸ್ವಾಮಿಯವರು ಬಹಳ ನಾಲ್ಕುವರೆ ತಾಸು ಮಾತನಾಡಿದ್ದಾರೆ. ಬೊಮ್ಮಾಯಿಯವರು ಒಂದೂವರೆ ಗಂಟೆ ಮಾತನಾಡಿದ್ದಾರೆ. ರಾಯರೆಡ್ಡಿಯವರು ಮಾತನಾಡಿದ್ದಾರೆ. ಅವರು ಏನು ಮಾತನಾಡಿದ್ದರಲ್ಲಿ 0.2% ತಪ್ಪು ಎಂದು ನಾನು ಹೇಳುತ್ತಿಲ್ಲ. Officers ಅವರಿಗೆ ಬಂದಂಥ ಮಾಹಿತಿಗಳು, ಆಫೀಸರ್ಸ್, ನಮ್ಮ ಪುಸ್ತಕಗಳಲ್ಲಿರುವಂಥ ಮಾಹಿತಿಯನ್ನು ಕೊಟ್ಟಿದ್ದಾರೆ. Better than the Minister he has got big experience. ನಾನು ಬರೀ 6 ತಿಂಗಳ ಕೂಸು. ನೀವು Chief Minister ಆಗಿ ಕೆಲಸ ಮಾಡಿದ್ದೀರಿ. M.P. ಆಗಿ ಕೆಲಸ ಮಾಡಿದ್ದೀರಿ. ಅವರಿಗೆ ಅಪಾರವಾದಂಥ ಅನುಭವ ಇದೆ. ಅವರು ಅದರ ಮೇಲೆ ಮಾತನಾಡಿದ್ದಾರೆ, ಅವರು administration ನಡೆಸಿದ್ದಾರೆ. ಏನು ಮಾತನಾಡಿದರೂ ತಪ್ಪು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ಈಗ ನನಗೂ ನಿಮಗೂ ಕೆಲಸವೇ ಇಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನನಗೆ ಗೊತ್ತಿಲ್ಲ, ಇನ್ನೊಂದು clarification ಕೊಟ್ಟು ಬಿಡಿ.

ಅಧ್ಯಕ್ಷರು:- ಕುಮಾರಸ್ವಾಮಿಯವರು ಮಾತನಾಡಿದ ರೀತಿ-ನೀತಿ ನೋಡಿದ ಮೇಲೆ ಅಪಾರವಾದ ಅಧ್ಯಯನ ಮಾಡಿಕೊಂಡು ಇಲ್ಲಿ ಮಾತನಾಡಿದ್ದಾರೆ ಅದನ್ನು ಪಾಪ ಅವರು ಇಲ್ಲಿ ಹೇಳಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನನಗೆ ಇನ್ನೊಂದು ಮಾಹಿತಿಯನ್ನು ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ರಮೇಶ್ ಕುಮಾರ್ ರವರು ಮತ್ತು ಕುಮಾರಸ್ವಾಮಿಯವರು ಮಾತನಾಡಿದರು. ಇಬ್ಬರು ಮಾತನಾಡುವಾಗ ಒಬ್ಬರಾದರೂ interfere ಆದರಾ? He try to draw attention. ಇದು ಸರಿಯಿಲ್ಲವೆಂದು ಬೇಕಾದಷ್ಟು ನಡೆದಿವೆ. ಜಗಳಗಳು, ಕಿರುಚಾಟಗಳು ಇಲ್ಲಿ ಆಗಿದ್ದು ಉಂಟು. What he was trying to tell is information. Yes. It's o.K. ಈಗ ಯಾರು ಅದನ್ನು deny ಮಾಡುತ್ತಿಲ್ಲ. ಅವರು ಭಾವನೆ ಏನಾದರೂ ಇಟ್ಟುಕೊಳ್ಳಲಿ. But information ಯಾರೂ deny ಮಾಡುವುದಕ್ಕೆ ಆಗುವುದಿಲ್ಲ. Because it is a fact. ಅವರು ಏನು ಹೇಳಿದರೆಂದರೆ, 28 ಕೋಟಿ ರೂ.ಗಳಿದ್ದು 2007 ರಲ್ಲಿ ಪವರ್ ನೀವು purchase ಮಾಡಿದ್ದೀರಿ ಈಗ ಸುಮಾರು 3,200 ಕೋಟಿ ರೂ.ಗಳು purchase ಮಾಡಿದ್ದೀರಿ, ಈಗ ಹೆಚ್ಚು ಕಡಿಮೆ 3200 ಕೋಟಿ ರೂ.ಗಳಷ್ಟು deference. ಇನ್ನೊಂದು ಕಡೆ ಇವತ್ತು 20,700 ಕೋಟಿ ರೂ.ಗಳು ಆಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ವಿಷಯವನ್ನು ನಿಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ನನಗೆ ಬಂದಂಥ ಮಾಹಿತಿ, ರಾಯಚೂರು ಥರ್ಮಲ್ ಪ್ಲಾಂಟ್ ಏನಿದೆ 7 ಯೂನಿಟ್‌ನಲ್ಲಿ ನಾವು expenditure ತೋರಿಸುತ್ತಿರುವುದು 2 ರೂಪಾಯಿ 80 ಪೈಸೆಯೋ 85 ಪೈಸೆಯೋ ತೋರಿಸುತ್ತೇವೆ. 8ನೇ ಉತ್ಪಾದನೆ ಘಟಕ ಇದೆಯಲ್ಲಾ 4 ರೂಪಾಯಿ 85 ಪೈಸೆಗಳನ್ನು ಖರ್ಚಿಗೆ ಫಿಕ್ಸ್ ಮಾಡಿಕೊಂಡಿದ್ದಾರೆ. UPTCLಗೆ ನಾವು ರೇಟ್ ಜಾಸ್ತಿ ಕೊಡಲಿಕ್ಕೆ ಒಪ್ಪಿಗೆ ಕೊಡುವುದಕ್ಕೆ ನಿರ್ಧಾರವನ್ನು ಮಾಡಿಕೊಂಡು

ಹೊರಟಿದ್ದೇವೆ. ಅದಕ್ಕೆ ಸಮಜಾಯಿಸಿ ಕೊಟ್ಟುಕೊಳ್ಳಲಿಕ್ಕೆ ಏನಾದರೂ ಈ ರಾಯಚೂರು ಥರ್ಮಲ್ ಪ್ಲಾಂಟ್....

ಅಧ್ಯಕ್ಷರು:– ಆ ಯೂನಿಟ್‌ದು ನಮಗೆ ತಾನೆ ಬರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಹೌದು. ಈಗ 7 ಯೂನಿಟ್‌ನಲ್ಲಿ 2.85 ರೂ.ಗಳ ಖರ್ಚು production ಗೆ ತೋರಿಸುತ್ತಾರೆ. 8ನೇ ಯೂನಿಟ್‌ನಲ್ಲಿ 4.85 ರೂ.ಗಳು ಖರ್ಚಾಗುತ್ತದೆಂದು ಹೇಳುತ್ತಾರೆ ನನಗೆ ಇರುವ ಮಾಹಿತಿ ಪ್ರಕಾರ.

ಅಧ್ಯಕ್ಷರು:– ಅದಕ್ಕೆ ಕಾರಣ ಏನು ಎಂದು ಕೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಕಾರಣ ಏತಕ್ಕೆ ಎನ್ನುವುದನ್ನು ಹೇಳಬೇಕು.

ಶ್ರೀ ಶಿವಾನಂದ ಎಸ್. ಪಾಟೀಲ್:– ಆ ಯೂನಿಟ್‌ನಲ್ಲಿ 50% Production ಇಲ್ಲ. Misappropriation ಸಿಕ್ಕಾಪಟ್ಟೆ ಇದೆ. ಅದರಲ್ಲೇನೋ it is a fact.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– But ಅದರಲ್ಲಿ ಲೆಕ್ಕ ತೋರಿಸುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್:– Whatever you are telling, I will examine this. ಅಲ್ಲಗಳೆಯುವುದಕ್ಕೆ ನಾನು ಹೋಗುವುದಿಲ್ಲ. Anything is there, I can send a paper on this. ಏನೇನು ಹೆಚ್ಚು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಂದು ಯೂನಿಟ್‌ದು ಇದೆ. ಅಲ್ಲಿ supply, coal ಮತ್ತೊಂದು ಎಲ್ಲಾ ಇದೆ. ನಾನು ಈಗ ಹೇಳಿದೆನಲ್ಲಾ.

ಅಧ್ಯಕ್ಷರು:– ಅದು Government company ತಾನೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ತಾವು RTPCL ಮತ್ತು NTPCL ಜೊತೆಗೆ cost comparison ಮಾಡಿ. ಆಗ ನಿಮಗೆ clear picture ಗೊತ್ತಾಗಿ ಬಿಡುತ್ತದೆ.

ಅಧ್ಯಕ್ಷರು:- ಆಯಿತು. ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್:- O.K. We will look it. ಏನು ಮಾನ್ಯ ರಮೇಶ್‌ಕುಮಾರ್‌ರವರು ಹಾಗೂ ಕುಮಾರಸ್ವಾಮಿಯವರು ಹೇಳಿದರು, Yes, 2007 ರಲ್ಲಿ 28 ಕೋಟಿ ರೂ.ಗಳೆಷ್ಟು ವಿದ್ಯುತ್ ಅನ್ನು purchase ಮಾಡಿದ್ದೇವೆ. ಈಗ 2013-14 ರಲ್ಲಿ ಒಟ್ಟು 20,799 ಕೋಟಿ ರೂ.ಗಳಿಗೆ ಹೋಗಿದೆ. ಅವತ್ತು 1.96 ಪೈಸೆಗೆ power purchase ಮಾಡಿದೆವು. ಇವತ್ತು average cost about 3.57 ಪೈಸೆಗೆ ಹೋಗಿದ್ದೇವೆ. ಇಲ್ಲಿ ಏನಾಗಿದೆ ಎಂದರೆ, ನಾನು ಆಗಲೇ ಹೇಳಿದ ಹಾಗೆ ಆ ವರ್ಷ ಅಂದರೆ 2006 ರಲ್ಲಿ ಲಿಂಗನಮಕ್ಕಿ, ಸೂಪಾ ಜಲಾಶಯಗಳು ತುಂಬಿದ್ದವು. ಇವತ್ತು ಮಳೆ ಇಲ್ಲ. ನಿನ್ನೆ ಮೊನ್ನೆ ಸ್ವಲ್ಪ inflow ಶುರುವಾಗಿದೆ. ಈಗ 16% ಇದೆ. ಆದರೆ ಹೋದವರ್ಷ ಇದೇ ದಿನ 48% ಇತ್ತು. ಸೂಪಾದಲ್ಲಿ 19% ಇದೆ. ಹೋದವರ್ಷ 38% ಇತ್ತು. ಮಾಣಿಯಲ್ಲಿ 17% ಇದೆ. ಇದೇ ವರ್ಷ 41% ಇದೆ. Let us wait for few days. ನಾವೂ ದೇವರ ಮೇಲೆ ಭಾರ ಹಾಕುತ್ತಿಲ್ಲ. Ultimately ಮಳೆರಾಯ, ಅವನ ಮೇಲೆ ಅವಲಂಬಿಸಿದ್ದೇವೆ. ಮಳೆಯಾದಾಗ ಬೇಕಾದಷ್ಟು ನಮ್ಮ problem sort out ಆಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಸಚಿವರೆ, 2007 ನೇ ಇಸವಿಯಲ್ಲಿ ಎಷ್ಟು ಮೆಗಾ ವ್ಯಾಟ್ ಬೇಡಿಕೆ ಇತ್ತು? ಅದೇ ಏಕ್‌ದಮ್ 1,060 ಕೋಟಿ purchase ಮಾಡಬೇಕಾದರೆ ಅಲ್ಲಿ ಎಷ್ಟು ಮೆಗಾ ವ್ಯಾಟ್ ವಿದ್ಯುತ್ ಅನ್ನು purchase ಮಾಡಿದ್ದೀರಿ? ಅದರ ಅವಶ್ಯಕತೆ ಇತ್ತಾ? ಬೇಡಿಕೆ ಅಷ್ಟೊಂದು ಇತ್ತಾ?

ಶ್ರೀ ಡಿ.ಕೆ. ಶಿವಕುಮಾರ್:- ಈಗ ನಾನು ಹೇಳುತ್ತಿದ್ದೇನಲ್ಲಾ.

ಅಧ್ಯಕ್ಷರು:- ಬೇಡಿಕೆ ಇಲ್ಲದೇ purchase ಮಾಡುತ್ತಾರಾ?

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ ಏಕ್‌ದಮ್ ಅಷ್ಟೊಂದು ಬೇಡಿಕೆ ಹೇಗೆ ಜಾಸ್ತಿಯಾಯಿತು? 28 ಕೋಟಿ ರೂ.ಗಳಿಂದ 4,000 ಕೋಟಿ ಗಳಷ್ಟು ಹೇಗೆ ಜಾಸ್ತಿಯಾಯಿತು? ರೇಟ್ ಏನೂ ಹೆಚ್ಚಿಗೆ

ಕೊಟ್ಟಿಲ್ಲ ಎಂದು ಹೇಳುತ್ತಾರೆ. Average rate minimum ಹೇಳುತ್ತಿದ್ದಾರೆ. ಅಷ್ಟೊಂದು ಸಾವಿರ ಕೋಟಿ ರೂ.ಗಳ ವಿದ್ಯುಚ್ಛಕ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ, ಆ ಬೇಡಿಕೆ ಏಕ್‌ದಮ್ ಹೇಗೆ rise ಆಯಿತು? ಆ ಬೇಡಿಕೆಗೆ ಕಾರಣಗಳು ಏನು ಎನ್ನುವುದನ್ನು ಹೇಳಬೇಕಲ್ಲ?

ಶ್ರೀ ಕೆ. ಶಿವಮೂರ್ತಿ:- ಇದರಲ್ಲಿ ambiguity..... Discussion ಮಾಡಿ ಅರ್ಥಕ್ಕೇ ಬಿಡುವುದು ಬೇಡ. ಈ ಚರ್ಚೆಯ ವಸ್ತು ಕೋರ್ಟಿಗೆ ಹೋಗುವಂತೆ ಆಗಬಾರದು. ನಾಳೆ ದಿವಸ ಇದರ ಮೇಲೆ P.I.L. ಹೋಗುವಂಥವರೂ ಇದ್ದಾರೆ. ಕೇಳುವಂಥದ್ದು ಒಂದು ಹಕ್ಕು ಆಗುತ್ತದೆ. ಅದಕ್ಕೆ ಈ ಸದನ clear ಆಗಿ ಏನಾದರೂ ಅಂತಿಮವಾದ ತೀರ್ಮಾನ ಮಾಡಬೇಕು.

ಅಧ್ಯಕ್ಷರು:- ಯಾವುದಕ್ಕೆ?

ಶ್ರೀ ಕೆ. ಶಿವಮೂರ್ತಿ:- ಹೇಗೆ purchase ಆಯಿತು? ಹೇಗೆ ಆಯಿತು ಎನ್ನುವುದು ಗೊತ್ತಾಗಬೇಕಲ್ಲಾ? ನಮ್ಮ ಮಾಹಿತಿಗೋಸ್ಕರ ಹಾಗೂ ಸಾರ್ವಜನಿಕರಿಗೆ clear ಮಾಡಬೇಕಾಗಿದರೆ ಹೇಳಬೇಕಾಗುತ್ತದೆ.

ಶ್ರೀ ಡಿ.ಕೆ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಲಿಂಗೇಗೌಡರು ಕೇಳಿದರಲ್ಲಾ, ಅದಕ್ಕೆ assist ಮಾಡುತ್ತೇನೆ. 2007-08 ರಲ್ಲಿ procurement from all sources, 40,195 million unit. ಆಗ ನಾವು 40.5 million unit ಗೆ short and medium term procurement ಮಾಡಿಕೊಂಡಿದ್ದೇವೆ. 40,000 all sources ನಿಂದ ಏನಿತ್ತು, 2008-09 ಕ್ಕೆ procurement from all sources ಅವತ್ತು 41,821 ಅಷ್ಟೆ. ಇಲ್ಲಿ 1,963 million units ಅನ್ನು short and medium term ನಲ್ಲಿ procurement ಮಾಡಿಕೊಳ್ಳುತ್ತೇವೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಮಾಹಿತಿ ನೋಡಿದರೆ ಗೊತ್ತಾಗುತ್ತದೆ. ಕೆರೆ ತುಂಬಿದ್ದು, ನಮ್ಮ ಜಲಾಶಯಗಳು ತುಂಬಿದ್ದು ಚರ್ಚೆ ಮಾಡೋಣವಂತೆ. ಆದರೆ ಇದು ಯಾವ ರೀತಿ ನಡೆದಿದೆ ಎನ್ನುವುದು ಬೇಕಾಗುತ್ತದೆ.

SRI.D.K. SHIVAKUMAR:- Statistics is correct.

ಅಧ್ಯಕ್ಷರು:- ಇವೆಲ್ಲಾ ಏನಾದರೂ stock ಮಾಡಿ ಇಡುವಂತಹ ಜಾಗವೇ?

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಕರೆಂಟ್ ಅನ್ನು stock ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಇಲ್ಲಿ switch ಹಾಕಿದರೆ ಅಲ್ಲಿ ಕರೆಂಟ್ start ಆಗುವುದು. ಎಲ್ಲೋ ಒಂದು ಮೂಲೆಯಲ್ಲಿ ಇಟ್ಟಿದ್ದೆವು ಎಂದು ಹೇಳುವುದಕ್ಕೆ ಕರೆಂಟ್ ಅನ್ನು tock ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ವೈ.ಎನ್. ರುದ್ರೇಶ್‌ಗೌಡ:- ಸರ್ಕಾರ ಬದಲಾವಣೆಯಾದಗೆಲ್ಲಾ ರೇಟ್ ಸಹ ಬದಲಾವಣೆಯಾಗುತ್ತಿರುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಅವರು ಏನು power ವಿಚಾರ ಹೇಳುತ್ತಿದ್ದಾರೆ, 2013 ಕ್ಕೆ ನಾವು 20,779 ಕೋಟಿ ರೂ.ಗಳಿಗೆ ಹೋಗಿದ್ದೇವೆ. Total energy purchased is 58,190 million units ಅಷ್ಟು ನಾವು purchase ಮಾಡಿದ್ದೇವೆ. ಆಗ ಒಂದು ಬೆಲೆ fix ಆಗಿದೆ. ಇಷ್ಟು ಇರಬೇಕಾದರೆ there is a demand. Demand create ಆಗಿದ್ದಕ್ಕೆ, ತಾವು ಹೇಳಿದ ಹಾಗೆ ಬೆಳಗ್ಗೆ ಸಾಯಂಕಾಲ frequency ನೋಡುತ್ತಿರಬೇಕು. ಇದ್ದಕ್ಕಿದ್ದ ಹಾಗೆ light on ಮಾಡುತ್ತಾರೆ. ಇದ್ದಕ್ಕಿದ್ದ ಹಾಗೆ A.C on ಮಾಡುತ್ತಾರೆ. ಇವೆಲ್ಲಾ demand ಆಗುತ್ತಿರುವ ಹಾಗೆ SLDC ನೋಡಿ purchase ಮಾಡಬೇಕಾಗುತ್ತದೆ. Purchasing ಒಂದು ರೀತಿ trading type ಹೋಗಿದೆ. ಇನ್ನೊಂದು frequency ವಿಚಾರದಲ್ಲಿ ಹೇಳಿದಿರಲ್ಲಾ yes, I agree with it. 50.5 frequency ಗೆ ಹೋದ ತಕ್ಷಣ Central Government ನಿಂದ ಕೇವಲ ಎರಡು ಪೈಸೆಗೆ ತೆಗೆದುಕೊಳ್ಳಬಹುದು. ಅಂತಹ ಸಂದರ್ಭ ಕೂಡ ನಿರ್ಮಾಣ ಆಗುತ್ತದೆ. ಇಲ್ಲಿ ಬಹಳ fluctuations ಇದೆ. ಆದರೆ ನಾವು ಇಲ್ಲಿ trust ಮೇಲೆ ಕೆಲಸ ಮಾಡಬೇಕಾಗುತ್ತದೆ. ಇದ್ದಕ್ಕಿದ್ದ ಹಾಗೆ ನಾವು demand ಕೂಡ create ಮಾಡುವುದಕ್ಕಾಗುವುದಿಲ್ಲ. ನಮಗೆ ಜಾಸ್ತಿ ಕರೆಂಟ್ ಬಂದಿತು, free ಆಗಿ ಬಂದಿತು ಎಂದು ಇದ್ದಕ್ಕಿದ್ದ ಹಾಗೆ ನಾವು ನಿಮ್ಮ ಊರಿನ ಕಡೆ ಇರುವ ಎಲ್ಲಾ ಯೂನಿಟ್‌ಗಳನ್ನು stop ಮಾಡಿಸುತ್ತೇವೆ. ಬೆಳಗ್ಗೆ ಸ್ವಲ್ಪ ಮಳೆ ಜಾಸ್ತಿ ಬಂದಿತು

ಎಂದು UPCL ದ್ದು ಕಡಿಮೆ ಮಾಡಿ ಎಂದು ಹೇಳುತ್ತೇವೆ. ನಮ್ಮಲ್ಲಿಯೂ generation ಕಡಿಮೆ ಮಾಡಿ ಎಂದು ಹೇಳುತ್ತೇವೆ. ಎಲ್ಲಿ ನಮಗೆ cheap power ಸಿಗುತ್ತಿರುತ್ತದೆ ಅಲ್ಲಿ ಆಗುತ್ತಿರುತ್ತದೆ. Stock Exchange ನಡೆದ ಹಾಗೆ power exchange ಕೂಡ ಇದೆ. ಆದ್ದರಿಂದ ಇಲ್ಲಿ ಯಾರೂ ಕೈ ತಪ್ಪಿಸಿ ದೊಡ್ಡ ಬದಲಾವಣೆ ಮಾಡುವುದಕ್ಕೆ without tendering, without regulatory authority, without any proper reason, ಇದು ದೊಡ್ಡ linkage ಇಲ್ಲದೇ ಇದನ್ನು ನಾನು ಮಾಡುವುದಕ್ಕೆ ಬರುವುದಿಲ್ಲ. ಕೆಲವು ಸಂದರ್ಭದಲ್ಲಿ price ಜಾಸ್ತಿಯಾಗಬಹುದು, ಆದರೆ 20 ರೂಪಾಯಿ ಎಂದು ಹೇಳಿದರು ಅದು ನನಗೇ ಕೇಳಿ ಆಶ್ಚರ್ಯವಾಗುತ್ತಿದೆ. 20 ರೂಪಾಯಿ ಅಂದರೆ, ಸೋಲಾರ್‌ನಲ್ಲಿ ಹಿಂದೆ ಯಾವುದೋ ಟೆಂಡರ್‌ನಲ್ಲಿ 11 ರೂಪಾಯಿಗೆ ಆಗಿದ್ದರೆ ನಮ್ಮ ಸರ್ಕಾರವೇ ಕೊಡುತ್ತಿದೆ. ಸರ್ಕಾರಕ್ಕೆ ಕೆ.ಪಿ.ಟಿ.ಸಿ.ಎಲ್ ನಿಂದ purchase ಮಾಡಿದರೂ 12–13 ರೂಪಾಯಿಗೆ ಕೊಡುತ್ತಿದ್ದೇವೆ. ಅವೆಲ್ಲಾ small unit. ಯಾವೂದೂ 20–30 ರೂಪಾಯಿಗೆ purchase ಮಾಡುವುದು ನನ್ನ ದಾಖಲೆಯಲ್ಲಿ ಇಲ್ಲ. If anything is there, I can just give 10 ವರ್ಷದ details ಅನ್ನು ಮಾಜಿ ಮುಖ್ಯಮಂತ್ರಿಯವರಿಗೆ ಖಂಡಿತವಾಗಿಯೂ ನಾನು ಕಳುಹಿಸಿಕೊಡುತ್ತೇನೆ. There is no hide and seek here.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಸಚಿವರೆ, ನಿಮ್ಮ ಉತ್ತರ ನೀವು ಹೇಳುತ್ತಿರುವ ಉತ್ತರದೊಳಗೇ ಸಮರ್ಥನೀಯವಾಗಿ ಉತ್ತರ ಕೊಡುತ್ತಿದ್ದೀರಿ. ಅಂದರೆ ತಾವು ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿ. Power purchase ಮಾಡಲೇಬೇಕಾಗಿತ್ತು. ಇಷ್ಟು ಕೋಟಿ ರೂ.ಗಳನ್ನು ಖರ್ಚು ಮಾಡುವುದು ಅನಿವಾರ್ಯವಿತ್ತು ಎನ್ನುವುದಕ್ಕೆ ನೀವು ಹೇಳುತ್ತಿದ್ದೀರಿ.

ಶ್ರೀ ಡಿ.ಕೆ. ಶಿವಕುಮಾರ್:– ಖರ್ಚು ಅಲ್ಲ. ಇದನ್ನು ತೆಗೆದುಕೊಂಡಿದ್ದೇವೆ, ಇದನ್ನು ಮಾರಿದ್ದೇವೆ ಅಷ್ಟೆ.

ಶ್ರೀ ವೈ.ಎಸ್.ವಿ. ದತ್ತಾ:– ಗೊತ್ತಾಯಿತು. ಕರೆಂಟ್‌ಅನ್ನು purchase ಮಾಡಿದ್ದೀರಿ. Purchase ಮಾಡುವುದು ಅನಿವಾರ್ಯತೆ ಇತ್ತು ಎಂದು ತಾವು

ಹೇಳುತ್ತಿದ್ದೀರಿ. ಅದು ಯಾವಾಗ ಸರಿಯಾಗುತ್ತದೆ ಎಂದರೆ, ನೀವು ಎಷ್ಟು ಬೇಡಿಕೆ ಇತ್ತು ಎನ್ನುವುದನ್ನೂ ಹೇಳಿದರೆ ಒಳ್ಳೆಯದು ಆಗುತ್ತದೆ. ಏಕೆಂದರೆ ಆ ವರ್ಷ ಎಷ್ಟು ಬೇಡಿಕೆ ಇತ್ತು, ಎಷ್ಟು ಬೇಡಿಕೆ ಹೆಚ್ಚಿತು?

ಅಧ್ಯಕ್ಷರು:– ಎಷ್ಟು ಬೇಡಿಕೆ ಇತ್ತು ಎಂದು ಮಾತನಾಡುವಾಗ ಹೇಳಿದರಲ್ಲಾ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಕುಮಾರಸ್ವಾಮಿಯವರು ಮಾತನಾಡುವಾಗ ಬೇಡಿಕೆ ಬಗ್ಗೆ ಹೇಳಿದರಲ್ಲಾ. This is the ಬೇಡಿಕೆ. ಇಷ್ಟು demand ಇದ್ದರೆ ಇಷ್ಟು purchase ಮಾಡಲಿಕ್ಕೆ ಸಾಧ್ಯ. Demand ಇಲ್ಲವೆಂದರೆ purchase ಮಾಡುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್:– Purchase ಮಾಡಿರುವುದನ್ನು ನಾನು ಒಪ್ಪುತ್ತೇನೆ. ಆ station ಗಳು ಅಷ್ಟು current consume ಮಾಡಿದೆ ಎನ್ನುವ data ಕೊಡಿ. ನಿಮ್ಮಲ್ಲಿ ಇದ್ದೇ ಇದೆಯಲ್ಲಾ.

ಶ್ರೀ ಡಿ.ಕೆ. ಶಿವಕುಮಾರ್:– ಖಂಡಿತ ಕೊಡೋಣ. Yes. It is a very open document. ಮುಂದೆ ನಮ್ಮ ಹತ್ತಿರ document ಯಾವ ರೀತಿ ಇದೆ ಎಂದರೆ, ನೀವೂ ವೆಬ್‌ಸೈಟ್‌ಗೆ ಹೋಗಬಹುದು. ಪ್ರತಿಯೊಂದು feeder ಗೆ ಎಷ್ಟೆಷ್ಟು power ಹೋಗಿದೆ ಎನ್ನುವುದು ಬರುತ್ತದೆ. ಕೆಲವರು ನಮಗೆ ಎರಡೇ hour, ಮೂರೇ hour ಕರೆಂಟ್ ಕೊಟ್ಟಿರುವುದು. 7 ಗಂಟೆ ಕರೆಂಟ್ ಕೊಡುತ್ತಿದ್ದೇವೆ ಎಂದು ಈ ಸಚಿವರು ಸುಳ್ಳು ಹೇಳುತ್ತಿದ್ದಾರೆ, ಒಂದು ಚೂರು ಆಫ್ ಆಗಿದ ತಕ್ಷಣ ಶಿವಕುಮಾರ್‌ರವರೆ ಆಫ್ ಮಾಡಿಸಿದರು ಟಿ.ವಿ ಯಲ್ಲಿ ಅವರ ವಿರುದ್ಧ ಏನೋ ಬಂದಿತು ಎಂದು ಆಫ್ ಮಾಡಿಸಿದ್ದಾರೆ ಎಂದು ಬರುತ್ತದೆಯಲ್ಲಾ this cannot be done. ಅದನ್ನೆಲ್ಲಾ ಮಾಡುವುದಕ್ಕೇ ಸಾಧ್ಯವಾಗುವುದಿಲ್ಲ. ಪ್ರತಿಯೊಂದು feeder ನಲ್ಲಿ ಎಷ್ಟೆಷ್ಟು power ಹೋಗುತ್ತಿದೆ, ಎಷ್ಟೆಷ್ಟು allotment ಹೋಗುತ್ತಿದೆ ಎಂದು ನಿಮಗೆ ಮಾಹಿತಿ ಸಿಗುತ್ತದೆ. ಬೇಕಾದರೆ ನಿಮಗೆ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ. ಏಕೆಂದರೆ ನಮ್ಮ ಜನರಿಗೆ more educate ಮಾಡಬೇಕಾಗುತ್ತದೆ. ನಾನು

ರೈತರಿಗೆಲ್ಲಾ ಇಷ್ಟೆಲ್ಲಾ ಏಕೆ ಹೇಳುತ್ತಿದ್ದೇನೆ ಎಂದರೆ, 8,000 ಕೋಟಿ ರೂ.ಗಳಿದ್ದು, ಪ್ರತಿಯೊಬ್ಬರಿಗೂ 25,000 ಕೋಟಿ ರೂ.ಗಳು, 50,000 ಕೋಟಿ ರೂ.ಗಳವರೆಗೂ ಆ ಬೆಲೆ ಗೊತ್ತಾಗಬೇಕು ಎನ್ನುವ ಸಲುವಾಗಿಯೇ ಕೆಲವು ವಿಚಾರಗಳನ್ನು ನಾನು ರೈತರ ಬಗ್ಗೆ ಚರ್ಚೆ ಮಾಡುತ್ತಿರುವುದು. ಏಕೆಂದರೆ, productivity ನಿಮಗೆ ಈ ಸರ್ಕಾರ ಇಷ್ಟು ದುಡ್ಡು ಕೊಡುತ್ತಿದೆ, ಇಷ್ಟು investment ಮಾಡುತ್ತಿದೆ, ನೀವು ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಿ. ಇದನ್ನು ಮಿತವಾಗಿ ಬಳಸಿಕೊಳ್ಳಿ. ಸುಮ್ಮನೆ on ಮಾಡಿ ಹೋಗಬೇಡಿ. On ಮಾಡಿ ನೀರು ಇಲ್ಲದಿದ್ದರೂ ಮೋಟರ್ ಓಡುತ್ತಿರುತ್ತದೆ ಮತ್ತೆ ಆಫ್ ಆಗುತ್ತಿದೆ. ಇವೆಲ್ಲಾ ಬೇಡ ಎನ್ನುವ ದೃಷ್ಟಿಯಿಂದಲೂ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇಂತಹ ಅನೇಕ ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಕೆಲವು Central Government issues ಕೂಡ ಹೇಳಿದ್ದೇನೆ. Solar Policy ಬಗ್ಗೆ ಹೇಳಿದ್ದೇನೆ. Central Government Budget ಕೂಡ... I think I am not so ssatisied with the Central Government Budget. ಕರ್ನಾಟಕಕ್ಕೆ ಅಂಥದ್ದು ದೊಡ್ಡ ಕೊಡುಗೆ ಏನೂ ಕೊಟ್ಟಿಲ್ಲ. 100 ಮೆಗಾ ವ್ಯಾಟ್ ಬಗ್ಗೆ ಸ್ವಲ್ಪ ಮಾತನಾಡಿದ್ದಾರೆ ಅಷ್ಟೆ. ಅದು ನಮಗೂ ಅದಕ್ಕೂ ಏನೂ ಸಂಬಂಧವಿಲ್ಲ. ಹೆಚ್ಚು ಕಡಿಮೆ Green Energy Corridor ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾವೇ 1,000 ಕೋಟಿ ರೂ.ಗಳನ್ನು investment ಮಾಡೋಣ ಎಂದು ಇದ್ದೇವೆ. coal ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ನೋಡೋಣ. Let us wait on that. ಭರವಸೆ ಇದೆ. ನಾವೇ ಅನೇಕ ಯೋಜನೆಗಳನ್ನು ತಯಾರು ಮಾಡುತ್ತಿದ್ದೇವೆ. ಇಲ್ಲಿ ನಾನು ಎಲ್ಲರ ಸಹಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ. ರೈತರನ್ನು ನಾವು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಮುಂದೆ ಬರುವಂತಹ ರೈತರಿಗೆ ಮೀಟರ್ ಹಾಕಿಸಿಕೊಂಡು ಹಣ ಕಟ್ಟುತ್ತೇವೆನ್ನುವವರಿಗೆ encourage ಮಾಡಬೇಕೆಂದು ಇದ್ದೇವೆ. ಇನ್ನು ತಮ್ಮದು ಬೇರೆ ಯಾವುದೇ ವಿಚಾರ ಇದ್ದರೂ ಕೂಡ ತಾವು ಕೊಡುವಂತಹ ಸಲಹೆಯನ್ನು ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಬೇಕಾದಷ್ಟು ನಮ್ಮ Hydel energyಯಲ್ಲಿ modernization ಕೆಲಸವನ್ನು ನಾವು ಈಗಾಗಲೇ

ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಕುಮಾರಸ್ವಾಮಿಯವರು without power, no development ಏನು ನಡೆಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. I fully agree with that. There cannot be any growth without power. ಈ ರೀತಿ ಎಲ್ಲಾ ಇದೆ. Employment problem, GDP growth ಆಗಬೇಕಾದರೆ, ಬಹಳ ಉತ್ತಮವಾದಂತಹ ಸಲಹೆಗಳನ್ನು ತಾವೆಲ್ಲರೂ ಕೊಟ್ಟಿದ್ದೀರಿ. ಅವರೆಲ್ಲರೂ ಕೂಡ ಇದಕ್ಕೆ permission ಕೊಟ್ಟು vote ಹಾಕಬೇಕೆಂದು ಇನ್ನು ಏನಾದರೂ ಸಲಹೆ ಸೂಚನೆಗಳು ಇದ್ದರೂ ಸಹ ತೆಗೆದುಕೊಳ್ಳುವುದಕ್ಕೆ ಸಿದ್ದನಿದ್ದೇನೆ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಗೆ ನಾನು ಸ್ವಾಗತ ಮಾಡುತ್ತೇನೆ. ನಾವು ಎಷ್ಟು ಪ್ರಾಮಾಣಿಕವಾಗಿ ರೈತನ ಹಿತವನ್ನು ಕಾಪಾಡುತ್ತೇವೆ ಎನ್ನುವಂತಹ ಪ್ರಶ್ನೆ ಇಲ್ಲಿ ಉದ್ಭವವಾಗುತ್ತಿದೆ. Electricity shortage ಆದ ತಕ್ಷಣವೇ ಮೊದಲು ಎಲ್ಲಿ ತೆಗೆಯುತ್ತಾರೆಂದರೆ ಯಾವ feeders ಅನ್ನು shutdown ಮಾಡುತ್ತಾರೆಂದರೆ ಮುಧೋಳ, ಬಸವನಬಾಗೇವಾಡಿ, ಬಿಜಾಪುರದಲ್ಲಿ ಹೇಳುತ್ತಾರೆ. ನಮ್ಮ ಬೇಡಿಕೆಗೆ ಎಷ್ಟು ಮಿಲಿಯನ್ ಯೂನಿಟ್ ಇದೆ ಅದರಲ್ಲಿ ಸುಮಾರು 30 ರಿಂದ 40% supply ಮಾಡುವುದಿಲ್ಲ. 2 ತಾಸಿನಲ್ಲಿ ಸುಮಾರು 10 ಮಿನಿಟ್‌ಗೊಮ್ಮೆ interruptions ಇರುತ್ತದೆ. ಈ ವಿಷಯವನ್ನು ನಾನು ಹೇಳಲೇಬೇಕಾಗುತ್ತದೆ. ಅದರಲ್ಲಿಯೂ ವಿಶೇಷವಾಗಿ ಬಸವನಬಾಗೇವಾಡಿಯ ವಿಷಯಕ್ಕೆ ತೆಗೆದುಕೊಂಡಾಗ it is 90% for irrigation pumpsets and agricultural purpose. ಅಲ್ಲಿ industries ಬಹಳ ಕಡಿಮೆ ಇರುತ್ತದೆ. ಮೊದಲು ಬಸವನಬಾಗೇವಾಡಿಯಲ್ಲಿ immediate ಆಗಿ shutdown ಮಾಡುತ್ತಾರೆ. ನಾವು ಏನು ಮಾಡೋಣ? ಅದರ ಬಗ್ಗೆ ಕಠಿಣವಾದಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೀಟರ್ ಆಗುವಂತಹದ್ದು ಸ್ವಾಗತಾರ್ಹವಾದುದು. ಆದರೆ ನೀವು ಎಲ್ಲಿಯವರೆವಿಗೂ ನಾನು ಈ ಬಗ್ಗೆ ಪದೇಪದೇ ಹೇಳುತ್ತಿದ್ದೇನೆ. ನೀವು ಯಾವ sectorಗೆ ಎಷ್ಟು ಖರ್ಚಾಗುತ್ತಿದೆ, ಅದು ಎಲ್ಲಿಂದ ಹೋಗುತ್ತಿದೆ, ಈ ಬಗ್ಗೆ Power Audit ಮಾಡಬೇಕು. ರೈತನು ಇಷ್ಟು ನಿಖರವಾಗಿ ಖರ್ಚು ಮಾಡುತ್ತಿದ್ದಾನೆಂದು ಹೇಳಬಹುದು. ಈ ಬಗ್ಗೆ ನೀವು ಹೇಳಿಕೆಯನ್ನು

ಕೊಡುವುದರಿಂದ ಈ ಕೆಲಸ ಆಗುವುದಿಲ್ಲ. Transformers ಸಂಬಂಧಪಟ್ಟಂತೆ ನಿಮ್ಮಲ್ಲಿ feeders ಇದೆ.

ಅಧ್ಯಕ್ಷರು:– ಈ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರಲ್ಲಾ. ಪ್ರತಿಯೊಂದು ಎಲ್ಲೆಲ್ಲಿಗೆ line ಹೋಗುತ್ತದೆ ಎಂದು ಹೇಳಿದ್ದಾರೆ.

SRI. APPAJi. C.S. NANDAGOWDA:- Sir, let them experiment it later on. ಈಗ...

ಶ್ರೀ ಶಿವಾನಂದ ಎಸ್ ಪಾಟೀಲ್:– ಮಾನ್ಯ ನಾಡಗೌಡರವರು ಹೇಳುವುದು ಏನೆಂದರೆ.......

(ಗೊಂದಲ)

ಅಧ್ಯಕ್ಷರು:– ಅವರು ಮಾನ್ಯ ಸಚಿವರು ಏನು ಹೇಳುತ್ತಾರೆ ಕೇಳಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರು ಎದ್ದು ನಿಂತಿದ್ದಾರೆ ತಾವು ಕೇಳಿ.

ಶ್ರೀ ಡಿ.ಕೆ. ಶಿವಕುಮಾರ್:– Let it be clear. ಪ್ರತಿಯೊಬ್ಬ ರೈತನಿಗೂ ಮೀಟರ್ ಹಾಕಬೇಕೆಂದು ಏನು ಇಲ್ಲ. ರೈತರಲ್ಲಿ ಕೆಲವರು 24 hours ನಮಗೆ ಕರೆಂಟ್ ಬೇಕೆಂದು ನಾವು ದುಡ್ಡು ಕೊಡುತ್ತೇವೆ commercial crop ಬೆಳೆಯುತ್ತಿದ್ದೇವೆ, ನಮಗೆ ಒಳ್ಳೆಯ quality power ಕೊಡಿ ಎಂದು ಬಂದಿದ್ದರು. ಅಂತಹವರಿಗೆ we are going to encourage.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– ಅಲ್ಲಿ line separate ಆಗಿದೆ. Irrigation pumpsetsಗೆ ಬೇರೆ ಇದೆ, driniking waterಗೆ ಬೇರೆ ಇದೆ, ನಂತರ ಸಿಟಿ ಮತ್ತು ಟೌನ್ಸ್ ಮತ್ತು villagesಗೆ separate line ಆಗಿದೆ. ನೀವು ಟಿ.ಸಿ.ಲೋಡ್‌ಗೆ ಎಷ್ಟು ಹಾಕುತ್ತಿದ್ದೀರಿ, ಅದರಲ್ಲಿಯೇ ಮೀಟರ್ ಅನ್ನು ಅಳವಡಿಸಿದರೆ ಸಾಕು, ಇದರಿಂದ ಎಷ್ಟು ವಿದ್ಯುತ್ ಖರ್ಚಾಗುತ್ತಿದೆ ಎಂದು ನಿಮಗೆ ಗೊತ್ತಾಗುತ್ತದೆ. ಇಲ್ಲಿ Energy Audit ಆಗುತ್ತದೆ. ಅದನ್ನು ನೀವು

ಬಿಟ್ಟು ಸುಮ್ಮನೆ ಏನೋ ಒಂದು ನೆಪ ಹೇಳುವುದು ಸರಿಯಲ್ಲ. ಇದುವರೆಗೂ Energy Audit ಸರಿಯಾಗಿಲ್ಲ, ನೀವು ಸಿಂಪಲ್ ಆಗಿ ಮಾಡುವುದನ್ನು ಮತ್ತೊಂದು ರಾಜಕೀಯ ಲೇಪವನ್ನು ಕೊಟ್ಟು ಮೀಟರ್ ಅನ್ನು ಕೂರಿಸಬೇಕೆಂದು ಹೇಳಿ ಅಲ್ಲಿ ಯಾರ್‍ಯಾರನ್ನು ಒಕ್ಕಲೆಬ್ಬಿಸಿ ಗಲಾಟೆ ಮಾಡಿಸುವುದು. Sir, you have the readymade information with you. ಟಿ.ಸಿ.ಗಳ ಮುಖಾಂತರವಾಗಿ ಅಲ್ಲಿ ಮೀಟರ್ ಎಷ್ಟು ಓಡುತ್ತದೆ ಎಂದು ನೀವೇ ಬೇಕಾದರೆ audit ಮಾಡಿಕೊಳ್ಳಬಹುದು. ಇದು ಬಹಳ ದೊಡ್ಡ ವಿಷಯವೇನಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅದಕ್ಕೆ ದುಡ್ಡು ತೆಗೆದುಕೊಳ್ಳುತ್ತಿರುವುದು, ಸಹಾಯಧನ ತೆಗೆದುಕೊಳ್ಳುತ್ತಿರುವುದು. ಈಗ ಮಾಡಿಯೇ ಇಲ್ಲವೆ ಸ್ವಾಮಿ. 7,000 ಕೋಟಿ ಸಹಾಯಧನವನ್ನು ತೆಗೆದುಕೊಳ್ಳುತ್ತಿರುವುದು.

ಅಧ್ಯಕ್ಷರು:– ಏನು ಮಾಡಬೇಕೆಂಬುದನ್ನು specific ಆಗಿ ಹೇಳಿ.

ಶ್ರೀ ಅಪ್ಪಾಜಿ. ಸಿ.ಎಸ್. ನಾಡಗೌಡ:– Specific ಏನೂ ಇಲ್ಲ. ಎಲ್ಲಿ ಸೋರಿಕೆ ಆಗುತ್ತಿದೆ ಅದನ್ನು ಕಂಡುಹಿಡಿಯುವಂತಹ ಪ್ರಾಮಾಣಿಕವಾದ ಪ್ರಯತ್ನ ಸರ್ಕಾರದಿಂದ ಆಗಬೇಕಾಗಿದೆ. ರೈತರ ಹೆಸರಿನಲ್ಲಿ ಗೂಬೆ ಕೂರಿಸುವಂತಹ ಕೆಲಸ ಆಗಬಾರದು.

ಅಧ್ಯಕ್ಷರು:– O.K.

(ಗೊಂದಲ)

ಅಧ್ಯಕ್ಷರು:– ಸ್ವಲ್ಪ ತಾಳಿ ಎಲ್ಲರೂ ಒಟ್ಟಿಗೆ ಎದ್ದು ನಿಂತುಕೊಂಡು ಕೇಳಿದರೆ ಹೇಗೇ? ಸಿದ್ದು ನ್ಯಾಮಗೌಡರೆ ನಿಮ್ಮದು ಏನು ಇದೆ ಕೇಳಿ.

ಶ್ರೀ ಸಿದ್ದು ಬಿ ನ್ಯಾಮಗೌಡ:– ಇವತ್ತು load shedding ಗೆ ಕೊಡುತ್ತಿದ್ದಾರಲ್ಲಾ ನಮ್ಮ ಉತ್ತರಕರ್ನಾಟಕದ ಕಡೆಗೆ ಕಡಿಮೆ ಕೊಡುತ್ತಾರೆ. ಅದರಲ್ಲಿಯೂ ವಿಶೇಷವಾಗಿ ಬಿಜಾಪುರ, ಬಾಗಲಕೋಟೆಯಲ್ಲಿ pumpsets

ಜಾಸ್ತಿ ಇದೆ. ಇದರಿಂದ ನಮಗೆ ತುಂಬಾ ತೊಂದರೆಯಾಗಿದೆ. ನಮಗೆ ಕರೆಂಟ್ ಕೊಡುವಂತಹ ಅಲಾಟ್‌ಮೆಂಟ್ ಅನ್ನು ಕಡಿಮೆ ಮಾಡುತ್ತಾರೆ. ಅದರಿಂದ ನಮಗೆ ತೊಂದರೆಯಾಗಿದೆ. ನಮಗೆ ಸರಿಯಾಗಿ ಲೆಕ್ಕ ಮಾಡಿ ಅಲಾಟ್‌ಮೆಂಟ್ ಕೊಡಬೇಕು.

ಅಧ್ಯಕ್ಷರು:– O.K.

ಶ್ರೀ ಈಶ್ವರ್ ಖಂಡ್ರೆ:– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ನಾನು ಮಾನ್ಯ ಸಚಿವರ ಗಮನಕ್ಕೂ ಕೂಡ ತಂದಿದ್ದೇನೆ. Dhannura Feeder ಇದೆ. ಜುಲೈ 6 ರಿಂದ 8 ಕ್ಕೆ 45 ನಿಮಿಷಗಳ ಕಾಲ 3–Phase current ಅನ್ನು ಕೊಡಲಾಗಿದೆ. ಅಂದರೆ unscheduled power cut ಏನಾಗುತ್ತಿದೆ, ಸರಿಯಾದ ಸಮಯಕ್ಕೆ schedule ಇರಲಿ, ಆದರೆ unscheduled ಮೇಲಿಂದ ಮೇಲೆ ಮಾಡುತ್ತಿದ್ದಾರೆ. ರೈತರು ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಹೋಗುತ್ತಾರೆ. 24 ತಾಸು ಯಾವಾಗ ಕರೆಂಟ್ ಬರುತ್ತದೆ ಎಂದು ನೋಡಿಕೊಂಡು ಕುಳಿತಿರುತ್ತಾರೆ. ಇಲ್ಲಿ scheduled cut ಮತ್ತು equal distribution ಆಗಿರುವುದಿಲ್ಲ. ಈಗ ನನ್ನ ಕ್ಷೇತ್ರಕ್ಕೆ 20–30 ಮೆಗಾವ್ಯಾಟ್ ಬೇಕಾದರೆ....

(ಗೊಂದಲ)

ಶ್ರೀ ಈಶ್ವರ್ ಖಂಡ್ರೆ:– ಇನ್ನು ನನ್ನದ್ದು ಎರಡನೆಯ clarification ಇದೆ. ಮಾನ್ಯ ಮಂತ್ರಿಗಳು 24 ತಾಸಿನಲ್ಲಿ transformer replacement ಆಗುತ್ತದೆ ಎಂಬ ಒಳ್ಳೆಯ ಕ್ರಮವನ್ನು ತೆಗೆದುಕೊಂಡಿದ್ದಾರೆ. ಇದು ನಮ್ಮಲ್ಲಿ ಈ ಆದೇಶವು ನಾಳೆಯಿಂದಲೇ ಜಾರಿ ಆಗುತ್ತದೆಯೇ? ರಿಪೇರಿ ಸೆಂಟರ್‌ಗಳು ನಮ್ಮಲ್ಲಿ ಈಗಾಗಲೇ already ಪ್ರಾರಂಭವಾಗಿದ್ದು ಅದು ಸ್ಥಗಿತಗೊಂಡಿದೆ. ಅದನ್ನು ಪುನಃ ಪ್ರಾರಂಭ ಮಾಡುವುದು ಆಗಬೇಕಾಗಿದೆ. ಇನ್ನು ಮೂರನೆಯ clarification ಏನೆಂದರೆ, ನಮ್ಮಲ್ಲಿ ಅಕ್ರಮ ಸಕ್ರಮವು 2010–11ರಲ್ಲಿ ಸುಮಾರು 1600 ಜನರು 16 ರಿಂದ 17,000 ರೂಪಾಯಿಗಳನ್ನು ತುಂಬಿದ್ದಾರೆ. ಅದಕ್ಕೆ ಇಲ್ಲಿಯವರೆಗೆ ಯಾರು ಟೆಂಡರ್‌ದಾರರು ಬಂದಿರುವುದಿಲ್ಲ. ಅದಕ್ಕೆ entrustment ಮಾಡಿದ್ದಾರೆ. ಅದು ಇನ್ನು complete

ಆಗಿರುವುದಿಲ್ಲ. ಹೊಸದಾಗಿ ಅಕ್ರಮ ಸಕ್ರಮ ಮಾಡಿರುವುದು ಬೇರೆ ಆಯಿತು. ಹಳೆಯದನ್ನು ಮಾಡಿರುವುದು ಯಾವಾಗ ಮುಗಿಯುತ್ತದೆ. Hazardous lines ಬಗ್ಗೆ ಮಂತ್ರಿಗಳು ಹೇಳಲಿಲ್ಲ. ಬಹಳಷ್ಟು ಕ್ರಾಂತಿಕಾರಕ ಬದಲಾವಣೆಯ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ. Hazardous lines ಸಾಕಷ್ಟು ದುರ್ಘಟನೆ ಆಗಿ ಜನರು ಸಾಯುತ್ತಿದ್ದಾರೆ. ಸುಮಾರು 4 ರಿಂದ 5 feetಗೆ ಹಳೆಯ ತಂತಿಗಳು ಬಂದಿದೆ. ಆ ತಂತಿಯನ್ನು ಬದಲಾವಣೆ ಮಾಡಬೇಕು. ಅಲ್ಲಿ ಕಬ್ಬಿಣದ ಪೋಲ್ಸ್ ಅನ್ನು ಸುಮಾರು 40–50 ವರ್ಷಗಳ ಹಿಂದೆ ಹಾಕಿದ್ದಾರೆ. ಅದರಲ್ಲಿ ಕರೆಂಟ್ ಬಂದು ಅಲ್ಲಿಯೂ ಜನರು ಸಾಯುತ್ತಿದ್ದಾರೆ. ಅದಕ್ಕೆ ಆ ಪೋಲ್ಸ್‌ಗಳನ್ನು replacement ಮಾಡುವುದು ಆಗಬೇಕಾಗಿದೆ. ನಮ್ಮ ಭಾಗದ Gescomನಲ್ಲಿ ಸಮಸ್ಯೆ ಏನಾಗಿದೆ ಎಂದರೆ ಇದನ್ನು ವಿಶೇಷವಾಗಿ ಬಗೆಹರಿಸುವಂತಹ ರೀತಿಯಲ್ಲಿ 72 ಗಂಟೆಯಲ್ಲಿ ಮಾಡುವಂತಹದ್ದು ಗಡಿಭಾಗದಲ್ಲಿ ಬಹಳಷ್ಟು ಜನರಿಗೆ ಫೋನ್ ಮಾಡುವಂತಹದ್ದು ಈ ಬಗ್ಗೆ ಅರಿವು ಇರುವುದಿಲ್ಲ. ಆ ಬಗ್ಗೆ ಮಾಹಿತಿ ಕೊಡುವುದಕ್ಕೆ ಸುಮಾರು 8 ದಿನ ಮತ್ತು 15 ದಿನ ನಡೆಯುತ್ತಿದೆ. Replacement of transformers ಮಾಡುವುದಕ್ಕೆ ಸುಮಾರು 45 ದಿವಸಗಳು ಆಗುತ್ತಿದೆ. ಈಗ ಏನು Transformer Bank ಏನು ಮಾಡುತ್ತಿದ್ದಾರೆ ಈ ಬಗ್ಗೆ ತಕ್ಷಣ ಗಡಿಭಾಗದಲ್ಲಿರುವಂತಹ ತಾಲ್ಲೂಕುಗಳಿಗೆ ಬೇಗ ಮಾಡಬೇಕೆಂದು ಇದಕ್ಕೆ ಮಾನ್ಯ ಮಂತ್ರಿಗಳು ಸ್ಪಂದನೆ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಶಿವಾನಂದ ಎಸ್ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು, ಈ ಕಂಪನಿಗಳಿಗೆ ತಾವು ದುಡ್ಡು ಕೊಡಬೇಕಾಗಿದೆ, ನೀವು ಈ ಬಗ್ಗೆ Corpus Fund ಅನ್ನು ತಾವು create ಮಾಡಬೇಕು. ಇವರು ಕಂಪನಿಗಳಿಗೆ ದುಡ್ಡನ್ನು ಕೊಡುವುದಿಲ್ಲ. ಅವರು supply ಮಾಡಿದ ಮೇಲೆ ವರ್ಷಗಟ್ಟಲೇ ಅವರು ದುಡ್ಡು receive ಮಾಡಬೇಕಾಗುತ್ತದೆ. ಹೀಗಾಗಿ ಎಲ್ಲಾ ಕಂಪನಿಗಳಿಗೂ ಲಾಸ್ ಮೇಲೆ ನಡೆಯುತ್ತಿದೆ. ಉದಾಹರಣೆ ನಮ್ಮ ರೈತರಿಗೆ ಸಾಲ ಮನ್ನಾ ಮಾಡುತ್ತಾರೆ. ಅವರಿಗೆ ಮೂರರಿಂದ ನಾಲ್ಕು ವರ್ಷ ದುಡ್ಡು ಕೊಡುತ್ತಾರೆ.

ಅಧ್ಯಕ್ಷರು:– Corpus Fund ಮಾಡಿ ಎಂದು ಹೇಳುತ್ತೀರಿ.

ಶ್ರೀ ಶಿವಾನಂದ ಎಸ್ ಪಾಟೀಲ್:- Corpus fund ಮಾಡಿದರೆ ಎಲ್ಲಾ ಕಂಪನಿಗಳು profitನಲ್ಲಿ ಉಳಿಯುತ್ತದೆ. ಇಲ್ಲದೆ ಇದ್ದರೆ ಕಂಪನಿಯನ್ನು form ಮಾಡಿದ purpose defeat ಆಗಿ ಹೋಗುತ್ತದೆ. ಕೂಡಗಿ land losers ಬಗ್ಗೆ ನಿನ್ನೆಯ ದಿನ ಪ್ರಶ್ನೆಯನ್ನು ಕೇಳಿದ್ದೆ. ಆ land losers appointmentನಲ್ಲಿ ತಾವು ಅವರಿಗೆ weightage ಕೊಟ್ಟು recruitment ಮಾಡುವುದಕ್ಕೆ ಸ್ವಲ್ಪ ಬಿಲ್ ತಂದು ಆ ಬಗ್ಗೆ ಸಹಾಯ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದು ಅದರ ಬಗ್ಗೆ ತಾವು ಏನು ಪ್ರಸ್ತಾಪ ಮಾಡಲಿಲ್ಲ. ದಯಮಾಡಿ Hyderabad-Karnataka Areaದಲ್ಲಿ ಏನು Article 371(J) ನಲ್ಲಿ ಮಾಡಿದ್ದಾರೆ. ನಮ್ಮ ಕೂಡಗಿಯಲ್ಲಿ land losers ಇದ್ದಾರೆ Irrigation ಕೊಟ್ಟಿರುವುದು ಇರಬಹುದು, land bank ಮಾಡುವುದಕ್ಕೆ industrieಗೆಂದು ತೆಗೆದುಕೊಂಡಿದ್ದಾರೆ. ಎಲ್ಲಾ land losers ಗೆ weightage ಕೊಡುವ ಬಗ್ಗೆ ಒಂದು ಬಿಲ್ ಬಗ್ಗೆ amendment ತಂದು ಆ ಬಗ್ಗೆ ಪ್ರಸ್ತಾಪ ಮಾಡಬೇಕು.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ.:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸಮಗ್ರವಾಗಿ ಉತ್ತರ ಕೊಟ್ಟಿದ್ದಾರೆ. ನಮ್ಮ ಕೋಲಾರ ಜಿಲ್ಲೆಗೆ ನಿಮ್ಮನ್ನೇ ದೇವರೆ ಕಾಪಾಡಬೇಕೆಂದು ಮಾನ್ಯ ಸಚಿವರೆ ಹೇಳಿದ್ದಾರೆ. ನಮಗೆ ದೇವರು ಕಾಪಾಡುವುದು ಇರಲಿ, ನಮ್ಮ ಕಡೆಗೆ ಮಾನ್ಯ ಸಚಿವರು ತುರ್ತಾಗಿ ಗಮನಕೊಟ್ಟು ನಮ್ಮ ಜಿಲ್ಲೆಯನ್ನು ಕಾಪಾಡಬೇಕು. ನಮಗೆ 150 MW ಬೇಕು. ನಮಗೆ 85ರಿಂದ 90 ಮೆಗಾವ್ಯಾಟ್ supply ಆಗುತ್ತಿದೆ. ನಮ್ಮ ಭಾಗದಲ್ಲಿ ನಾವು ಪಂಪುಸೆಟ್ಟುಗಳನ್ನು ಹಾಕಿಕೊಂಡು ನೀರಾವರಿಯನ್ನು ಮಾಡುತ್ತಿದ್ದೇವೆ. ನಮಗೆ ಬೋರ್‌ವೆಲ್ ಬಿಟ್ಟರೆ ಬೇರೆ ದಾರಿ ಇರುವುದಿಲ್ಲ. ಹಾಗಾಗಿ ಮಾನ್ಯ ಸಚಿವರು ಕೋಲಾರ ಜಿಲ್ಲೆಗೆ ಏನು ಕೊರತೆ ಇದೆ ಇದರ ಬಗ್ಗೆ ಹೆಚ್ಚಿಗೆ ಗಮನಕೊಡಬೇಕು.

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಸಭಾಧ್ಯಕ್ಷರೆ, ಸೋಲಾರ್ ಪಂಪುಸೆಟ್ಟಿನ ಬಗ್ಗೆ ಮಾನ್ಯ ಸಚಿವರು announce ಮಾಡಿದ್ದಾರೆ. ಅದರ ಬಗ್ಗೆ ತುಂಬಾ ವಿವರಣೆ ಹಾಗೂ ಅದರ ಬಗ್ಗೆ ಮಾಹಿತಿ ಬೇಕಾಗಿದೆ. Farmers friendly scheme ಅನ್ನು ತಯಾರು ಮಾಡಿ workout ಮಾಡುತ್ತಿದ್ದೇವೆಂದು

ಹೇಳಿದ್ದೀರಿ. ಅವರಿಗೆ subsidize ಮಾಡುತ್ತೇವೆಂದು ಹೇಳಿದ್ದೀರಿ. ನೀವು policy frame ಮಾಡಿದ್ದೀರಿ. ಅದು ಇನ್ನು ಹೆಚ್ಚು ವ್ಯಾಪಕವಾಗಿ ಬರಬೇಕಾಗಿದೆ. ಅದರ ಬಗ್ಗೆ guidelines ಮತ್ತೊಂದು ಅದರ ಬಗ್ಗೆ ವಿವರವಾಗಿ ಬರಬೇಕಾಗಿದೆ.

ಅಧ್ಯಕ್ಷರು:– ಮಾನ್ಯ ಸಚಿವರು just announce ಮಾಡಿದ್ದಾರೆ. ಈಗಲೇ ಎಲ್ಲಾ ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಬಿ.ಆರ್. ಯಾವಗಲ್:– ಅದು 5 HP ವರೆಗೆ ಮಾತ್ರ ಅದನ್ನು subsidized ಮಾಡಿ encourage ಮಾಡುತ್ತೇವೆಂದು ಇದೆ. 5HP motorಗಳ ಸಂಖ್ಯೆ, 10HP motorಗಳ ಸಂಖ್ಯೆ ಆಧಾರಿತ ಇರುವುದನ್ನು ಹೆಚ್ಚು ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಆಮೇಲೆ ಸರ್ಕಾರದಿಂದ KPC ಗೆ ಸುಮಾರು ಆರು ಸಾವಿರ ಕೋಟಿ ರೂಪಾಯಿಗಳ subsidy ಕೊಡುತ್ತೇವೆಂದು ಹೇಳುತ್ತಾರೆ. ಇದರ ವಾತಾವರಣ ಹೇಗಿದೆ? Perception ಹೇಗಿದೆ ಎಂದರೆ ಎಲ್ಲಾ ರೈತರು ಸರಿಯಾಗಿ ಕೊಟ್ಟಿರುವುದಕ್ಕೆ ಹೋಗುತ್ತಿದೆ ಎಂದು ಇದೆ. ತಾವು ಹೇಳಬೇಕು ರೈತರು ಎಷ್ಟು 20% ಮಾಡುತ್ತಾರೋ, 25% ಮಾಡುತ್ತಾರೋ? ಯಾರಿಗೆ ಎಷ್ಟು ಕೊಡುವಿರಿ? ಯಾರಿಗೆ ಎಷ್ಟು shortage ಇತ್ತು. Industries ಗೆ ಎಷ್ಟು ಕೊಟ್ಟಿದ್ದೀರಿ ಅದರ ಬಗ್ಗೆ ಕೂಡ ಸ್ವಲ್ಪ ವಿವರಣೆಯನ್ನು ಕೊಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಕೆಲವು suggestions ಕೊಟ್ಟಿದ್ದೆ. 250KV, 100KV, 63KV transformers ಅನ್ನು ಬದಲಾಯಿಸಿ ಪ್ರತಿಯೊಂದು 25 ಮಾಡಬೇಕೆಂದು ಹೇಳಿದ್ದೆ. ಅದರ ಬಗ್ಗೆ ಮಂತ್ರಿಗಳು ಉತ್ತರ ಹೇಳಲಿಲ್ಲ. ಇನ್ನೊಂದು 40–50 ವರ್ಷ ಹಳೆಯದಾಗಿರುವಂಥ conductors wire ಹರಿದು ಬಿದ್ದು ನಾಲ್ಕು – ಆರು ಜನ ಸಾಯುತ್ತಿದ್ದಾರೆ. ಅವರಿಗೆ ಮೂರು ದಿನಗಳಲ್ಲಿ ಪರಿಹಾರ ಕೊಡಬೇಕೆಂದು ನಾನು ಹೇಳಿದ್ದೆ. ಅದರ ಬಗ್ಗೆ ಉತ್ತರ ಹೇಳಲಿಲ್ಲ. ಆಮೇಲೆ Staff appointment 7000 ಜನ Linemen ಇಲ್ಲ, 500 ಜನ ಇಂಜಿನಿಯರ್ಸ್ ಇಲ್ಲ. ಪ್ರತಿಯೊಂದು division ನಲ್ಲಿ stores ಇರಬೇಕು. ಪ್ರತಿ ವಿಭಾಗದಲ್ಲಿ stores ಇಲ್ಲ. ಅದಕ್ಕೆ ಏನು

ಮಾಡುತ್ತಾರೆ ಹೇಳಬೇಕು. IP set ಗೆ ಪ್ರತಿ ದಿವಸ 8 ಗಂಟೆಗಳ ಕಾಲ 3 ಫೇಸ್ line ಕೊಡಬೇಕೆಂದು ಹೇಳಿದ್ದೆ. ಇಷ್ಟು ಮಾಹಿತಿಯನ್ನು ಕೇಳಿದ್ದೆನು.

ಶ್ರೀ ಬಾದರ್ಲಿ ಹಂಪನಗೌಡ:– 40000 ಪಂಪ್ ಸೆಟ್ ಬೇಕೆಂದು ರೈತರು ಮಾನ್ಯ ಮುಖ್ಯಮಂತ್ರಿಗಳನ್ನು, ಇಂಧನ ಸಚಿವರನ್ನು delegation ಮಾಡಿ....

ಅಧ್ಯಕ್ಷರು:– ಅದೆಲ್ಲಾ ಬೇಡ, ಏನಾಗಬೇಕು ಹೇಳಿ.

ಶ್ರೀ ಬಾದರ್ಲಿ ಹಂಪನಗೌಡ:– Slab system introduce ಮಾಡಿ 10 ಸಾವಿರ 12 ಸಾವಿರ slab ಮಾಡಿ ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಪಿಳ್ಳೆ ಮುನಿಶಾಮಪ್ಪ:– ದೇವನಹಳ್ಳಿ ತಾಲ್ಲೂಕಿನಲ್ಲಿ ನಾಯಕ್, AEE suspend ಆಗಿ ಒಂದೂವರೆ ತಿಂಗಳಾಯಿತು. ಈವರೆಗೆ ಅಲ್ಲಿಗೆ ಹೊಸಬರನ್ನು ಹಾಕಿಲ್ಲ. ದೊಡ್ಡಬಳ್ಳಾಪುರದಲ್ಲಿ lady AEE ಒಬ್ಬರನ್ನು ಹಾಕಿದ್ದಾರೆ. ಅವರು maintain ಮಾಡಲಿಕ್ಕಾಗುತ್ತಿಲ್ಲ. ಆದರೆ ವಿಜಯಪುರದಲ್ಲಿ ಒಬ್ಬ JE ಮೇ 26 ರಿಂದ ಜೂನ್ 2ನೇ ತಾರೀಖಿನವರೆಗೆ ಕೆಲಸಕ್ಕೆ ಹಾಜರಾಗಿಲ್ಲ. ಅವರ್‍ಯಾರು ಕೂಡ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿಲ್ಲ. ಅದನ್ನು ಜೆರಾಕ್ಸ್ ಮಾಡಿ ಇಲಾಖೆಗೆ ಕಳುಹಿಸಿದ್ದೇನೆ, ಇವತ್ತಿನವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು:– ಅವನ್ನೆಲ್ಲಾ ಸ್ವಲ್ಪ ಬರೆದುಕೊಳ್ಳಿ.

ಶ್ರೀ ಪಿಳ್ಳೆ ಮುನಿಶಾಮಪ್ಪ:– ಅಧ್ಯಕ್ಷರೆ, ನಮ್ಮದು ಗಂಗಾ ಕಲ್ಯಾಣ ಯೋಜನೆಯಲ್ಲಿ ಮೂರು ವರ್ಷದಿಂದ ನಮಗೆ ವ್ಯವಸ್ಥೆಯಾಗಿಲ್ಲ, SC Constituency ಯಲ್ಲಿ ಬಹಳಷ್ಟು ಜನ ಪರಿಶಿಷ್ಟ ಜಾತಿ/ಪಂಗಡದವರು ಇರುವಂಥ ದೇವನಹಳ್ಳಿಯಲ್ಲಿ ಅತಿ ಹೆಚ್ಚಿನ ಗಂಗಾ ಕಲ್ಯಾಣ ಯೋಜನೆ ಇದೆ ಅದಕ್ಕೆ ಅವಕಾಶ ಮಾಡಿಕೊಡಬೇಕು. 1912 ಎಂದು ಒಳ್ಳೆಯ ಕೆಲಸವೇನು ಮಾಡಿದ್ದಾರೆ, ಆದರೆ ಒಬ್ಬ JE, AEE ನೋಡಿಲ್ಲವೆಂದರೆ ಒಬ್ಬ lineman ಯಾವರೀತಿ ಕೆಲಸ ಮಾಡುವುದಕ್ಕೆ ಅವಕಾಶ ಆಗುತ್ತದೆ ಹೇಳಬೇಕು.

ಅಧ್ಯಕ್ಷರು:– ಇನ್ನು ಈಗ introduce ಮಾಡಿದ್ದಾರೆ.

ಶ್ರೀ ಪಿಳ್ಳೆ ಮುನಿಶಾಮಪ್ಪ:– ಇದರ ಬಗ್ಗೆ ಕ್ರಮ ತೆಗೆದುಕೊಂಡು ಅವರಿಗೆ punishment ಮಾಡಬೇಕು. ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಇರುವ ಏರಿಯಾದಲ್ಲಿ ಕರೆಂಟ್ ಇರುತ್ತದೆ. ಅದರ ಸುತ್ತಮುತ್ತಲು ಇರುವ ಭೂಮಿ ಕೊಟ್ಟಿರುವ ನಮಗೆ ಕರೆಂಟ್ ಇಲ್ಲ. ಹಾಗಾಗಿ ವಿಶೇಷವಾದ ಯೋಜನೆಯನ್ನು ದೇವನಹಳ್ಳಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ನಾನು ಓಟಿಗೆ ಹಾಕಿಬಿಡುತ್ತೇನೆ ನೋಡಿ.

ಶ್ರೀ ಪಿ. ರಾಜೀವ್:– ನಿರಂತರ ಜ್ಯೋತಿ ಯೋಜನೆ ಕಾಮಗಾರಿಗಳು ಎಲ್ಲಾ ಕಡೆ ಬಂದ್ ಆಗಿವೆ. ಆಂಧ್ರದ ಟೆಂಡರ್‌ಗಳು ಎಂದು ಅವರು ಹೋಗಿಬಿಟ್ಟಿದ್ದಾರೆ. ಅದಕ್ಕೆ re-tender ಮಾಡುತ್ತಾರೋ ಅಥವ ಅದಕ್ಕೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಆನಂತರ 30 ವರ್ಷಗಳಷ್ಟು ಹಳೆಯದಾಗಿರುವ ಎಲ್ಲಾ conductors ಅನ್ನು ಬದಲು ಮಾಡಲಿಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು:– ಸಾಕು, ಸಚಿವರು ಉತ್ತರ ಹೇಳಿ,

(ಗೊಂದಲ)

(ಈ ಹಂತದಲ್ಲಿ ಜೆಡಿಎಸ್ ಪಕ್ಷದ ಹಲವು ಮಾನ್ಯ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

ಅಧ್ಯಕ್ಷರು:– ಹೇಳಿ, ಉತ್ತರ ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಾನು ಮಂತ್ರಿಗಳನ್ನು ಕೇಳುವಂಥದ್ದು ನಿನ್ನೆ ಸುದೀರ್ಘವಾಗಿ ಎಲ್ಲಾ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ಸದನದಲ್ಲಿ ಬಹುಶಃ ಎಲ್ಲಾ ಸದಸ್ಯರ ಒಕ್ಕೊರಲಿನ ಅಭಿಪ್ರಾಯ ಇದೆ ಅಧ್ಯಕ್ಷರೆ, ಇವತ್ತೇನು ಕಳೆದ 15–20 ವರ್ಷಗಳಿಂದ

ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವಂಥ ವಿಷಯದಲ್ಲಿ, ಅದರೊಂದಿಗೆ ವಿದ್ಯುತ್ ಅನ್ನು ಖರೀದಿ ಮಾಡುವ ವಿಷಯದಲ್ಲಿರಬಹುದು, ಅದರ ಜೊತೆಯಲ್ಲಿ ನಾವು Central grid ನಿಂದ ಆ 50.5 frequency hertz ನಲ್ಲಿ current ಅನ್ನು ಈ ಕಡೆ ತೆಗೆದುಕೊಂಡಿದ್ದೇವೆ. ನಮ್ಮ ಅಧಿಕಾರಿಗಳು ನಮ್ಮ ಇಲಾಖೆಯಲ್ಲಿ ಕೆಲಸ ಮಾಡಿದ್ದಾರೆ. ಇವೆಲ್ಲದರ ಬಗ್ಗೆ ಸವಿಸ್ತಾರವಾಗಿ ಸತ್ಯ ಹೊರಬರಬೇಕಾಗಿದೆ. ನಾನು COD, CBI ಬೇಕಾಗಿಲ್ಲ, ಸದನದ ಸಮಿತಿ ರಚನೆ ಆಗಬೇಕೆಂದು ಹೇಳಿದ್ದೇನೆ. ನಮ್ಮ ಮಂತ್ರಿಗಳು ಇವತ್ತು ಬೇರೆಯವರಿಗೆ ಉತ್ತರ ಕೊಟ್ಟಿದ್ದಾರೆ. ಇನ್ನು ಆರು ತಿಂಗಳುಗಳ ಕಾಲ ಕಾಯುತ್ತೇವೆ. ನೋಡೋಣ, ಎಷ್ಟರಮಟ್ಟಿಗೆ ಸಮರ್ಪಕವಾಗಿ ಮಾಡುತ್ತಾರೆ. ಇವತ್ತಿನವರೆಗೆ ಸದನ ಸಮಿತಿ ಆಗಬೇಕೆಂಬ ನಮ್ಮ demand ಇದೆ. ಅದನ್ನು ಘೋಷಣೆ ಮಾಡಬೇಕು.

ಶ್ರೀ ಜಿ.ಟಿ. ಪಾಟೀಲ್:– Linemanಗಳಿಗೆ education 7th Std., ನಿಗದಿಪಡಿಸಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ನಮ್ಮ ಉಪಗ್ರಾಮಗಳಲ್ಲಿ ಒಂದೊಂದು ಲೈನ್, ಎಡರು ಲೈನ್‌ಗಳಲ್ಲಿ ಕರೆಂಟ್ ತಂಟಣಚಿಂಜ ಇಲ್ಲ. ಮುಟ್ಟಿದರೂ ಶಾಕ್ ಹೊಡೆಯುವುದಿಲ್ಲ. ನಮ್ಮಲ್ಲಿ ಸರಿಯಾಗಿ ಕರೆಂಟ್ ಕೊಟ್ಟಿಲ್ಲ. ಯಾರು ನೋಡುತ್ತಿಲ್ಲ. ನಮ್ಮಲ್ಲಿ ಬೋಎದವೆಲ್ ಹಾಕಿಸಿಕೊಂಡಿರುವವರು ಅವಿದ್ಯಾವಂತರು ಇದ್ದಾರೆ.

ಅಧ್ಯಕ್ಷರು:– ಆಯಿತು, ಹಾಗಲ್ಲ ಕೇಳುವುದು?

ಶ್ರೀ ಕೆ. ಶಿವಮೂರ್ತಿ:– ಹಾಗಲ್ಲ, ಕೇಳಿ ಸರ್ ಒಂದು ನಿಮಿಷ ದಯವಿಟ್ಟು ಕೇಳಿ.

ಅಧ್ಯಕ್ಷರು:– ಸುಮ್ಮನೆ ಏನೇನೋ ಹೇಳಬೇಡಿ, ನೀವು ಿಜಖಿಜಿಥಿ ಆಗಿ ಎಲ್ಲಿ ಎಂದು ಕೇಳಿ.

ಶ್ರೀ ಕೆ. ಶಿವಮೂರ್ತಿ:– ಈಗ ಹಟ್ಟಿಗಳು, ಉಪ ಗ್ರಾಮಗಳು ಇರತಕ್ಕಂಥ ಪ್ರದೇಶದಲ್ಲಿ ಯಾರೂ ನೋಡುತ್ತಿಲ್ಲ.

ಅಧ್ಯಕ್ಷರು:– ಇದು ಪ್ರಶ್ನೆಯೇ?

ಶ್ರೀ ಕೆ. ಶಿವಮೂರ್ತಿ:– ಅದಕ್ಕೋಸ್ಕರ ಇದಕ್ಕೆ ವಿಶೇಷವಾಗಿ ಏನಾದರೂ ಪಾಲಿಸಿ ಮಾಡುವಿರಾ? ನಿಯಮ ಮಾಡುವಿರಾ?

ಅಧ್ಯಕ್ಷರು:– ನಮ್ಮಲ್ಲಿಯೂ ಕೆಲವು ಹಟ್ಟಿಗಳಿವೆ, ತೋರಿಸಲೇ?

ಶ್ರೀ ಕೆ. ಶಿವಮೂರ್ತಿ:– ನಮ್ಮಲ್ಲಿ ಕರೆಂಟ್ ಇಲ್ಲ, ತಂಟಣಚಿಂಜ ಜಾಸ್ತಿಯಾಗುತ್ತಿದೆ. ಅಲ್ಲಿ ಯಾರೂ ನೋಡುತ್ತಿಲ್ಲ, ಅದಕ್ಕೋಸ್ಕರ ಒಂದು ನೀತಿ ನಿಯಮವನ್ನು ಮಾಡಿ ಅದಕ್ಕೆ ವಿಶೇಷವಾಗಿ ಇರತಕ್ಕಂಥ ಪ್ರಾಧಾನ್ಯತೆಯನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ನಮ್ಮಲ್ಲಿ ದಾಗಿನಕಟ್ಟೆಯಲ್ಲಿ ಈಗಿನವರೆಗೆ ಕೆರೆಂಟ್ ಇಲ್ಲ. ಕೊನೆ ಗ್ರಾಮಗಳಲ್ಲಿ ಕರೆಂಟ್ ಇಲ್ಲ. ನೀವು sub station ಮಾಡಬೇಕು. ದಾಗಿನಕಟ್ಟೆಯಲ್ಲಿ ಈಗಿನವರೆಗೆ ಕರೆಂಟ್ ಇಲ್ಲ.

ಅಧ್ಯಕ್ಷರು:– ಎಲ್ಲಿ? ಒಂದು ವೇಳೆ ಇದ್ದರೆ ನಾನೇ ಅಲ್ಲಿಗೆ ಹೋಗುತ್ತೇನೆ.

ಶ್ರೀ ಕೆ. ಶಿವಮೂರ್ತಿ:– ಬನ್ನಿ ಸರ್, ಸಿದ್ದೇಶ್ವರನಗರದ ಸಣ್ಣ ಗ್ರಾಮವದು. ದಾಗಿನಕಟ್ಟೆಗೆ ಈಗಲೇ ಹೋಗೋಣ.

ಅಧ್ಯಕ್ಷರು:– ಮಂತ್ರಿಗಳು ಉತ್ತರ ಹೇಳಿ,

ಶ್ರೀ ವೈ.ಎಸ್.ವಿ. ದತ್ತಾ:– ಸಭಾಧ್ಯಕ್ಷರೆ, KPCL ನಲ್ಲಿ ಈಗ ನೀವು ನೇರ ನೇಮಕಾತಿಯಿಂದ ಉದ್ಯೋಗ ಕಲ್ಪಿಸಲಿಕ್ಕೆ, ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. KPCL ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಮುಖ್ಯಮಂತ್ರಿಗಳಿರುವುದರಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. KPCL ನಲ್ಲಿ ನೇರ ನೇಮಕಾತಿ ಮಾಡಿಕೊಂಡರೆ ನಿಜವಾಗಲೂ ಕೂಡ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿರುವಂಥ ಪ್ರತಿಭೆಗಳಿಗೆ ತೊಂದರೆಯಾಗುತ್ತದೆ. ಅವರು ಅವಕಾಶ ವಂಚಿತರಾಗುತ್ತಾರೆ, ದಯವಿಟ್ಟು

ಅವರಿಗೆ ಲಿಖಿತ ಪರೀಕ್ಷೆ ಮಾಡಿ ಅವರಿಗೆ ನೇಮಕಾತಿ ಮಾಡಬೇಕು. ಆಗ ಮಾತ್ರ ಗ್ರಾಮಾಂತರ ಪ್ರದೇಶದಲ್ಲಿರುವ ಪ್ರತಿಭೆಗಳಿಗೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):- ಈಗ ಮಾನ್ಯ ಸದಸ್ಯರಾದ ನಾಡಗೌಡರು energy audit ಅದರ ಸೋರಿಕೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. Complete Audit ನಲ್ಲಿ ಈಗಾಗಲೇ ಒಂದು level ಅನ್ನು ತಲುಪಿದ್ದೇವೆ. ಮುಂದೆ ಏನು suggestions ಕೊಡುತ್ತಾರೆ ಅದನ್ನು ಖಂಡಿತ ನಾವು ಗಮನಿಸುತ್ತೇವೆ. ನ್ಯಾಮಗೌಡರು allotment ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಿಮಗೆ ಪ್ರತಿ ಕ್ಷೇತ್ರವಾರು ಬೇಕಾಗಿರುವ ಸೌಲಭ್ಯವನ್ನು ಕಲ್ಪಿಸುತ್ತೇವೆ. ಏಕೆಂದರೆ power ಇದ್ದರೆ ಯಾರು power ಇಲ್ಲವೆನ್ನುವುದಿಲ್ಲ. Problem ಆದಂಥ ಸಂದರ್ಭದಲ್ಲಿ allotment ಕಡಿಮೆಯಾಗುತ್ತದೆ. ಆದಷ್ಟು ನ್ಯಾಯವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನಿಸುತ್ತೇವೆ. ಏಕೆಂದರೆ ನಿಮ್ಮಲ್ಲಿಯೂ ಸಹ ಜಾಸ್ತಿ demand ಇವೆ. ನಿಮ್ಮಲ್ಲಿಯೂ ಕೂಡ progressive farmers ಜಾಸ್ತಿ ಇದ್ದಾರೆ. ವಿಪರೀತ demand ಇದೆ. ನಿಮ್ಮದು river bed area ಆಗಿದೆ. ಖಂಡ್ರೆಯವರು major repair centres ಬಗ್ಗೆ allotment ಮಾಡುವ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ನಿಜವಾಗಲೂ ಕೂಡ ಮೂರು ನಾಲ್ಕು ಬಾರಿ ಅವರು ನನಗೆ ಬಂದು ಹೇಳಿದ್ದಾರೆ. ಅದರ ಬಗ್ಗೆ personal attention ಕೂಡ ನಾನು ಈಗಾಗಲೇ ಕೊಟ್ಟಿದ್ದೇನೆ. ಖಂಡಿತವಾಗಿಯೂ ಮುಚ್ಚಿ ಹೋಗಿರುವ repair centers ಅನ್ನು ತೆರೆಸುತ್ತೇವೆ. ತಾವು ಯಾವುದಾದರೂ ಇದ್ದರೆ ಹೇಳಿ. Definitely ನಮ್ಮ ಪಾಲಿಸಿ ಎಲ್ಲಾ ಕಡೆಯಲ್ಲಿಯೂ repair centres ಆಗಬೇಕೆಂದು ಹೇಳಿ ಮಾಡಿರುವುದು. Repair ಆಗದಿದ್ದರೆ loss ಆಗುತ್ತದೆ. ಅದಕ್ಕೆ 50 transformers ಗಿಂತ ಹೆಚ್ಚು ಬೇಕೆಂದು ಕೆಲವು ಬೇಡಿಕೆ ಇದೆ. ಅದಕ್ಕೆ ನಾವು ಯಾವರೀತಿ compensate ಮಾಡಲಿಕ್ಕೆ ಸಾಧ್ಯವೆಂದು we are already thinking. ಶಿವಾನಂದ ಪಾಟೀಲರು corpus fund ಮಾಡಬೇಕು, Employment generation ಮಾಡಬೇಕು. ಈ ಕೂಡಲೇ land losers ಬಗ್ಗೆ ಕ್ರಮ ಕೈಗೊಳ್ಳುವಂತೆ ಏನು ಹೇಳಿದ್ದಾರೆ. ಅದರ ಬಗ್ಗೆ Central Government

ಬಳಿ I will take up that subject. ಏಕೆಂದರೆ ಕೆಲವು policy ಇದೆ, ನಾನು ಅದನ್ನು ಖಂಡಿತ ತೆಗೆದುಕೊಳ್ಳುತ್ತೇನೆ. corpus fund ಬಗ್ಗೆ ಕೂಡ ಏನು ಮಾಡಲಿಕ್ಕೆ ಸಾಧ್ಯವೆಂದು ನಾನು ನೋಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್:- ಈ ದೇಶದಲ್ಲಿ 25 ಕಂಪೆನಿಗಳು ಮಾತ್ರ ನಷ್ಟದಲ್ಲಿವೆ, ಏಕೆ ನಷ್ಟದಲ್ಲಿವೆ ಎನ್ನುವುದಕ್ಕೆ ನೀವು ಸ್ವಲ್ಪ ಅದನ್ನು ಆಡಿಟ್ ಮಾಡಿಸಿ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):- ಬಂಗಾರಪೇಟೆ ಶಾಸಕರು ಅನೇಕ ಸಮಸ್ಯೆಗಳನ್ನು ಹೇಳಿದ್ದು, ಖಂಡಿತ ಅದನ್ನು ಕೂಡ ಗಮನಿಸಿದೆ. ಮಾನ್ಯ ಗೋವಿಂದ ಕಾರಜೋಳರವರು major ಆಗಿ employment ವಿಚಾರದಲ್ಲಿ ನನ್ನ ಗಮನವನ್ನು ಸೆಳೆದಿದ್ದಾರೆ, ಪಾಲಿಸಿ ವಿಚಾರದಲ್ಲಿ ಸರಿಯಾಗಿ ಇಂಜಿನಿಯರ್ಸ್ ಅನ್ನು ತೆಗೆದುಕೊಳ್ಳುತ್ತಿಲ್ಲ ಮತ್ತು system improvement ವಿಚಾರದಲ್ಲಿ filling up post ಬಗ್ಗೆ ಹೇಳಿದ್ದು, employment ಆದಷ್ಟು ಬೇಗ fill up ಮಾಡುವ ವ್ಯವಸ್ಥೆ ಮಾಡುತ್ತೇವೆ. ಅವರು ಹೇಳಿದ ಹಾಗೆ ನಿನ್ನೆ ನಾನು ಹೇಳಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- Divisional level stores ಬಗ್ಗೆ ಕೂಡ ಹೇಳಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್:- Divisional level stores ಈ ಬಗ್ಗೆ ಕೂಡ I will think and I will examine. KPCL direct employment ಏನಾಗಿದೆಯೆಂದರೆ, fill up ಮಾಡಬೇಕು ಬಹಳ ಗೊಂದಲವಿದೆ. KPSC ಯನ್ನು ನೀವು ನೋಡಿದ್ದೀರಿ. ಅದಕ್ಕೋಸ್ಕರ ನಾವು ಯಾರ marks ಜಾಸ್ತಿ ಇರುತ್ತದೆಂದು ನೋಡಿ marks ಮೇಲೆ Merit ಮಾಡಬೇಕೆಂದು direct ಆಗಿ ಕರೆದಿದ್ದೇವೆ. I fully agree with you. ಆ ಭಾಗದವರೆಲ್ಲಾ.....

ಶ್ರೀ ವೈ.ಎಸ್.ವಿ. ದತ್ತಾ:- Town ನಲ್ಲಿ ವ್ಯಾಸಂಗ ಮಾಡಿದವರೆಲ್ಲಾ 70% 80% employment ತೆಗೆದುಕೊಳ್ಳುತ್ತಿದ್ದಾರೆ. ಹಳ್ಳಿ ಮಕ್ಕಳೆಲ್ಲಾ ಏನು ಮಾಡಬೇಕು?

ಶ್ರೀ ಡಿ.ಕೆ. ಶಿವಕುಮಾರ್:- ನಾವು ಒಂದು ವಿಷಯ ಹೇಳುತ್ತೇನೆ ಕೇಳಿ. ಲೈನ್‌ಮ್ಯಾನ್ ಒಂದನ್ನೇ ಲೆಕ್ಕ ಹಾಕಿಕೊಳ್ಳಿ.

ಶ್ರೀ ವೈ.ಎಸ್.ವಿ. ದತ್ತಾ:- ಲೈನ್‌ಮ್ಯಾನ್ ಕೂಡ ಹಾಗೇ ಆಗಿದೆ.

ಶ್ರೀ ಡಿ.ಕೆ. ಶಿವಕುಮಾರ್:- ಮಂಡ್ಯ, ರಾಮನಗರ, ಮೈಸೂರು, ಹಾಸನ ಕಡೆಗಳಲ್ಲೆಲ್ಲಾ 50% 60% ತೆಗೆಯುವಷ್ಟರಲ್ಲಿ ಸುಸ್ತು, ಈ ಕಡೆಗಳಲೆಲ್ಲಾ 85%, 88%, 90% ತೆಗೆಯುತ್ತಾರೆ, ಮೊನ್ನೆ 84%, 85% interview ಕಳುಹಿಸಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:- ಕಂಬವನ್ನು ಹತ್ತುವವನು ಹಳ್ಳಿಯವನು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಜಿಲ್ಲಾ ಮಟ್ಟದ recruitment ಮಾಡಿ. ಈ ರೀತಿ ಮಾಡಿದರೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಬಳ್ಳಾರಿಯಲ್ಲಿ 40% ರಷ್ಟು ಲೈನ್‌ಮ್ಯಾನ್‌ಗಳಿರುವುದು ಹೆಚ್ಚು ಲೈನ್‌ಮ್ಯಾನ್ ಮಾಡಿದರೆ ಒಳ್ಳೆಯದು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ರೇವಣ್ಣ........ ಎಲ್ಲಿ ಎದೆ ಮೇಲೆ ಬಿದ್ದುಬಿಡುತ್ತದೋ ಎಂಬ ಭಯ ಕುಮಾರಸ್ವಾಮಿಯವರೆ, ಅದನ್ನೇ ದೊಡ್ಡ scandal ಮಾಡಿದರೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ದಯವಿಟ್ಟು direct recruitment ಬೇಡ. Return test ಮಾಡಿ ಇಲ್ಲವಾದರೆ ಹಳ್ಳಿ ಮಕ್ಕಳಿಗೆ ಅನ್ಯಾಯವಾಗುತ್ತದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಸಚಿವರೆ, ಸಲಹಾ ಮಂಡಳಿ ಬಗ್ಗೆ ನಾಳೆ ಹೇಳುತ್ತೇನೆ ಎಂದು ಹೇಳಿದ್ದೀರಿ ಹೇಳಿ.

ಶ್ರೀ ಕೆ. ಶಿವಮೂರ್ತಿ:– ಕೊನೆ ಗ್ರಾಮಗಳ ಬಗ್ಗೆ ಹೇಳಿ ಸರ್.

ಶ್ರೀ ವೈ.ಎಸ್.ವಿ. ದತ್ತಾ:– ಗ್ರಾಮೀಣ ವಿದ್ಯುತ್ ಪ್ರತಿನಿಧಿಗಳು ಹಳ್ಳಿಗಳಲ್ಲಿ electric bill collect ಮಾಡುತ್ತಾರೆ. ಅವರೆಲ್ಲಾ ಬೀದಿ ಪಾಲಾಗುತ್ತಾರೆ.

ಶ್ರೀ ವಿಜಯಾನಂದ್ ಕಾಶಪ್ಪನವರ್:– ಜಿಲ್ಲಾ ಮಟ್ಟದಲ್ಲಿ ಮಾಡಿದರೆ ಒಳ್ಳೆಯದು.

ಶ್ರೀ ಡಿ.ಕೆ. ಶಿವಕುಮಾರ್:– We will look into it. ಗ್ರಾಮೀಣ ಪ್ರದೇಶದಲ್ಲಿರುವ ಬಿಲ್ ಪ್ರತಿನಿಧಿಗಳ ಬಗ್ಗೆ ಹೇಳಬೇಕೆಂದರೆ, ಅದಕ್ಕೆ ಈಗಾಗಲೇ Chief Minister ಬೆಸ್ಕಾಂ ಎಂ.ಡಿ.ಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ಮೊನ್ನೆ ಬೆಳಗಾಂ Session ನಲ್ಲಿ ನೀವೆಲ್ಲಾ ಪ್ರಸ್ತಾವನೆ ಮಾಡಿದ್ದು, Committee 2, 2, 4 ಸಭೆ ಕೂಡ ಆಗಿದೆ. ಸಮಿತಿ ಏನು report ಕೊಡುತ್ತದೆಂದು ನೋಡೋಣ. ಮಧ್ಯೆ ಏನಾಗಿದೆಯೆಂದರೆ, ಶ್ರೀ ರೇವಣ್ಣನವರು ಮೂರು ಬ್ಯಾಚ್ ಇಂಜಿನಿಯರ್ ಮಾಡಿದರು ಎರಡು ಬ್ಯಾಚ್ permanent ಆಯಿತು. ಒಂದು ಬ್ಯಾಚ್‌ನವರನ್ನು ಮಾಡುವುದಕ್ಕಾಗಿಲ್ಲ. ಅವರಿಗೂ ಕೂಡ advertisement ಕೊಟ್ಟಿದೆ ನೀವು ಸ್ವಲ್ಪ ಜನ ಕುಂಟರು, ಕುರುಡರನ್ನು ಕೊಟ್ಟಿದ್ದು ಅದು ಕೂಡ ಇತ್ತು. ನ್ಯಾಯಾಲಯದ ವಿಚಾರ ಅಡ್ಡ ಬರುತ್ತಿದೆ. ಉಮಾದೇವಿ ಮತ್ತೊಂದು Judgment ಎಂದು ಮುಂದಕ್ಕೆ ಹೋಗುತ್ತಿದೆ. 15 ವರ್ಷಗಳ ಕಾಲ ಕಾರ್ಯನಿರ್ವಹಿಸಿರುವವರನ್ನು ತೆಗೆದುಕೊಳ್ಳುವುದಕ್ಕೆ ನಮಗೇನು ತೊಂದರೆಯಿಲ್ಲ. we are just making for all the possibilities ಏನಾದರೂ ಮಾಡಿ ಸಹಾಯ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಈಗ ಕರೆದಿದ್ದೇವೆ. ಇನ್ನೂ ಸಾವಿರಾರು posts ಇದೆ. ಇನ್ನೂ ನಾಲ್ಕೈದು ಸಾವಿರ ಇಂಜಿನಿಯರ್‌ಗಳನ್ನು ತೆಗೆದುಕೊಳ್ಳುವ ಅವಕಾಶವಿದೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಜೊತೆ ಸಮಾಲೋಚನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್:- ಖಂಡಿತ, ಮಾನ್ಯ ಶಿವಮೂರ್ತಿಯವರೆ, ದಟ್ಟನಕಟ್ಟೆ last tale end ಎಂದು ಹೇಳಿದ್ದೀರಿ ಅಲ್ಲಿಗೇನು power ಆಗಬೇಕು ಆ ಬಗ್ಗೆ don't worry we will see that all villages will be electrified.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಸಚಿವರೆ, ಸಲಹಾ ಮಂಡಳಿ ಬಗ್ಗೆ ಹೇಳಿ. ಸಲಹಾ ಮಂಡಳಿ ಬಗ್ಗೆ ಉತ್ತರ ಹೇಳಲಿಲ್ಲ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:- ಮಾಡಿಸುತ್ತೇವೆ. ಅದು ಆಯಿತಲ್ಲ. ಆದರೆ ನೀವು ಇರಲಿಲ್ಲ. ನಿಮ್ಮ ಹೆಸರನ್ನು ಹೇಳಿ we will consider your request.

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ, ಮಲೆನಾಡಿನಲ್ಲಿ ಲೋಡ್ ಶೆಡ್ಡಿಂಗ್ ಬೇಡ. ಇಲ್ಲಿ ಮಳೆ ಬಂದು.....

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಈಗ ಅಲ್ಲಿ ಆನೆಗಳ ಕಾಡ ಇದೆ. ಮಾನ್ಯ ನಿಂಗಯ್ಯರವರು ಹೇಳಿದ ಹಾಗೆ ಅಲ್ಲಿ ಲೋಡ್ ಶೆಡ್ಡಿಂಗ್ ಬೇಡ.

ಶ್ರೀ ಡಿ. ಮಾನಪ್ಪ ವಜ್ಜಲ್:- ತಮಗೆ ಕೈಮುಗಿದು ಕೇಳುತ್ತೇನೆ. ದಯವಿಟ್ಟು ನನಗೆ ಒಂದು ಅವಕಾಶ ಕೊಡಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:- ನಾನು ಬಹಳ ವ್ಯಾಪಕವಾಗಿ ತೆರೆದ ಮನಸ್ಸಿನಿಂದ ಹೇಳುತ್ತಿದ್ದೇನೆ. ನಾನೇನು ಇಲ್ಲಿ hide ಮಾಡುವುದಕ್ಕೆ ಹೋಗಿಲ್ಲ. ಅದರ ಅವಶ್ಯಕತೆ ಕೂಡ ಇಲ್ಲ. ನಮಗೂ ಕೂಡ I Know my responsibility ಬಹಳ ವಿಶ್ವಾಸದಿಂದ ಹೇಳುತ್ತಿದ್ದೇನೆ. ಮಾನ್ಯ ಕುಮಾರಸ್ವಾಮಿಯರು ನಿಮಗೆ ಆರು ತಿಂಗಳ ಸಮಯ ಕೊಡುತ್ತೇನೆಂದು ಹೇಳಿದರು. Definitely ಅವರ

ನಂಬಿಕೆಯಂತೆ ನಡೆದುಕೊಂಡು ಹೋಗುವುದಕ್ಕೆ ಪ್ರಯತ್ನಪಡುತ್ತೇನೆ. ಎಲ್ಲರೂ ಸಹಕಾರ ಕೊಡಬೇಕೆಂದು ಮನವಿ ಮಾಡುತ್ತೇನೆ.

(ಗೊಂದಲ)

ಶ್ರೀ ಮಾನಪ್ಪ ಡಿ. ವಜ್ಜಲ್:– ಮಾನ್ಯ ಅಧ್ಯಕ್ಷರೆ, ನನಗೆ ಒಂದೇ ನಿಮಿಷ ಕಾಲಾವಕಾಶ ಕೊಡಿ ಮಾತನಾಡಬೇಕಾದ ಅವಶ್ಯಕತೆಯಿದೆ.

(ಗೊಂದಲ)

ಅಧ್ಯಕ್ಷರು:– 2014–15ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

> "31ನೇ ಮಾರ್ಚ್ 2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 24 ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು."

ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು 'ಇಲ್ಲ' ಎಂದು ಸೂಚಿಸಬೇಕು.
ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.
ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ
ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

(ಈ ಹಂತದಲ್ಲಿ ಜ್ಯಾತ್ಯಾತೀತ ಜನತಾ ದಳದ ಮಾನ್ಯ ಶಾಸಕರುಗಳು ಬಾವಿಗೆ ಬಂದರು)

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸದನದ ಸಮಿತಿಯನ್ನು ಘೋಷಣೆ ಮಾಡಲಿಲ್ಲವೆಂದರೆ ಪ್ರತಿಭಟನೆ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ಸದನದ ಸಮಿತಿಯ ಬಗ್ಗೆ ಏನನ್ನೂ ಹೇಳಿಲ್ಲ. ಚಕಾರವೆತ್ತಿಲ್ಲ. ಸದನ ರಚನೆ ಆಗಲೇಬೇಕು.

(ಗೊಂದಲ)

2) 2014–15ನೇ ಸಾಲಿನ ಅನುದಾನದ ಬೇಡಿಕೆಗಳ ಮಂಡನೆ.

ಬೇಡಿಕೆ ಸಂಖ್ಯೆ:– 8 (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ)

ಅಧ್ಯಕ್ಷರು:– ವಿತ್ತೀಯ ಕಾರ್ಯಕಲಾಪ 2014–15ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮಂಡನೆ, ಚರ್ಚೆ ಹಾಗೂ ಸರ್ಕಾರದ ಉತ್ತರ ಮತ್ತು ಮತಕ್ಕೆ ಹಾಕುವುದು. ಬೇಡಿಕೆ ಸಂಖ್ಯೆ–8 ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ, ಮಾನ್ಯ ಅರಣ್ಯ ಸಚಿವರು ಸಚಿವರು ಪ್ರಸ್ತಾವ ಮಂಡಿಸಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಎಲ್ಲಾ ವಿಷಯಗಳಲ್ಲೂ enquiry ಆಗಲೇಬೇಕಾಗಿದೆ. ದಯವಿಟ್ಟು ಸರ್ಕಾರ ಇವತ್ತು ಘೋಷಣೆ ಮಾಡಬೇಕು. ಇದಕ್ಕೆ ನಮ್ಮ ವಿರೋಧವಿದೆ. ಸರ್ಕಾರದ ಉತ್ತರ ಸಮರ್ಪಕವಾಗಿಲ್ಲ. ಸರ್ಕಾರ ಹಲವಾರು ನ್ಯೂನತೆಗಳ ಬಗ್ಗೆ ಯಾವುದೇ ಉತ್ತರವನ್ನು ಕೊಡದೆ, ಸದನ ಸಮಿತಿ ರಚನೆಗೆ ಸರ್ಕಾರ ಗಮನ ಕೊಡುತ್ತಿಲ್ಲ. ಕರ್ನಾಟಕ ರಾಜ್ಯದ ಹಣಕಾಸನ್ನು ಲೂಟಿ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ 31.3.2015 ರಂದು, ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 08 ಕ್ಕೆ

ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ.

(ಪ್ರಸ್ತಾವವನ್ನು ಮಂಡಿಸಲಾಗಿದೆ)

3) ಬೇಡಿಕೆಸಂಖ್ಯೆ:– 13

ಆಹಾರ ಮತ್ತು ನಾಗರೀಕ ಸರಬರಾಜು.

ಅಧ್ಯಕ್ಷರು:– ವಿತ್ತೀಯ ಕಾರ್ಯಕಲಾಪ 2014–15ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮಂಡನೆ, ಚರ್ಚೆ ಹಾಗೂ ಸರ್ಕಾರದ ಉತ್ತರ ಮತ್ತು ಮತಕ್ಕೆ ಹಾಕುವುದು, ಬೇಡಿಕೆ ಸಂಖ್ಯೆ – 13 ಆಹಾರ ಮತ್ತು ನಾಗರೀಕ ಸರಬರಾಜು, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಪ್ರಸ್ತಾವ ಮಂಡಿಸಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಪಶು ಸಂಗೋಪನಾ ಸಚಿವರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ದಿನಾಂಕ 31.3.2015 ರಂದು, ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 13 ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ.

(ಪ್ರಸ್ತಾವವನ್ನು ಮಂಡಿಸಲಾಗಿದೆ)

ಅಧ್ಯಕ್ಷರು:– ಮಾನ್ಯ ಬೋಪಯ್ಯನವರೆ ಮಾತನಾಡಿ.

(ಗೊಂದಲ)

ಅಧ್ಯಕ್ಷರು:– ನಮ್ಮ ಊರಲ್ಲಿ ಕರೆಂಟ್ ಇಲ್ಲ, ಕಂಬ ಇಲ್ಲ, ಲೈನ್ ಇಲ್ಲ ಎಲ್ಲ ನಿಮ್ಮ ಊರಿನಲ್ಲಿಯೇ ಇರುವುದು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇವತ್ತು ಕರೆಂಟ್ ಸರಿಯಾಗಿ ಸಿಗಬೇಕೆಂದರೆ ಇಲ್ಲಿರುವ ನ್ಯೂನತೆಗಳೆಲ್ಲಾ ಹೊರಗಡೆ ಹೋಗಲೇಬೇಕಾಗಿದೆ. ದಯಮಾಡಿ ಸರ್ಕಾರ ಈ ವಿಷಯವನ್ನು ಲಘುವಾಗಿ ಪರಿಗಣಿಸುವುದು ಬೇಡ.

ಅಧ್ಯಕ್ಷರು:– ನೀವು ಪ್ರಸ್ತಾಪ ಮಾಡಿದ್ದೀರಿ. ಮಂತ್ರಿಗಳು ದೀರ್ಘವಾದ ಉತ್ತರ ಕೊಟ್ಟಿದ್ದಾರೆ. ಅದು ಅವರಿಗೆ ಬಿಟ್ಟಂತಹ ವಿಚಾರ. ನಾವು ಮಧ್ಯದಲ್ಲಿ ಪ್ರವೇಶ ಮಾಡುವುದಕ್ಕಾಗುವುದಿಲ್ಲ. ಉತ್ತರದ ಪ್ರಾರಂಭದಲ್ಲಿಯೇ ಹೇಳಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸರ್ಕಾರ ಸಮರ್ಪಕವಾದ ಉತ್ತರವನ್ನು ಕೊಟ್ಟಿರುವುದಿಲ್ಲ. ಲೂಟಿ ಹೊಡೆಯುವವರಿಗೆ ರಕ್ಷಣೆಯಾಗುತ್ತಿದೆ.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ನೀವು ಮಾನ್ಯ ಸದಸ್ಯರಾದ ಬೋಪಯ್ಯನವರನ್ನು ಕರೆದಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸರ್ಕಾರದ ಖಜಾನೆಯನ್ನು ಸ್ವೇಚ್ಛಾಚಾರವಾಗಿ ಲೂಟಿ ಮಾಡುತ್ತಿದ್ದಾರೆ. ಅದಕ್ಕೆ ರಕ್ಷಣೆಯನ್ನು ಕೊಡುವ ರೀತಿಯಲ್ಲಿ ಸರ್ಕಾರದ ದೋರಣೆಯನ್ನು ಕಾಣುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಎರಡು ಬೇಡಿಕೆಯಿದ್ದು ಅದು ಇವತ್ತೇ ಮುಕ್ತಾಯವಾಗಬೇಕಾಗಿದೆ. ಉತ್ತರ ಹೇಳಿದ್ದಾರೆ ಸಾಕು. ಅದರ ಮೇಲೆ ಸರ್ಕಾರ ಏನು ಆಲೋಚನೆ ಮಾಡುತ್ತದೆ ನೋಡೋಣ. ಜನರಿಗೆ ಗೊತ್ತಾಗುವ ವಿಚಾರಗಳು ಬಹಳಷ್ಟಿವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ದಯಮಾಡಿ ನೀವು ಸಭಾಧ್ಯಕ್ಷರಾಗಿ ಸರ್ಕಾರ ಕೊಟ್ಟಿರುವಂತಹ ಉತ್ತರವೇನಿದೆ, ಹಲವಾರು ವಿಷಯಗಳನ್ನು ನಾವೇನು ಪ್ರಸ್ತಾಪ ಮಾಡಿದ್ದೇವೆ, ರಾಜ್ಯದ ಬೊಕ್ಕಸಕ್ಕೆ ಆಗಿರುವಂತಹ ನಷ್ಟದ ಬಗ್ಗೆ ಸರಿಯಾದ ರೀತಿಯಲ್ಲಿ ಸತ್ಯ ಶೋಧನೆ ಆಗದೇ ಹೋದರೆ ನಾವೆಲ್ಲರೂ ತಪ್ಪಿತಸ್ಥರಾಗುತ್ತೇವೆ. ನಾನು ಈ ಸದನದ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ ಸದನ ಸಮಿತಿಯನ್ನು ರಚನೆ ಮಾಡುವುದಕ್ಕೆ ತೊಂದರೆಯೇನಿದೆ? ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದರಲ್ಲಿ ಆಗಿರುವಂತಹ ಲೋಪಗಳು, ವಿದ್ಯುಚ್ಛಕ್ತಿ ಖರೀದಿಯಲ್ಲಿ ಆಗಿರುವಂತಹ ಹಲವಾರು ರೀತಿಯ ಅಕ್ರಮಗಳು ಜನತೆಯ ಮುಂದೆ ತರದೇ ಹೋದರೆ ಇದೇ ರೀತಿಯ ಸರ್ಕಾರ ನಡೆಸುವುದೇ ನಮ್ಮೆಲ್ಲರ ತೀರ್ಮಾನ ಎನ್ನುವ ಮನೋಭಾವನೆ ಜನರಲ್ಲಿ ಮೂಡುತ್ತದೆ. ಹಠಮಾರಿ ಧೋರಣೆ ಬೇಡವೆಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಸದನ ಸಮಿತಿ ರಚನೆಯಾಗಲೇ ಬೇಕು. ಸದನದ ಕಲಾಪಗಳು ನಡೆಯುವುದಕ್ಕೆ ನಾವು ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು:– ಶಾಸನ ಸಭೆ ನಡೆಯುವ ಕಾರಣದಿಂದ ಅವರು ಆಲೋಚನೆ ಮಾಡುತ್ತಾರೆ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ.:– ನಮ್ಮ ಸರ್ಕಾರದಲ್ಲಿ ಯಾವುದೇ ಲೋಪದೋಷವಾಗಿರುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಕುಮಾರಸ್ವಾಮಿ ಅವರೆ, ಅವಕಾಶ ಮಾಡಿಕೊಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸರ್ಕಾರ ದಯವಿಟ್ಟು ಈ ವಿಷಯದಲ್ಲಿ ರಾಜಕಾರಣ ಮಾಡುವುದು ಬೇಡ.

(ಗೊಂದಲ)

ಅಧ್ಯಕ್ಷರು:– ಇಲ್ಲಿಯವರೆಗೆ ಕೇವಲ ಐದು ಬೇಡಿಕೆಗಳು ಮಾತ್ರ complete ಆಗಿವೆ. ಇನ್ನೂ ಬಹಳಷ್ಟಿವೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸದನ ಸಮಿತಿ ಆಗಲೇಬೇಕು.

ಅಧ್ಯಕ್ಷರು:– ಬೋಪಯ್ಯನವರೆ ಮಾತನಾಡಿ.

ಶ್ರೀ.ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, House is not in order ಹೇಗೆ ಮಾತನಾಡುವುದು?

(ಗೊಂದಲ)

ಅಧ್ಯಕ್ಷರು:– ಬಹಳಷ್ಟು ಬೇಡಿಕೆಗಳು ಇವೆ. ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ. ತೊಂದರೆ ಕೊಡಬೇಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅಧ್ಯಕ್ಷರೆ, ಯಾವುದೇ ಕಾರಣಕ್ಕೂ ಇಂತಹ ವಿಷಯಗಳನ್ನು ಲಘುವಾಗಿ ಪರಿಗಣಿಸಬಾರದು. ರಾಜ್ಯದಲ್ಲಿ ಆಗಿರತಕ್ಕಂತಹ ಹಲವಾರು ರೀತಿಯ ನ್ಯೂನತೆಗಳನ್ನು ಸರಿಪಡಿಸಬೇಕಾದರೆ ಸದನ ಸಮಿತಿ ರಚನೆ ಆಗಲೇಬೇಕು. ಹಠಮಾರಿ ಧೋರಣೆ ಬೇಡವೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಸತ್ಯಾಂಶಗಳು ಹೊರಗಡೆ ಬರಬೇಕು.

ನ್ಯೂನತೆಗಳನ್ನು ಸರಿಪಡಿಸಲೇಬೇಕಾಗುತ್ತದೆ. ಆದ್ದರಿಂದ ಸದನ ಸಮಿತಿ ಮಾಡುವ ಬಗ್ಗೆ ಘೋಷಣೆ ಆಗಲೇಬೇಕು ಎನ್ನುವುದು ನಮ್ಮ ಸ್ಪಷ್ಟವಾದ ಆಗ್ರಹ.

(ಈ ಹಂತದಲ್ಲಿ ಜಾತ್ಯಾತೀತ ಜನತಾದಳದ ಮಾನ್ಯ ಶಾಸಕರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರೂ ಸಹ ಬಾವಿಗೆ ಬಂದರು)

ಅಧ್ಯಕ್ಷರು:– ದಯಮಾಡಿ ಅವಕಾಶ ಕೊಡಿ. ಎಲ್ಲರೂ ತಮ್ಮ ಸ್ಥಾನಕ್ಕೆ ಹೋಗಿ. Demands ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ರೇವಣ್ಣನವರು ಬರುವುದಕ್ಕಿಂತ ಮುಂಚೆ ಎಲ್ಲಾ ಚೆನ್ನಾಗಿಯೇ ನಡೆಯುತ್ತಿತ್ತು. ಅವರು ಬಂದ ಮೇಲೆಯೇ problem ಆಗಿದ್ದು. ಅವರು ಯಾವ ಕಾಲದಲ್ಲಿ ಬಂದರು ಎನ್ನುವುದರ ಬಗ್ಗೆ ತನಿಖೆಯಾಗಬೇಕು.

ಶ್ರೀ ವೈ.ಎನ್. ರುದ್ರೇಶ್‌ಗೌಡ:– ಅವರು ರಾಹುಕಾಲದಲ್ಲಿ ಎಂಟ್ರಿ ಆದರು.

(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿ ಪುನಃ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 12 ಗಂಟೆ 45 ನಿಮಿಷಕ್ಕೆ ಮುಂದೂಡಿ 10 ನಿಮಿಷಗಳ ನಂತರ ಪುನಃ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಕಲಾಪವು 1 ಗಂಟೆ 57 ನಿಮಿಷಕ್ಕೆ ಪ್ರಾರಂಭವಾಯಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು:– ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾದ ಶಾಮನೂರು ಶಿವಶಂಕರಪ್ಪನವರು ಈ ದಿನ ಮಧ್ಯಾಹ್ನ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸದಸ್ಯರುಗಳ ಗೌರವಾರ್ಥ ಭೋಜನ

ಕೂಟವನ್ನು ಏರ್ಪಡಿಸಿದ್ದಾರೆ, ಅದಕ್ಕೆ ತಾವೆಲ್ಲರೂ ಪಾಲ್ಗೊಳ್ಳಬೇಕೆಂದು ವಿನಂತಿಸಿಕೊಳ್ಳಲಾಗಿದೆ.

ಈಗ ಸದನವನ್ನು ಮುಂದೂಡಿ ಊಟವಾದ ನಂತರ ಪುನಃ 3.00 ಗಂಟೆಗೆ ಸೇರಲಾಗುವುದು.

(ಸದನದ ಕಲಾಪವು ಮಧ್ಯಾಹ್ನ 1 ಗಂಟೆ 58 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಊಟವಾದ ನಂತರ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಭೋಜನ ನಂತರ ಮತ್ತೆ ಸಭೆ ಮಧ್ಯಾಹ್ನ 3.08 ಗಂಟೆಗೆ ಸಮಾವೇಶಗೊಂಡಿತು ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಸಭೆಯ ಪ್ರಾರಂಭದಲ್ಲಿ ಜೆಡಿಎಸ್ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಮಾಡುತ್ತಿದ್ದರು)

ಅಧ್ಯಕ್ಷರು:– ಈಗ ಮಾನ್ಯ ಮುಖ್ಯಮಂತ್ರಿಯವರು ಹಾಗೂ ಇಂಧನ ಇಲಾಖೆಯ ಸಚಿವರು in principle ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಮಾನ್ಯ ಇಂಧನ ಸಚಿವರು ಇಲ್ಲೇ ಇದ್ದಾರೆ. ತಾವೇ ಹೇಳುತ್ತಿರಾ......

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ, averse to anuthing. ಈಗ ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆ. ಅವರು ಬಂದು announce ಮಾಡುತ್ತಾರೆ. He will tell his opinion.

ಅಧ್ಯಕ್ಷರು:– ಸದನ ನಡೆಸೋಣ.

(ಸದನದ ಬಾವಿಯಲ್ಲಿ ಜೆಡಿಎಸ್ ಸದಸ್ಯರು ಮಾತನಾಡುತ್ತಿದ್ದರು)

ಶ್ರೀ ಡಿ.ಕೆ. ಶಿವಕುಮಾರ್ :– ಅಯಿತು, ಎಲ್ಲಾ ಮಾತನಾಡಿದ್ದಿರಲ್ಲಾ, ಈಗ ಒಳಗಡೆ ಏನು ಮಾತನಾಡಿದ್ದಾರೋ ಅದನ್ನು ಸಿ.ಎಂ. ಬಂದು ಹೇಳುತ್ತೇನೆಂದು ಹೇಳಿದ್ದಾರೆ. We will definitely tell you. ಬನ್ನಿ ಕೆಲಸ ಮಾಡಿಕೊಳ್ಳೋಣ. Please come, don't worry.

ಅಧ್ಯಕ್ಷರು:– ಮಾಡೋಣ. In principle ಆಗಿದೆ, ಅಯಿತು ಮಾಡೋಣ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಜೆಡಿಎಸ್ ಸದಸ್ಯರು ತಮ್ಮ ಆಸನಗಳಿಗೆ ತೆರಳಿದರು)

ಅಧ್ಯಕ್ಷರು:– ಈಗ ಒಂದು ಪ್ರಕಟಣೆ ಇದೆ.

ಅಧ್ಯಕ್ಷರು:– ಒಂದು ಪ್ರಕಟಣೆ ಇದೆ.

3. ಪ್ರಕಟಣೆ

ದಿನಾಂಕ 14–07–2014ರಂದು ಜರುಗಿದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ:

ಸದನದ ಕಲಾಪಗಳು ಕಾರ್ಯಕ್ರಮದ ಪಟ್ಟಿಯಂತೆ ದಿನಾಂಕ 15–07–2014 ರಿಂದ 30–7–2014ರವರೆಗೆ ಪ್ರತಿದಿನ ಬೆಳಗ್ಗೆ ಹತ್ತು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೆ ನಡೆಯಲಿದೆ. ಅಲ್ಲದೇ, ದಿನಾಂಕ 26–07–2014ರ ಶನಿವಾರವೂ ಸಹ ಸದನದ ಕಾರ್ಯಕಲಾಪಗಳನ್ನು ನಿಗದಿಪಡಿಸಲಾಗಿದೆ. ಪ್ರತಿದಿನ ಉಳಿದ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ನಡೆದು, ಅದೇ ದಿನ ಸಂಜೆ ಸಂಬಂಧಪಟ್ಟ ಮಂತ್ರಿಗಳು ಇಲಾಖಾ ಬೇಡಿಕೆಯ ಮೇಲೆ ಉತ್ತರ ನೀಡಲಿದ್ದು, ನಂತರ ಮತಕ್ಕೆ ಹಾಕಿ ಅಂಗೀಕರಿಸಲಾಗುವುದು. ದಿನಾಂಕ 28–07–2014ರಂದು ಮಾನ್ಯ ಮುಖ್ಯಮಂತ್ರಿಯವರು ಅವರಿಗೆ ಸಂಬಂಧಿಸಿದ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರವನ್ನು ನೀಡಲಿದ್ದು, ಅದೇ ದಿನ ಧನ ವಿನಿಯೋಗ ವಿಧೇಯಕವನ್ನು ಮತಕ್ಕೆ ಹಾಕಿ ಅಂಗೀಕರಿಸಲಾಗುವುದು. ಇದಕ್ಕೆ ಈ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ.

ಅಧ್ಯಕ್ಷರು:– ಈಗ ಕೃಷಿ ಸಚಿವರು ಒಂದು ಹೇಳಿಕೆಯನ್ನು ನೀಡುತ್ತಾರೆ.